21 May 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಪ್ರಬುದ್ಧತೆಗೆ ಏಕೆ ಇಷ್ಟು ಮಹತ್ವ ನೀಡುತ್ತೇವೆ ಎಂದರೆ, ಪ್ರಬುದ್ಧತೆ ಕಲಿಕೆಯಿಂದ ಬರುವುದಿಲ್ಲ ಅನುಭವದಿಂದ ಮಾತ್ರ ಬರುತ್ತದೆ!

» ಸ್ನೇಹಾ ಆನಂದ್

info.varthaman@gmail.com



ಜ್ಞಾನ ಸಂಪತ್ತಿನ ಸಂರಕ್ಷಣೆಗೆ ಅಗತ್ಯ: ಡಾ. ಕುಮಾರ — ಪುಟ ಸಂ. 2



ಯತೀಂದ್ರರ ಕೈವಾಡದಿಂದಲೇ ನನ್ನ ವಿರುದ್ಧ ದೂರು: ವಿಶ್ವನಾಥ್ — ಪುಟ ಸಂ. 2



ಸಾಧಕರ ಹಾದಿ ಪ್ರೇರಣೆ: ಮಂಜೇಗೌಡ — ಪುಟ ಸಂ. 3

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 176 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಆ.31ರೊಳಗೆ ಜಿಬಿಎ ಚುನಾವಣೆ

### ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗಡುವು



**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದೂ ಪಾಲಿಕೆಗಳಿಗೆ ಆಗಸ್ಟ್ 31ರ ಒಳಗೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ಗಡುವು ವಿಧಿಸಿದೆ.

ಸೆಪ್ಟೆಂಬರ್ ಅಂತ್ಯದ ವರೆಗೆ ಕಾಲಾವಕಾಶ ಕೋರಿ ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗ ಮನವಿ ಸಲ್ಲಿಸಿದ್ದವು. ಮನವಿ ಆಲಿಸಿದ ಸಿಜೆಐ ಅವರನ್ನು ಒಳಗೊಂಡ ನ್ಯಾಯಪೀಠ ಈ ಆದೇಶ ನೀಡಿದೆ.

ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಎರಡು ಪ್ರತ್ಯೇಕ ಅರ್ಜಿಗಳಲ್ಲಿ, ರಾಜ್ಯ ಸರ್ಕಾರದ ಸಿಬ್ಬಂದಿ ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್), ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಂಡಳಿ ಪರೀಕ್ಷೆಗಳು ಇತ್ಯಾದಿಗಳಲ್ಲಿ ನಿರತರಾಗಿದ್ದಾರೆ. ಹೀಗಾಗಿ, ಜೂನ್ 30ರಿಂದ ಅನ್ವಯ ವಾಗುವಂತೆ ಹೆಚ್ಚುವರಿ ಮೂರು ತಿಂಗಳ ಸಮಯ ನೀಡಬೇಕು ಎಂದು ಮನವಿ ಮಾಡಿದ್ದವು. ಜೂನ್ 30ರೊಳಗೆ ಚುನಾವಣೆಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿದ್ದ ಸುಪ್ರೀಂ ಕೋರ್ಟ್ನ ಜನವರಿ 12ರ ಆದೇಶವನ್ನು ಮಾರ್ಪಡಿಸುವಂತೆ ಮನವಿ ಮಾಡಲಾಗಿತ್ತು.

ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆಗಳನ್ನು ಪೂರ್ಣಗೊಳಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಪುಟ 2ಕ್ಕೆ

# ತೆರೆದ ವಾಹನ ಸಫಾರಿ ಬಂದ್

## ಸುರಕ್ಷಿತ ಬಸ್ ಬಳಕೆ: ಸಚಿವ ಈಶ್ವರ ಖಂಡ್ರೆ ಆದೇಶ



**ಬೆಂಗಳೂರು:** ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳಲ್ಲಿ ತೆರೆದ ಕ್ಯಾಂಪರ್‌ನಲ್ಲಿ ಸಫಾರಿಯನ್ನು ನಿಷೇಧ ಮಾಡಲಾಗಿದೆ. ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಕಾನನಗಳಲ್ಲಿ ಸಫಾರಿ ನಡೆಯುತ್ತಿದೆ. ಇಲ್ಲಿ ಇನ್ಮುಂದೆ ಮುನ್ನೆಚ್ಚರಿಕೆ ಕ್ರಮವಾಗಿ ಜೀಪ್ ನಲ್ಲಿ ಸಫಾರಿ ಮಾಡುವಂತಿಲ್ಲ.

ದುಬಾರೆ ಆನೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಅರಣ್ಯ ಸಚಿವರು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳ ಸಫಾರಿಗೆ ರಾಜ್ಯವಲ್ಲದೆ ದೇಶ ವಿದೇಶಗಳಿಂದಲೂ ಪ್ರವಾಸಿಗರು, ವನ್ಯಜೀವಿ ಪ್ರಿಯರು ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆಗಳು, ಹುಲಿಗಳು ಸೇರಿದಂತೆ ಯಾವುದೇ ವನ್ಯಮೃಗಗಳು ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆಗಳು ಸಂಭವಿಸಿಲ್ಲ. ಆದರೂ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ಸಚಿವ ಖಂಡ್ರೆ ಸೂಚನೆಯಲ್ಲಿ ತಿಳಿಸಿದ್ದಾರೆ.

### ಅಂಬುಲೆನ್ಸ್ ಖಾತ್ರಿ ಕಡ್ಡಾಯ



ಸಫಾರಿ ನಡೆಯುವ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶ, ವನ್ಯಜೀವಿಧಾಮಗಳು ಮತ್ತು ಆನೆ ಶಿಬಿರಗಳಲ್ಲಿ ಪ್ರವಾಸಿಗರಿಗೆ ಅಂಬುಲೆನ್ಸ್ ಅನ್ನು ಕಡ್ಡಾಯವಾಗಿ ಕಾಯ್ದಿರಿಸಬೇಕು ಎಂದು ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

ಯಾವುದೇ ಪ್ರವಾಸಿಗರು ಅರಣ್ಯದೊಳಗೆ ಇಳಿಯಲು ಅವಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀಪದಲ್ಲಿ ಅಂಬುಲೆನ್ಸ್ ವಾಹನ ಇರುವುದನ್ನು ಖಾತ್ರಿಪಡಿಸಿಕೊಳ್ಳುವಂತೆಯೂ ಸೂಚಿಸಿದ್ದಾರೆ. ಸಫಾರಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ತೆರೆದ ಕ್ಯಾಂಪರ್ ವಾಹನಗಳ ಬದಲಿಗೆ ಸಂಪೂರ್ಣ ಸುರಕ್ಷಿತವಾದ ಬಸ್ ಸಫಾರಿಗೆ ಹೆಚ್ಚಿನ ಆದ್ಯತೆ ನೀಡಿ. ಹಾಲಿ ಬಳಕೆಯಲ್ಲಿರುವ ಕ್ಯಾಂಪರ್‌ಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿಗಳನ್ನು ಅಥವಾ ಒಡೆಯಲಾಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮ ವಹಿಸಿ ಎಂದು ಸಚಿವರು ಆದೇಶಿಸಿದ್ದಾರೆ.

## 35 ಕೋಟಿ ಬೆಲೆ ಡ್ರಗ್ಸ್ ವಶ: 8 ಮಂದಿ ಬಂಧನ

**ಬೆಂಗಳೂರು:** ನಿಷೇಧಿತ ಮಾದಕ ವಸ್ತು ಎಂಡಿಎಂಎ ಅನ್ನು ಮಾರಾಟ ಮಾಡುತ್ತಿದ್ದ ಮೂವರು ವಿದೇಶಿ ಪ್ರಜೆಗಳು ಸೇರಿದಂತೆ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಬಂಧಿತರಿಂದ ಪೊಲೀಸರು 17.5 ಕೆಜಿ ಎಂಡಿಎಂಎ ಮತ್ತು ಎರಡು ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ. ವಶ



ಪಡಿಸಿಕೊಂಡ ಅಕ್ರಮ ಸರಕುಗಳಿಗೆ ಕಾಳ ಸಂತೆಯಲ್ಲಿ 35 ಕೋಟಿ ಪುಟ 2ಕ್ಕೆ

## ಕೇರಳದಲ್ಲಿ ಸಚಿವರ ಭಿನ್ನಮತ?

### ಖರ್ಗೆ ಸಲಹೆಗೆ ಮನ್ನಣೆ ನೀಡದ ಸಿಎಂ ಸತೀಶನ್



**ತಿರುವನಂತಪುರ:** ಕೇರಳ ನೂತನ ಸರ್ಕಾರದಲ್ಲಿ ಖಾತೆ ಹಂಚಿಕೆ ಬೆನ್ನಲ್ಲೇ ಭಿನ್ನಮತ ಬಹಿರಂಗಗೊಂಡಿದೆ. ಸಚಿವ ಸಂಪುಟದಲ್ಲಿ ಹಿಂದುಳಿದ ವರ್ಗ ಮತ್ತು ದಲಿತ ಸಮುದಾಯಗಳಿಗೆ ಪ್ರಮುಖ ಖಾತೆಗಳನ್ನು ನೀಡಲಾಗಿಲ್ಲ ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ವಿರುದ್ಧ ಅಸಮಾಧಾನ ಭುಗಿಲೆದ್ದಿದೆ ಎನ್ನಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿದ ಖಾತೆ ಹಂಚಿಕೆ ಸಲಹೆಯನ್ನು ಸಿಎಂ ವಿ.ಡಿ.ಸತೀಶನ್ ನಿರಾಕರಿಸಿದ್ದಾರೆಂದು ತಿಳಿದುಬಂದಿದೆ. ಈ ಬೆಳವಣಿಗೆ ಪಕ್ಷದೊಳಗಿನ ಭಿನ್ನಮತವನ್ನು ಬಹಿರಂಗಪಡಿಸಿದೆ.

ಸಾಮಾಜಿಕ ನ್ಯಾಯ ಮತ್ತು ಸಮಾವೇಶಿತ ಆಡಳಿತದ ಕುರಿತು ಪಕ್ಷ ನೀಡಿದ್ದ ಭರವಸೆಗಳಿಗೆ ಇದು ವಿರುದ್ಧವಾಗಿದೆ ಎಂದು ಕೆಲವು ನಾಯಕರು ಆರೋಪಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಕೆಲವು ಸಚಿವರಿಗೆ ನೀಡಲಾದ ಕಡಿಮೆ ಮಹತ್ವದ ಖಾತೆಗಳ ಬಗ್ಗೆ ಆಕ್ಷೇಪ ಎತ್ತಿದ್ದಾರೆ ಎನ್ನಲಾಗಿದೆ.

ಆದರೆ, ಮುಖ್ಯಮಂತ್ರಿ ಸತೀಶನ್ ತಮ್ಮ ನಿಲುವಿನಲ್ಲಿ ದೃಢವಾಗಿ ನಿಂತು ಖರ್ಗೆ ಅವರ ಸಲಹೆಯನ್ನು ಒಪ್ಪದೆ ಮುಂದುವರಿದಿದ್ದಾರೆ ಎಂದು ತಿಳಿದುಬಂದಿದೆ.

## ಕೆರೆಯಲ್ಲಿ ಮುಳುಗಿ ಯುವಕ ಸಾವು



**ಮೈಸೂರು:** ಮೀನು ಹಿಡಿಯಲು ಹೋದ ಬಿಹಾರ ಮೂಲದ ಯುವಕ ಸಾವನ್ನಪ್ಪಿದ ಘಟನೆ ಗದ್ದಿಗೆ–ಬೋಗಾದಿ ಮುಖ್ಯರಸ್ತೆಯ ಹೆಮ್ಮನಹಳ್ಳಿಯ ಚಿಕ್ಕ ಕೆರೆಯಲ್ಲಿ ನಡೆದಿದೆ.

ಕೆರೆಯಲ್ಲಿ ಮೀನು ಹಿಡಿಯಲು ಮೂವರು ತೆರಳಿದ್ದರು. ಈ ವೇಳೆ ನೀರಿನಲ್ಲಿ ಮುಳುಗಿ ಬಿಹಾರ ಮೂಲದ ಒಬ್ಬರು ಸಾವನ್ನಪ್ಪಿದ್ದಾರೆ. ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೃತದೇಹಕ್ಕಾಗಿ ಅಗ್ನಿಶಾಮಕದಳ ಸಿಬ್ಬಂದಿ ಹುಡುಕಾಟ ಕೈಗೊಂಡಿದ್ದಾರೆ.

## 1,850 ಗ್ರಾಂ ಚಿನ್ನಾಭರಣ ಲೂಟಿ

### ಹೋಲ್‌ಸೇಲ್ ಬೆಲೆಯಲ್ಲಿ ಚಿನ್ನ ಖರೀದಿಸುವುದಾಗಿ ವಂಚನೆ

**ಬೆಂಗಳೂರು:** ಹೋಲ್‌ಸೇಲ್ ಬೆಲೆಯಲ್ಲಿ ಚಿನ್ನ ಖರೀದಿಸುವುದಾಗಿ ನಂಬಿಸಿ ಸುಮಾರು 3 ಕೋಟಿ ರೂ. ಮೌಲ್ಯದ 1 ಕೆಜಿ 850 ಗ್ರಾಂ ಚಿನ್ನಾಭರಣವನ್ನು ದೋಚಿ ಪರಾರಿಯಾದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಪರೇಶ್ ಸೋನಿ ಎಂಬಾತ ತಾನು ಹೋಲ್‌ಸೇಲ್ ಚಿನ್ನದ ವ್ಯಾಪಾರಿ ಎಂದು ಪರಿಚಯಿಸಿಕೊಂಡು 3 ಕೆಜಿ ಚಿನ್ನದ ಆಭರಣ ಬೇಕೆಂದು ಅಂಗಡಿಗೆ ಕರೆ ಮಾಡಿದ್ದ. ಬಳಿಕ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ತನ್ನ ಕಚೇರಿಗೆ ಆಭರಣಗಳ ಸ್ಯಾಂಪಲ್ ತೆಗೆದುಕೊಂಡು ಬರುವಂತೆ ಸೂಚಿಸಿದ್ದ. ಅದರಂತೆ ಮಹೇಂದ್ರ ಕುಮಾರ್ ಜೈನ್ ಹಾಗೂ ಮತ್ತೊಬ್ಬ ಸಿಬ್ಬಂದಿ 3 ಕೆಜಿ ವಿವಿಧ ವಿನ್ಯಾಸದ ಚಿನ್ನಾಭರಣಗಳನ್ನು ತೆಗೆದುಕೊಂಡು ಆರೋಪಿಯ ಕಚೇರಿಗೆ ತೆರಳಿದ್ದರು.

ಈ ವೇಳೆ ಪರೇಶ್ ಸೋನಿಯು ಚಂದ್ರಶೇಖರ್ ಮತ್ತು ಶ್ಯಾಮ್ ಎಂಬುವವರನ್ನು ಮಹೇಂದ್ರ ಅವರಿಗೆ ಪರಿಚಯ ಮಾಡಿಸಿದ್ದ. ಡಿಸೈನ್ ನೋಡುವ ನೆಪದಲ್ಲಿ 1 ಕೆಜಿ 850 ಗ್ರಾಂ ತೂಕದ ಚಿನ್ನಾಭರಣಗಳನ್ನು ತೆಗೆದುಕೊಂಡ ಚಂದ್ರಶೇಖರ್ ರಾವ್ ಅಲ್ಲಿಂದ ಪರಾರಿಯಾಗಿದ್ದಾನೆ. ಚಂದ್ರ



ಶೇಖರ್‌ನನ್ನು ಹುಡುಕುವುದಾಗಿ ಹೇಳಿ ಜೊತೆಗಿದ್ದ ಇನ್ನಿಬ್ಬರು ಆರೋಪಿಗಳು ಕೂಡ ಪರಾರಿ ಆಗಿದ್ದಾರೆ.

ಕಳವಾಗಿರುವ ಚಿನ್ನಾಭರಣಗಳ ಮೌಲ್ಯ ಅಂದಾಜು 3 ಕೋಟಿ ರೂ. ಎಂದು ಹೇಳಲಾಗಿದೆ. ಆರೋಪಿಗಳು ಪೂರ್ವಯೋಜಿತವಾಗಿ ಮೋಸ ಮಾಡಿ ಚಿನ್ನಾಭರಣ ಕಳ್ಳತನ ಮಾಡಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ಈ ಸಂಬಂಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಮೂವರ ಎಫ್‌ಐಆರ್ ದಾಖಲಾಗಿದೆ.

## ವೈಮಾನಿಕ ಕ್ಷೇತ್ರದಲ್ಲಿ 6 ಸಾವಿರ ಕೋಟಿ ಹೂಡಿಕೆ

### ರಾಜ್ಯದಲ್ಲಿ 74 ಸಾವಿರ ಉದ್ಯೋಗ ಸೃಷ್ಟಿ | ಸಚಿವ ಎಂ.ಬಿ.ಪಾಟೀಲ್ ಮಾಹಿತಿ

**ಬೆಂಗಳೂರು:** ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಬೆಂಗಳೂರು ಮೂಲದ ಆಕ್ಸಿಸ್‌ಕೇಡ್ಸ್ ಏರೊಸ್ಪೇಸ್ ಇನ್ ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ರಾಜ್ಯದಲ್ಲಿ 6,000 ಕೋಟಿ ರೂ. ಬಂಡವಾಳ ಹೂಡಿಕೆಗೆ ಮುಂದಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.



ಕಂಪನಿಯ ಉನ್ನತಾಧಿಕಾರಿಗಳ ಜೊತೆಗೆ ಬುಧವಾರ ನಡೆದ ವಿಸ್ತೃತ ಸಮಾಲೋಚನೆ ನಂತರ ಸಚಿವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ಕಂಪನಿಯು ಹಂತ ಹಂತವಾಗಿ 6,000 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ ಪ್ರತ್ಯಕ್ಷವಾಗಿ 20 ಸಾವಿರ ಹಾಗೂ ಪರೋಕ್ಷವಾಗಿ 54 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಕ್ಷಿಪಣಿ ತಯಾರಿಕೆಯ ಪೂರಕ ಸೌಲಭ್ಯ, ರೇಡಾರ್–ಸಂವೇದಕ, ಯುದ್ಧ ವಿಮಾನಗಳ ದುರಸ್ತಿ, ನಿರ್ವಹಣೆ ಸೌಲಭ್ಯ (ಎಂಆರ್‌ಒ) ಸೇರಿದಂತೆ ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಉದ್ದೇಶಿಸಿದೆ. ಮೊದಲ ಹಂತದಲ್ಲಿ 1,290 ಕೋಟಿ ರೂ., 2ನೇ ಹಂತದಲ್ಲಿ 2,898 ಕೋಟಿ ರೂ. ಮತ್ತು 3ನೇ ಹಂತದಲ್ಲಿ 1,512 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ ಎಂದು ಸಚಿವರು ವಿವರಿಸಿದರು.

200 ಎಕರೆ ಪ್ರದೇಶದಲ್ಲಿ ವೈಮಾಂತರಿಕ್ಷ, ರಕ್ಷಣೆ, ಸೆಮಿಕಂಡಕ್ಟರ್ ಹಾಗೂ ಕೃತಕ ಬುದ್ಧಿಮತ್ತೆ, ನಾವೀನ್ಯತೆ ಕ್ಷೇತ್ರಗಳಲ್ಲಿ ಉತ್ಪಾದನೆ, ಪರೀಕ್ಷೆ ಮತ್ತು ನಿರ್ವಹಣೆಯ ಸಮಗ್ರ ಕೇಂದ್ರ ಸ್ಥಾಪಿಸುವುದು ಆಕ್ಸಿಸ್‌ಕೇಡ್ಸ್ ಏರೊಸ್ಪೇಸ್‌ನ ಮುಖ್ಯ ಉದ್ದೇಶ. ಜಾಗತಿಕ ಪಾಲುದಾರಿಕೆಯಡಿ ದೇಶೀಯವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಲಿದೆ ಎಂದು ಸಚಿವರು ಹೇಳಿದರು.

ಈ ಯೋಜನೆಗೆ ಕಂಪನಿಯು ದೇವನಹಳ್ಳಿ ಬಳಿ ಭೂಮಿ ಒದಗಿಸಲು ಮನವಿ ಮಾಡಿದೆ. 1.8 ಕಿ.ಮೀ ಉದ್ದದ ರನ್ ವೇ ನಿರ್ಮಾಣದ ಉದ್ದೇಶ ಕೂಡ ಇದೆ ಎಂದು ಕಂಪನಿ ಹೇಳಿದೆ. ಹಾಸನ, ವಿಜಯಪುರ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣಗಳನ್ನು ಬೇಕಾದರೂ ಪರಿಗಣಿಸಬಹುದು ಎಂದು ಸಲಹೆ ನೀಡಿದ್ದಾರೆ. ಪುಟ 2ಕ್ಕೆ

## ರಾಜ್ಯದಲ್ಲಿ ಇಡೀ ವಾರ ಮಳೆ


**ಬೆಂಗಳೂರು:** ರಾಜ್ಯದಾದ್ಯಂತ ಮುಂದಿನ 7 ದಿನಗಳ ಕಾಲ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚಿಸಿದೆ. ಮೇ 20ರಿಂದ 26ರವರೆಗೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಗದಗ, ಹಾವೇರಿ ಹಾಗೂ ಬಾಗಲಕೋಟೆ ಜಿಲ್ಲೆಗಳ ಕೆಲವೆಡೆ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ಮಳೆ ಜೊತೆಗೆ ಬಿರುಗಾಳಿ ಬೀಸಲಿದೆ ಎಂದು ಇಲಾಖೆ ತಿಳಿಸಿದೆ.

## ಸಂವಿಧಾನ ರಕ್ಷಣೆಗೆ ಹೋರಾಡಬೇಕಿದೆ: ರಾಹುಲ್

**ರಾಯ್‌ಬರೇಲಿ:** ಮಹಾತ್ಮ ಗಾಂಧಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಧ್ವನಿಯನ್ನು ಪ್ರತಿನಿಧಿಸುತ್ತಿರುವ ದೇಶದ ಸಂವಿಧಾನದ ಮೇಲೆ ದಾಳಿ ನಡೆಯುತ್ತಿದೆ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.



ಸ್ವಕ್ಷೇತ್ರ ರಾಯ್‌ಬರೇಲಿಯಲ್ಲಿ ಮಾತನಾಡಿದ ಅವರ, ದೇಶದ ಮಹಾನ್ ನಾಯಕರ ಸಿದ್ಧಾಂತವನ್ನು ರಕ್ಷಿಸಲಾಗುತ್ತಿಲ್ಲ. ಏಕೆಂದರೆ ನಮ್ಮ ಕಣ್ಣ ಮುಂದೆಯೇ ಸಂವಿಧಾನದ ಮೇಲೆ ದಾಳಿ ನಡೆಯುತ್ತಿದೆ. ಸಂವಿಧಾನದ ರಕ್ಷಣೆಗಾಗಿ ಹೋರಾಡಬೇಕು ಎಂದು ಕರೆ ನೀಡಿದರು.

ದೇಶದ ವೆಚ್ಚದಲ್ಲಿ ಅಂಬಾನಿ, ಅದಾನಿಯಂತಹ ದೊಡ್ಡ ಕೈಗಾರಿಕೋದ್ಯಮಿಗಳ ಹಿತಾಸಕ್ತಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

## ಉಗ್ರನಿಗೆ 7 ವರ್ಷ ಜೈಲು

**ಬೆಂಗಳೂರು:** ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿದ್ದ ಮಹಾರಾಷ್ಟ್ರದ ಹಮ್ರಾಜ್ ವೋರ್ಷಿದ್ ಶೇಖ್ ಗೆ ಬೆಂಗಳೂರಿನ ರಾಷ್ಟ್ರೀಯ ತನಿಖಾ ಸಂಸ್ಥೆಯ ವಿಶೇಷ ನ್ಯಾಯಾಲಯ ನಿಷೇಧಿತ ದೋಷಿ ಎಂದು ತೀರ್ಪು ನೀಡಿದೆ. ಉಗ್ರನಿಗೆ 7 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು 63,000 ದಂಡ ವಿಧಿಸಿ ತೀರ್ಪು ನೀಡಿದೆ.

ತಾಲಿಬಾನ್ ಮತ್ತು ತೆಹ್ರಿಕ್–ಇ–ತಾಲಿಬಾನ್ ಪಾಕಿಸ್ತಾನಕ್ಕೆ ಸಂಬಂಧಿಸಿದ ಭಯೋತ್ಪಾದನೆ ಮತ್ತು ನೇಮಕಾತಿ ಪ್ರಕರಣದಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಮಹಾರಾಷ್ಟ್ರ ನಿವಾಸಿ ಹಮ್ರಾಜ್ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದನು. ಈ ಪ್ರಕರಣವು ಜಿಹಾದಿ ಮತ್ತು ಭಯೋತ್ಪಾದಕ ಚಟುವಟಿಕೆಗಳ ಹರಡುವಿಕೆ ಮತ್ತು ಭಾರತದಲ್ಲಿ ತಾಲಿಬಾನ್ ಸಂಬಂಧಿತ ಉದ್ದೇಶ




ಗಳನ್ನು ಬೆಂಬಲಿಸಲು ದುರ್ಬಲ ಯುವಕರನ್ನು ನೇಮಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಲಾಗುತ್ತಿತ್ತು ಎಂದು ಹೇಳಿದ್ದನು.

ಎನ್‌ಐಎ ವಿಶೇಷ ನ್ಯಾಯಾಲಯ ಹಮ್ರಾಜ್‌ಗೆ ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ ಅಡಿಯಲ್ಲಿ ತಪ್ಪಿತಸ್ಥನೆಂದು ತೀರ್ಪು ನೀಡಿದೆ. ಐಪಿಸಿ ಸೆಕ್ಷನ್ 120ಬಿ ಮತ್ತು 121ಎ ಅಡಿಯಲ್ಲಿ ಏಳು ಪುಟ 2ಕ್ಕೆ

## ಸಾಲ ವಾಪಸ್ ಕೇಳಿದರೆ ಹಲ್ಲೆ: ವಿಶ್ವನಾಥ್ ವಿರುದ್ಧ ಎಫ್‌ಐಆರ್

**ಮೈಸೂರು:** ಸಾಲದ ಹಣ ಕೇಳಲು ಹೋದ ವ್ಯಕ್ತಿ ಮೇಲೆ ಹಲ್ಲೆ ಮಾಡಿದ ಆರೋಪದಲ್ಲಿ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಿರುದ್ಧ ನ್ಯಾಯಾಲಯದ ಆದೇಶದ ಮೂಲಕ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಶ್ವನಾಥ್ ಸಂಸದರಾಗಿದ್ದ ಸಂದರ್ಭ 2013ರಲ್ಲಿ ಎಂಟಿಬಿ ನಾಗರಾಜ್ ಮೂಲಕ ವಿಶ್ವನಾಥ್ ಹಾಗೂ ಮಗ ಅಮಿತ್ ದೇವರಹಟ್ಟಿ ಅವರಿಗೆ 55 ಲಕ್ಷ ಹಣ ನೀಡಿದ್ದೆ. ಹಣ ಹಿಂದಿರುಗಿಸದೆ ವಿಶ್ವನಾಥ್ ಸತಾಯಿಸುತ್ತಿದ್ದರು. ಹೀಗಾಗಿ ಇದೇ ಫೆಬ್ರವರಿ 21ರಂದು ಮಧ್ಯಾಹ್ನ ಅವರು ಜಲದರ್ಶಿನಿ ಅಥಿತಿಗೃಹದಲ್ಲಿ ಇದ್ದಾಗ ಹಣ ಕೇಳಲು ಹೋಗಿದ್ದೆ. ಅಲ್ಲಿ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆಂದು ಕಾಂಗ್ರೆಸ್ ಮುಖಂಡ ಕೋಟೆ ಹುಂಡಿ ಮಹದೇವ್ ದೂರಿ ಸಲ್ಲಿಸಿದ್ದರು.

ದೇವರಾಜ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪುಟ 2ಕ್ಕೆ

## ಚಿನ್ನಾಭರಣ ವಂಚನೆ ಹಗರಣ: 200ಕ್ಕೂ ಹೆಚ್ಚು ದೂರು ದಾಖಲು

**ಮೈಸೂರು:** ಚಿನ್ನಾಭರಣವನ್ನು ಮಾರುಕಟ್ಟೆ ದರದಲ್ಲಿ ನಾವು ಕೊಳ್ಳುತ್ತೇವೆ ಎಂದು ಜಾಹೀರಾತು ನೋಡಿ ಮೋಸ ಹೋದ ಬಹುಕೋಟಿ ಹಗರಣ ಈಗ ರಾಜ್ಯಕ್ಕೆ ವ್ಯಾಪಿಸಿದೆ. ನಾಲ್ಕೇ ದಿನದಲ್ಲಿ ಮೈಸೂರು ನಗರ ಅಪರಾಧ ವಿಭಾಗದಲ್ಲಿ (ಸಿಸಿಬಿ) 200ಕ್ಕೂ ಹೆಚ್ಚು ದೂರು ದಾಖಲಾಗಿವೆ.

ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಹಾಗೂ ಆತನಿಗೆ ಸಂಬಂಧಿಸಿದ ಎಸ್‌ಡಿಜೆ ಗೋಲ್ಡ್ ಕಂಪನಿ, ಡಿಜಿ ಎಫ್ ಗೋಲ್ಡ್ ಅಂಡ್ ಡೈಮಂಡ್ಸ್ ಹಾಗೂ ಧನ ಗಣಪತಿ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಮೈಸೂರು ಮಾತ್ರವಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ 200ಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ಭಾರೀ ವಂಚನೆ ಆರೋಪ ಕೇಳಿ ಬಂದಿದೆ.

ಚಿನ್ನ ಖರೀದಿ ವಿಚಾರದಲ್ಲಿ ಮೈಸೂರಿನ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಎಂಬಾತ ನೂರಾರು ಜನರಿಗೆ ವಂಚಿಸಿದ್ದಾನೆ. ಇದರಿಂದ ಮೋಸ ಹೋದ ಮಂದಿ ಪೊಲೀಸರಿಗೆ ದೂರು ನೀಡಿದ್ದಾರೆ.

ದಾವಣಗೆರೆ ಮೂಲದ ಹೆಚ್.ಮಹಾಂತೇಶ್ ನೀಡಿದ ದೂರಿನ ಆಧಾರದ ಮೇಲೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಸೌಂದರ್ ರಾಜ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಏಪ್ರಿಲ್ 29ರಂದು ಸಿಸಿಬಿ ಅಧಿಕಾರಿಗಳು ಆರೋಪಿಯನ್ನು ಬಂಧಿಸಿದ್ದರು. ಈ ಪ್ರಕರಣವನ್ನು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳಡಿ, ವಂಚನೆ ಹಾಗೂ ನಂಬಿಕೆ ದ್ರೋಹ ಆರೋಪಗಳೊಂದಿಗೆ ದಾಖಲಿಸಲಾಗಿದೆ. ಪ್ರಸ್ತುತ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಮೇ 16ರಂದು ಮೈಸೂರು ನಗರ ಪೊಲೀಸರು ಸಾರ್ವಜನಿಕರಿಗೆ ಪ್ರಕಟಣೆ ನೀಡಿ, ತನಿಖೆಗೆ ಸಹಕಾರ ನೀಡಲು ಸಂಬಂಧಿತ ದಾಖಲೆಗಳೊಂದಿಗೆ ಸಿಸಿಬಿ ಕಚೇರಿಯನ್ನು ಸಂಪರ್ಕಿಸುವಂತೆ ಮನವಿ ಮಾಡಿದ್ದರು.

ಧನ ಗಣಪತಿ ಫೈನಾನ್ಸ್ ಸಂಸ್ಥೆಯ ಮಾಲೀಕ ಸೌಂದರ್ ರಾಜ್ ವಿರುದ್ಧ ಗ್ರಾಹಕರಿಗೆ ಚಿನ್ನಾಭರಣಗಳನ್ನು ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ಹಾಗೂ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವುದಾಗಿ ನಂಬಿಸಿ ವಂಚನೆ ಮಾಡಿದ ಆರೋಪ ಕೇಳಿಬಂದಿದೆ. ಆರೋಪಿ ಪುಟ 2ಕ್ಕೆ

# ಎಚ್‌ಡಿಕೆಗೆ ಡಿ.ಕೆ.ಶಿವಕುಮಾರ್ ಪಂಥಾಹ್ವಾನ

## ಬಿಡದಿ ಟೌನ್‌ಶಿಪ್ ಚರ್ಚೆಗೆ ಸಿದ್ಧ: ಡಿಕೆಶಿ | ಅಸಂಬದ್ಧ ಪದ ಬಳಕೆ ಮಾಡಲ್ಲ

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಪಂಥಾಹ್ವಾನವನ್ನು ನಾನು ಸ್ವೀಕರಿಸಿದ್ದೇನೆ. ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ಸಾರ್ವಜನಿಕವಾಗಿ ಚರ್ಚೆಗೆ ಸಿದ್ಧ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದಾರೆ.

ಬಿಡದಿ ಟೌನ್‌ಶಿಪ್ ವ್ಯಾಪ್ತಿಯ ರೈತರ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದ ಸ್ಥಳದಲ್ಲಿ ನಾನು ಚರ್ಚೆಗೆ ರೆಡಿ. ರೈತರು ನಾವೂ ಬರುತ್ತೇವೆ ಎಂದಿದ್ದಾರೆ. ಪಾಪ ರೈತರು ಬೇಡ. ಅವರು 3 ದಿನ ಮೊದಲೇ ಹೇಳಲಿ. ಅಸಂಬದ್ಧ ಪದ ಬಳಸದೆ ನಾನು ಅವರ ಜೊತೆ ಮಾತನಾಡುತ್ತೇನೆ. ಬಂಡೆಯನ್ನು ಸ್ಟೀಲ್ ಅಲ್ವಾ ಒಡೆಯೋದು, ಅವರು ದಂಡು ದಾಳಿ ಕರೆದುಕೊಂಡು ಬರಲಿ ಎಂದು ತಿರುಗೇಟು ನೀಡಿದರು.

ಕುಮಾರಸ್ವಾಮಿ ಅವರು ಉಕ್ಕು–ಕಬ್ಬಿಣ ಸಚಿವರಲ್ಲವೇ? ಕಬ್ಬಿಣ ಮತ್ತು ಸಿಮೆಂಟ್ ರೇಟ್ ಜಾಸ್ತಿ ಆಗಿದೆ. ಕಡಿಮೆ ಮಾಡಿಸಲಿ ಎಂದು ರೈತರು ಕೇಳುತ್ತಿದ್ದಾರೆ.



ಅವರಿಗೆ ತಿಳಿಸಿ ಅಂತ ರೈತರು ನನಗೆ ಹೇಳಿದ್ದಾರೆಂದು ಲೇವಡಿ ಮಾಡಿದರು.

ಟೌನ್‌ಶಿಪ್‌ಗೆ ನೈಸ್ ರೋಡ್, ಕನಕಪುರ ರೋಡ್ ಕನೆಕ್ಟ್ ಮಾಡುತ್ತೇವೆ. ಟೌನ್ ಶಿ ಪ್ ಹೇಗೆ ಬರುತ್ತದೆ ಎಂದು ಮುಂದಿನ ದಿನಗಳಲ್ಲಿ ತಿಳಿಸುತ್ತೇವೆ. ಸಭೆಗೆ ಗ್ರೇಟರ್ ಬೆಂಗಳೂರು ಟೌನ್ ಶಿಪ್ ರೈತರು ಬಂದಿದ್ದರು. ನಾನು ಪರಿಹಾರ ಘೋಷಣೆ ಮಾಡಿದ್ದಕ್ಕೆ ಶೇ.80ರಷ್ಟು ರೈತರು ಒಪ್ಪಿದ್ದಾರೆ. ಆದಷ್ಟು ಬೇಗ ಪುಟ 2ಕ್ಕೆ

### ಯೋಜನೆಗೆ ಶೇ.80ರಷ್ಟು ರೈತರ ಒಪ್ಪಿಗೆ: ಡಿಕೆಶಿ

**ಬೆಂಗಳೂರು:** ರಾಮನಗರ ಬಳಿಯ ಬಿಡದಿಯಲ್ಲಿ ಪ್ರಸ್ತಾವಿತ ಗ್ರೇಟರ್ ಬೆಂಗಳೂರು ಟೌನ್‌ಶಿಪ್ ಯೋಜನೆಗೆ ಸುಮಾರು ಶೇ.80ರಷ್ಟು ರೈತರು ಒಪ್ಪಿಗೆ ನೀಡಿದ್ದಾರೆ. ಜೂನ್ ಮೊದಲ ವಾರದಲ್ಲಿ ಪರಿಹಾರ ವಿತರಣೆ ಪ್ರಾರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಘೋಷಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಯೋಜನೆಗೆ ವಿರೋಧ ವ್ಯಕ್ತಪಡಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಟೌನ್‌ಶಿಪ್ ಬಗ್ಗೆ ಪ್ರಸ್ತಾಪಿಸಿದ್ದರು ಎಂದು ತಿರುಗೇಟು ಪುಟ 2ಕ್ಕೆ

## ಮೊದಲನೇ ಪುಟದಿಂದ

### ವೈಮಾನಿಕ ಕ್ಷೇತ್ರದಲ್ಲಿ 6 ಸಾವಿರ ಕೋಟಿ ಹೂಡಿಕೆ

ರನ್ ವೇ ನಿರ್ಮಾಣಕ್ಕೂ ಅನುಕೂಲ ಇರುವ ಕಡೆ ಜಾಗ ಗುರುತಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

### 35 ಕೋಟಿ ಬೆಲೆ ಡ್ರಗ್ಸ್ ವಶ: 8 ಮಂದಿ ಬಂಧನ

ಮೌಲ್ಯವಿದೆ. ಆರೋಪಿಗಳು ದೆಹಲಿಯಲ್ಲಿ ಅಪರಿಚಿತ ವ್ಯಕ್ತಿಯಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸಿ ಬೆಂಗಳೂರಿನಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ. ಅಪರಾಧಕ್ಕೆ ಬಳಸಲಾದ ಕಾರು, 4.18 ಕೆಜಿ ಎಂಡಿಎಂಎ ಮತ್ತು ನಾಲ್ಕು ಮೊಬೈಲ್ ಫೋನ್‌ಗಳನ್ನು ಅವರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಕೆಲವರು ತಲೆಮರೆಸಿಕೊಂಡಿದ್ದಾರೆ. ಅವರನ್ನು ಪತ್ತೆಹಚ್ಚಲು ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ಹೇಳಿದರು.

### ಯೋಜನೆಗೆ ಶೇ.80ರಷ್ಟು ರೈತರ ಒಪ್ಪಿಗೆ: ಡಿಕೆಶಿ

ನೀಡಿದರು. ನಮ್ಮ ಗ್ರೇಟರ್ ಬೆಂಗಳೂರು ಟೌನ್‌ಶಿಪ್ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೈತರು ಬಂದಿದ್ದರು. ಅವರಿಗೆ ಪರಿಹಾರದ ಕುರಿತು ನಾನು ಈಗಾಗಲೇ ಘೋಷಣೆ ಮಾಡಿದ್ದೇನೆ. ಹೆಚ್ಚು ಕಡಿಮೆ ಶೇ.80ರಷ್ಟು ರೈತರು ಬಂದು ತಮ್ಮ ಒಪ್ಪಿಗೆ ನೀಡಿದ್ದಾರೆ. ಪರಿಹಾರವನ್ನು ಆದಷ್ಟು ಬೇಗ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು ಎಂದು ಡಿಕೆಶಿ ಹೇಳಿದರು.

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಗ್ರಾಮವಾರು ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗುವುದು ಮತ್ತು ಪರಿಹಾರವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಮೂರು ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಮತ್ತು ಜೂನ್ ಮೊದಲ ವಾರದಿಂದ, ನಾವು ಅವರೆಲ್ಲರಿಗೂ ಪರಿಹಾರವನ್ನು ಬಿಡುಗಡೆ ಮಾಡಲು ಪ್ರಾರಂಭಿಸುತ್ತೇವೆ ಎಂದು ಶಿವಕುಮಾರ್ ತಿಳಿಸಿದರು.

ಈ ಯೋಜನೆ ಕುಮಾರಸ್ವಾಮಿ ಅವಧಿಯಲ್ಲೇ ಹುಟ್ಟಿಕೊಂಡಿತ್ತು. ಈ ಯೋಜನೆಯನ್ನು ಡಿಎಲ್‌ಎಫ್‌ಗೆ ನೀಡಲಾಗಿತ್ತು. ನಂತರ ಡಿಎಲ್‌ಎಫ್ ಇದು ಕಾರ್ಯಸಾಧ್ಯವಲ್ಲ ಎಂದು ಹೇಳಿ ಅದರಿಂದ ಹಿಂದೆ ಸರಿದಿತ್ತು ಎಂದು ಡಿಸಿಎಂ ಹೇಳಿದರು.

ಸಭೆಯಲ್ಲಿ ರೈತರು ಕೆಲವು ಬೇಡಿಕೆಗಳನ್ನು ಕೂಡ ಮುಂದಿಟ್ಟರು. ಅಭಿವೃದ್ಧಿ ಆಗುವ ಜಾಗದಲ್ಲಿ 30*40 ಸೈಟ್‌ಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ತಮ್ಮ ಭೂಮಿಯನ್ನು ಸರ್ಕಾರಕ್ಕೆ ನೀಡುತ್ತಿರುವ ಹಿನ್ನೆಲೆಯಲ್ಲಿ, ಹಣದೊಂದಿಗೆ ಕನಿಷ್ಠ ಕೆಲವು ಸೈಟ್‌ಗಳ ರೂಪದಲ್ಲಿ ಹಿಂತಿರುಗಿಸುವ ಸೌಲಭ್ಯ ನೀಡಬೇಕು ಎಂದು ವಿನಂತಿಸಿದರು. ಆದರೆ ರೈತರ ಬೇಡಿಕೆಯ ಬಗ್ಗೆ ಯೋಚನೆ ಮಾಡ್ತೇವೆ ಎಂದು ಡಿಸಿಎಂ ತಿಳಿಸಿದರು.

### ಸಾಲ ವಾಪಸ್ ಕೇಳಿದರೆ ಹಲ್ಲೆ: ವಿಶ್ವನಾಥ್ ವಿರುದ್ಧ ಎಫ್‌ಐಆರ್

ಎನ್ ಸಿಆರ್ ದಾಖಲಿಸಲಾಗಿತ್ತು. ಬಳಿಕ ಮಹದೇವ್ ನ್ಯಾಯಾಲಯದ ಮೊರೆಹೋಗಿ ಎಫ್‌ಐಆರ್ ದಾಖಲಿಸುವಂತೆ ಆದೇಶ ತಂದಿದ್ದಾರೆ. ದೇವರಾಜ ಠಾಣೆಯಲ್ಲಿ ವಿಶ್ವನಾಥ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

### ಉಗ್ರನಿಗೆ 7 ವರ್ಷ ಜೈಲು

ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದೆ.

ಪ್ರಕರಣದ ಹಿನ್ನೆಲೆ: ತಾಲಿಬಾನ್ ಮತ್ತು ಟಿಟಿಪಿ ಸಿದ್ಧಾಂತಕ್ಕೆ ಸಂಬಂಧಿಸಿದ ಮೂಲಭೂತೀಕರಣ ಮತ್ತು ಭಯೋತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಎನ್‌ಐಎ ಏಪ್ರಿಲ್ 2023ರಲ್ಲಿ ಪ್ರಕರಣ ದಾಖಲಿಸಿತು. ಅಕ್ಟೋಬರ್ 2023ರಲ್ಲಿ ಸಂಸ್ಥೆ ಹಮ್ರಾಜ್ ಮತ್ತು ಸಹ-ಆರೋಪಿ ಮೊಹಮ್ಮದ್ ಆರಿಫ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿತ್ತು.

### ಆ.31ರೊಳಗೆ ಜಿಬಿಎ ಚುನಾವಣೆ

ಎಂದು ಆಯೋಗವು ತನ್ನ ಅರ್ಜಿಯಲ್ಲಿ ತಿಳಿಸಿತ್ತು.

ಆದರೆ, ಕೇಂದ್ರ ಸರ್ಕಾರ ಜನಗಣತಿಗೆ ಆದೇಶಿಸಿರುವುದರಿಂದ ರಾಜ್ಯ ಸರ್ಕಾರಿ ಅಧಿಕಾರಿಗಳು ವ್ಯಕ್ತಪಡಿಸಿದ ಕಳವಳಗಳು ಮೇಲ್ನೋಟಕ್ಕೆ ನಿಜವೆಂದು ತೋರುತ್ತದೆ. ಚುನಾವಣೆಗಳನ್ನು ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಾಯ ಮಾಡುವ ಜವಾಬ್ದಾರಿಗಳನ್ನು ಹೊಂದಿರುವ ಅಧಿಕಾರಿಗಳ ಸಂಪೂರ್ಣ ಸಮಯ ಮತ್ತು ಲಾಜಿಸ್ಟಿಕ್ಸ್ ಅನ್ನು ಎಸ್‌ಐಆರ್ ಆಕ್ರಮಿಸಿಕೊಂಡಿದೆ. ಆದ್ದರಿಂದ, ಚುನಾವಣೆಗಳನ್ನು ನಡೆಸುವಲ್ಲಿ ಕೋರಿದ ಸಮಯ ವಿಸ್ತರಣೆಯು ವಿಶ್ವಾಸಾರ್ಹವಾಗಿದೆ ಎಂದು ಆಯೋಗ ಹೇಳಿತ್ತು.

ಈ ವಾದವನ್ನು ಆಲಿಸಿದ ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಆ.31ರವರೆಗೆ ಗಡುವು ವಿಸ್ತರಿಸಿ ಚುನಾವಣೆ ನಡೆಸುವಂತೆ ಆದೇಶಿಸಿದೆ.

### ಎಚ್‌ಡಿಕೆಗೆ ಡಿ.ಕೆ.ಶಿವಕುಮಾರ್ ಪಂಥಾಹ್ವಾನ

ಪರಿಹಾರ ಕೊಡಿ ಎಂದಿದ್ದಾರೆ. 3 ದಿನದಲ್ಲಿ ನೋಟಿಫಿಕೇಷನ್ ಹೊರಡಿಸಿ ಹಣ ನೀಡುತ್ತೇವೆ. ಯೋಜನೆ ನಾವು ಮಾಡಿದ್ದಲ್ಲ. ಕುಮಾರಸ್ವಾಮಿ ಅವಧಿಯಲ್ಲೇ ಮಾಡಿದ್ದು. ಅವಾಗ ವ್ಯತ್ಯಾಸ ಆಗಿ ಇದು ರೆಡ್ ಝೋನ್ ಅಂತ ಘೋಷಣೆ ಮಾಡಿದ್ದರು. ನಮ್ಮನ್ನ ಬೆಂಗಳೂರು ಅಂತ ಘೋಷಣೆ ಮಾಡಿದ್ದೀರಿ ಅಂತ ರೈತರು ಖುಷಿ ಪಟ್ಟಿದ್ದಾರೆ ಎಂದು ನುಡಿದರು.

### ಚಿನ್ನಾಭರಣ ವಂಚನೆ ಹಗರಣ: 200ಕ್ಕೂ ಹೆಚ್ಚು ದೂರು ದಾಖಲು

ಅಡವಿಟ್ಟಿರುವ ಚಿನ್ನಾಭರಣಗಳನ್ನು ಗ್ರಾಹಕರ ಅನುಮತಿ ಇಲ್ಲದೆ ಕರಗಿಸಿ, ಅದರ ಮೌಲ್ಯವನ್ನು ಪಾವತಿಸದೆ ವೈಯಕ್ತಿಕ ಲಾಭಕ್ಕಾಗಿ ದುರುಪಯೋಗ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರುಗಳ ಸಂಖ್ಯೆ ಹಾಗೂ ಹಣಕಾಸು ವ್ಯವಹಾರಗಳ ಹಾದಿ ದೊಡ್ಡದಿರುವುದರಿಂದ ಸಮಗ್ರ ತನಿಖೆಗೆ ಇನ್ನೂ 5ರಿಂದ 6 ತಿಂಗಳು ಬೇಕಾಗಬಹುದು ಎಂದರು.

# ಮಳೆ ಕೊರತೆ ಕುಡಿಯುವ ನೀರಿಗೆ ಅಗತ್ಯ ಕ್ರಮ: ರೆಡ್ಡಿ

## ಜುಲೈ ತಿಂಗಳವರೆಗೂ ಮಿತವಾಗಿ ನೀರು ಬಳಸಿ । ನೀರು ಪೋಲಾಗದಂತೆ ಕಾಪಾಡಿಕೊಳ್ಳಿ

**ಮೈಸೂರು:** ಏಪ್ರಿಲ್ ಹಾಗೂ ಮೇ ಮಾಹೆಯಲ್ಲಿ ಮಳೆಯ ಕೊರತೆ ಉಂಟಾಗಿದ್ದು, ಮಳೆ ಸರಿಯಾಗಿ ಬಾರದಿದ್ದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ಯೋಜನೆ ರೂಪಿಸಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಪಂಚಾಯತ್ ಡಿ.ದೇವರಾಜ ಅರಸು ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಅಣೆಕಟ್ಟಿನಲ್ಲಿ ಲಭ್ಯವಿರುವ ನೀರಿನ ಆಧಾರದ ಮೇಲೆ ಜುಲೈ ಮಾಹೆಯವರೆಗೆ ಕುಡಿಯುವ ನೀರಿಗೆ ತೊಂದರೆಯಾಗುವುದಿಲ್ಲ. ಆದರೆ ಈಗಿನಿಂದಲೇ ಮಿತವಾಗಿ ನೀರನ್ನು ಬಳಸಿ, ಕುಡಿಯುವ ನೀರು ಪೋಲಾಗದಂತೆ ಎಚ್ಚರಿಕೆ ವಹಿಸಿ ಎಂದರು.

ಸ್ಥಳೀಯ ಸಂಸ್ಥೆಗಳು ಕುಡಿಯುವ ನೀರಿನ ತೊಂದರೆಯಾಗುವ ಸ್ಥಳಗಳನ್ನು ಗುರುತಿಸಿ ಸದರಿ ಸ್ಥಳಗಳಲ್ಲಿ ಇರುವ ಖಾಸಗಿ ಬೋರ್ ವೆಲ್ ಗಳ ಪಟ್ಟಿ ಮಾಡಿಕೊಂಡು ಅವಶ್ಯಕತೆಯ ಸಂದರ್ಭದಲ್ಲಿ ನೀರು ಪಡೆಯಲು ಸಿದ್ಧತೆ ಮಾಡಿಕೊಳ್ಳಿ ಎಂದರು.

ತಾಲ್ಲೂಕುವಾರು ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು ಸಾರ್ವಜನಿಕರು ಕುಡಿಯುವ ನೀರಿನ ತೊಂದರೆಯ ಬಗ್ಗೆ ಅಧಿಕಾರಿಗಳು ಅಥವಾ ಸಿಬ್ಬಂದಿಗಳಿಗೆ ಸಾರ್ವಜನಿಕರು ಕರೆ ಮಾಡಿದಾಗ ಸಕಾರಾತ್ಮಕವಾಗಿ ಸ್ಪಂದಿಸಿ ಇನ್ನಿತರರು ಇರುವ ಸ್ಥಳವನ್ನು ಪರಿಶೀಲಿಸಿ ಪರಿಹಾರಗೊಳಿಸಿ ಇಲ್ಲಾವಾದಲ್ಲಿ ಸಣ್ಣ ಹಂತದಲ್ಲಿ ಪರಿಹಾರವಾಗಬೇಕಾದ ಸಮಸ್ಯೆ ಗಂಭೀರವಾಗುತ್ತದೆ ಎಂದರು.

ಬೋರ್ ವೆಲ್ ಗಳ ರಿಡ್ರಿಲ್, ಹೊಸ ಬೋರ್ ವೆಲ್ ಕೊರೆಯುವಿಕೆ, ಟ್ಯಾಂಕರ್ ಮೂಲಕ ನೀರು ಸರಬರಾಜು, ಕುಡಿಯುವ ನೀರಿನ ಪೈಪ್ ಲೈನ್ ಜೋಡಣೆ ಕುರಿತು ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಿ. ಕುಡಿಯುವ ನೀರಿನ ತೊಂದರೆ ಉಂಟಾಗಬಹುದಾದ ಸ್ಥಳಗಳಿಗೆ ನಿಗಧಿತವಾಗಿ ಭೇಟಿ ನೀಡಿ ಸಮಸ್ಯೆ ಉಲ್ಬಣವಾಗುವ ಮೊದಲೇ ಪರಿಹರಿಸಿ ಎಂದರು.

ಜಂಟಿ ಕೃಷಿ ನಿರ್ದೇಶಕ ರವಿ ಮಾತನಾಡಿ, ಜಿಲ್ಲೆಯಲ್ಲಿ ಏಪ್ರಿಲ್ ಮಾಹೆಯಲ್ಲಿ ಶೇ.85 ಹಾಗೂ ಮೇ ಮಾಹೆಯಲ್ಲಿ ಇಲ್ಲಿಯವರೆಗೆ ಶೇ.24ರಷ್ಟು ಮಳೆಯ ಕೊರತೆ ಉಂಟಾಗಿದೆ. 38,000 ಹೆಕ್ಟೇರ್ ತಂಬಾಕು ಬೆಳೆ ಬಿತ್ತನೆಯಾಗಿದ್ದು, ಹೆಚ್ಚು ಭಾಗ ಬೋರ್ ವೆಲ್ ನೀರನ್ನು ಆಧರಿಸಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಇಲ್ಲ. ಮಳೆಯು ವಾರ, ತಿಂಗಳು ಪೂರ ಬಾರದೇ ಬಿತ್ತನೆಯನ್ನು ಮುಂದಕ್ಕೆ ಸೆಪ್ಟೆಂಬರ್ ಮಾಹೆಗೆ ಹೋದರೆ ಅಂತಹ ಸಂದರ್ಭದಲ್ಲಿ ಬೆಳೆಯಲು ಚಳಿಯನ್ನು ತಡೆದು ಇಳುವರಿ ನೀಡುವ ಬೀಜದ ಬಿತ್ತನೆಯನ್ನು ಪ್ರೋತ್ಸಾಹಿಸಲು ಯೋಜನೆ ಸಿದ್ಧಪಡಿಸಲಾಗಿದೆ ಎಂದರು.

ವಿವಿಧ ಬೆಳೆಗಳಿಗೆ ಹೆಕ್ಟೇರ್ ವಾರು ಬಳಸಬೇಕಿರುವ ಯುರಿಯಾ ಹಾಗೂ ಇತರೆ ರಸಗೊಬ್ಬರದ ಪ್ರಮಾಣದ ಪ್ರಕಟಣೆಯನ್ನು ಹೊರಡಿಸಲಾಗಿದೆ. ಯುರಿಯಾ ವಿತರಣಾ ಆಪ್ ನಲ್ಲಿ ವಿತರಣೆ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ, ಅಗ್ನಿಶಾಮಕ ಅಧಿಕಾರಿ ಗುರುರಾಜ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಂಗಡಿ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.



### ಶಿಥಿಲ ಕಟ್ಟಡಗಳ ಪಟ್ಟಿ ಮಾಡಿ: ಲಕ್ಷ್ಮಿಕಾಂತ ರೆಡ್ಡಿ

ಮೈಸೂರು: ಇಲಾಖೆಯ ವ್ಯಾಪ್ತಿಯಲ್ಲಿ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು ಗಾಳಿ ಅಥವಾ ಮಳೆಗೆ ಬೀಳುವ ಸಾಧ್ಯತೆ ಇದ್ದಲ್ಲಿ, ತಕ್ಷಣ ಅವುಗಳ ಪಟ್ಟಿ ಮಾಡಿ ಎರಡು ದಿನದೊಳಗಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ನಂತರ ಅಧಿಕಾರಿಗಳೊಂದಿಗೆ ಮಾತನಾಡಿದರು. ಶಿಥಿಲಾವಸ್ಥೆಯಲ್ಲಿರುವ ಕಟ್ಟದ ಮಳೆ ಗಾಳಿಯಿಂದ ಬಿದ್ದು ಪ್ರಾಣ ಹಾನಿಯಾದಲ್ಲಿ, ಆಯಾ ಇಲಾಖೆಯ ಅಧಿಕಾರಿಗಳೇ ಜವಾಬ್ದಾರಿ ಹೊರಬೇಕಾಗುತ್ತದೆ ಎಂದರು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಆಯಾ ಇಲಾಖೆ ಅವರು ತಮ್ಮ ಇಲಾಖಾ ಅನುದಾನದಿಂದ ತೆರವುಗೊಳಿಸ ಬೇಕಿರುವುದರಿಂದ ಪಟ್ಟಿ ನೀಡಿದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಯಲ್ಲಿ ಸೇರಿಸಿ ತೆರವುಗೊಳಿಸುವಂತೆ ಸೂಚನೆ ನೀಡಲಾಗುವುದು ಎಂದರು. ಪಾರಂಪರಿಕ ಕಟ್ಟಡವಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದರೆ ತಕ್ಷಣವೇ ಲೋಕೋಪಯೋಗಿ ಇಲಾಖೆಯಿಂದ ಸ್ಟ್ರಕ್ಚರ್ ಸ್ಟೆಬಿಲಿಟಿ ಕುರಿತು ವರದಿ ಪಡೆದು ಜಿಲ್ಲಾಧಿಕಾರಿಗಳ ಕಚೇರಿಗೆ ವರದಿ ಸಲ್ಲಿಸುವಂತೆ ತಿಳಿಸಿದರು.

# ಕೋಟೆಕೆರೆ ಗ್ರಾಮದಲ್ಲಿ ಯಶಸ್ವಿ ಕುಷ್ಠರೋಗ ಜಾಗೃತಿ ಕಾರ್ಯಕ್ರಮ

**ಗುಂಡ್ಲುಪೇಟೆ:** ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ (NLEP) ಅಡಿಯಲ್ಲಿ ಇಂದು ಕೋಟೆಕೆರೆ ಗ್ರಾಮದಲ್ಲಿ ABSULS ಚಟುವಟಿಕೆಗಳನ್ನು ನಡೆಸಲಾಯಿತು.

ಒಟ್ಟು 150 ಮನೆಗಳನ್ನು ವ್ಯಾಪ್ತಿಗೆ ತೆಗೆದುಕೊಂಡು, ಕುಷ್ಠರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವ ಉದ್ದೇಶದಿಂದ ತಪಾಸಣೆ ಕಾರ್ಯಗಳನ್ನು ಕೈಗೊಳ್ಳಲಾಯಿತು. ಯೋಜನೆಯಂತೆ ಮನೆ ಮನೆಗೆ ಭೇಟಿ ನೀಡಿ ತಪಾಸಣೆ ಹಾಗೂ ಕುಷ್ಠರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು 4 ತಂಡಗಳನ್ನು ರಚಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಅಲೀಂ ಪಾಷಾ ಬಿ.ಆರ್ ಕುಷ್ಠರೋಗದ ಕುರಿತು ಮಾತನಾಡುತ್ತಾ ಕುಷ್ಠರೋಗವು ಚರ್ಮ ಮತ್ತು ನರಗಳನ್ನು ಮೊದಲು ಗುರಿ ಮಾಡುತ್ತವೆ.

ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ಪಡೆದರೆ ಸಂಪೂರ್ಣವಾಗಿ ಗುಣವಾಗುತ್ತದೆ.

ಚರ್ಮದ ಮೇಲೆ ತಿಳಿ ಬಿಳಿ ತಾಮ್ರ ವರ್ಣದ ಅಥವಾ ಕೆಂಪು ಮಚ್ಚೆಗಳು ಕಾಣಿಸಿಕೊಳ್ಳುವುದು ಪ್ರಮುಖ ಲಕ್ಷಣವಾಗಿದೆ.

ಮಚ್ಚೆಯ ಭಾಗದಲ್ಲಿ ಸ್ಪರ್ಶ ಸಂವೇದನೆ ಕಡಿಮೆಯಾಗಬಹುದು. ಕೈ ಮತ್ತು ಕಾಲುಗಳಲ್ಲಿ ನಿಶ್ಚೇಷ್ಟತೆ ಕಾಣಿಸಬಹುದು. ಚಿಕಿತ್ಸೆ ಪಡೆಯದ ರೋಗಿಯೊಂದಿಗೆ ದೀರ್ಘಕಾಲ ಸಂಪರ್ಕದಲ್ಲಿದ್ದರೆ ರೋಗ ಹರಡಬಹುದು.



ಕೈಕುಲುಕುವುದರಿಂದ, ಜೊತೆಯಲ್ಲಿ ಊಟ ಮಾಡುವುದರಿಂದ ರೋಗ ಹರಡುವುದಿಲ್ಲ. ನಮ್ಮ ತಾಲ್ಲೋಕಿನ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ MDT ಚಿಕಿತ್ಸೆ ಲಭ್ಯವಿದೆ. ನಿಯಮಿತ ಚಿಕಿತ್ಸೆ ಅಂಗವೈಕಲ್ಯವನ್ನು ತಡೆಯುತ್ತದೆ.

ಕುಷ್ಠರೋಗಿಗಳ ಬಗ್ಗೆ ಭೇದಭಾವ ಮಾಡಬಾರದು ಎಂದು ತಿಳುವಳಿಕೆ ನೀಡಿದರು. ಕಾರ್ಯಕ್ರಮದಲ್ಲಿ ಸೌಭಾಗ್ಯ, ರಾಘವೇಂದ್ರ, ಸೋನಾ ಮತ್ತು ಆಶಾ ಕಾರ್ಯಕರ್ತೆಯರಾದ ಮಂಜುಳಾ, ದ್ರಾಕ್ಷಿಯಿಣಿ , ರತ್ನಮ್ಮ, ಮಂಜಳಮ್ಮ ಹಾಗೂ ಪುಷ್ಪಲತಾ ಉಪಸ್ಥಿತರಿದ್ದರು.

# ಬಸವ ಜಯಂತಿ ಅಂಗವಾಗಿ ಗಮನಸೆಳೆದ ಕಾರು ರ್‍ಯಾಲಿ

**ಚಾಮರಾಜನಗರ:** ನಗರದಲ್ಲಿ ಮೇ 21 ಮತ್ತು 22 ರಂದು ನಡೆಯಲಿರುವ ಬಸವ ಜಯಂತಿ ಅಂಗವಾಗಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಯುವ ಘಟಕದ ವತಿಯಿಂದ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಕಾರು ರ್‍ಯಾಲಿ ಗಮನ ಸೆಳೆಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಗಜ್ಯೋತಿ ಶ್ರೀಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಕಾರು ರ್‍ಯಾಲಿಗೆ ಶ್ರೀ ಚನ್ನಬಸವ ಸ್ವಾಮೀಜಿ ಚಾಲನೆ ನೀಡಿದರು. ಬಳಿಕ ನಗರದ ಪ್ರಮುಖ ಬೀದಿಗಳಲ್ಲಿ ರ್‍ಯಾಲಿ ನಡೆಯಿತು.

ಜಿಲ್ಲಾಡಳಿತ ಭವನ, ಬಿ.ರಾಚಯ್ಯ ಜೋಡಿ ರಸ್ತೆ, ರಾಮಸಮುದ್ರ, ಡಿವೈಎಸ್ಪಿ ವೃತ್ತ, ಪಚ್ಚಪ್ಪ ವೃತ್ತ, ಏಖಖಿಅ ಬಸ್ ನಿಲ್ದಾಣ, ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೆಮರಳ್ಳಿ ವೃತ್ತ, ಡಿವಿಜನ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ರ್‍ಯಾಲಿ ನಡೆದು ನಗರದ ಶ್ರೀ ಸಿದ್ಧ ಮಲ್ಲೇಶ್ವರ ವಿರಕ್ತ ಮಠದಲ್ಲಿ ಅಂತ್ಯವಾಯಿತು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಬಸವ ಒಕ್ಕೂಟದ ಅಧ್ಯಕ್ಷ ಪಿ.ಮರಿಸ್ವಾಮಿ, ಯುವ ಘಟಕದ ರಾಜ್ಯ ಕಾರ್ಯದರ್ಶಿ ಪ್ರಣಯ್, ಜಿಲ್ಲಾ ಕಾರ್ಯದರ್ಶಿ ವಿಜಯ್, ಉಪಾಧ್ಯಕ್ಷ ಹರಿಪ್ರಸಾದ್, ರಾಜು, ಮಹಾಸಭೆ ತಾಲ್ಲೂಕು ಅಧ್ಯಕ್ಷ ಬಾಲಚಂದ್ರ ಮೂರ್ತಿ, ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ ರಾಜಣ್ಣ, ಜಿಲ್ಲಾ ನಿರ್ದೇಶಕರಾದ ಯುವ ಗಿರೀಶ್, ಕಾವುದವಾಡಿ ಗುರು, ಬಿಸಲವಾಡಿ ಉಮೇಶ್, ಪುಣಜನೂರು ಗಿರೀಶ್, ಮುಖಂಡರಾದ ಆಲೂರು ಪ್ರದೀಪ್, ಬಿ.ಕೆ. ರವಿಕುಮಾರ್, ಕರಿನಂಜನಪುರ ವೀರಭದ್ರಸ್ವಾಮಿ, ಪ್ರಭುಸ್ವಾಮಿ, ಹೊಸೂರು ಜಗದೀಶ್, ಉತ್ತಳ್ಳಿ ಮಹೇಶ್ ಹಾಗೂ ಇತರರು ಹಾಜರಿದ್ದರು.



# ಯತೀಂದ್ರರ ಕೈವಾಡದಿಂದಲೇ ನನ್ನ ವಿರುದ್ಧ ದೂರು: ವಿಶ್ವನಾಥ್

**ಮೈಸೂರು:** ಸಾಲ ಕೇಳಲು ಬಂದ ವ್ಯಕ್ತಿಯ ಮೇಲೆ ಹಲ್ಲೆ ಆರೋಪ ಸಂಬಂಧ ನನ್ನ ವಿರುದ್ಧ ನಗರದ ದೇವರಾಜ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಿರುವುದರ ಹಿಂದೆ ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯನವರ ಕೈವಾಡವಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆರೋಪಿಸಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನನಗೆ ಕೋಟೆಹುಂಡಿ ಮಹಾದೇವ ಎಂಬ ವ್ಯಕ್ತಿ 55 ಲಕ್ಷ ಹಣ ಸಾಲ ನೀಡಿದ್ದು, ಅದನ್ನು ಕೇಳಲು ಹೋದಾಗ ಎಚ್.ವಿಶ್ವನಾಥ್ ನನ ಮೇಲೆ ಹಲ್ಲೆ ಮಾಡಿದರು ಎಂದು ಆ ವ್ಯಕ್ತಿ ನನ್ನ ವಿರುದ್ಧ ದೇವರಾಜ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಈ ಸಂಬಂಧ ಪೋಲಿಸರು ನನಗೆ ನೋಟಿಸ್ ಕೊಟ್ಟಿದ್ದರು. ಅದಕ್ಕೆ ಉತ್ತರ ನೀಡಿದ್ದೇನೆ. ಅನಂತರವೂ ನನ್ನ ವಿರುದ್ಧ ಎಫ್‌ಐಆರ್ ದಾಖಲು ಮಾಡಿ ನನ್ನ ತೇಜೋವಧೆ ಮಾಡುತ್ತಿದ್ದಾರೆ ಎಂದರು.




ಈ ಬಗ್ಗೆ ಹೈಕೋರ್ಟ್ಗೆ ಹೋಗುತ್ತೇನೆ. ನಾನು 50 ವರ್ಷ ರಾಜಕಾರಣದಲ್ಲಿ ಸಾಲ ಮಾಡಿಲ್ಲ. ಕೋಟೆಹುಂಡಿ ಮಹಾದೇವನಿಗೆ ಎಲ್ಲಿಂದ ಹಣ ಬಂತು, ಈತ ನನ್ನ ಮನೆಯ ಮುಂದೆ ಬಂದು ನಿಲ್ಲುತ್ತಿದ್ದವನು. ನಾನು ಯತೀಂದ್ರ ಸಿದ್ದರಾಮಯ್ಯ ನನ್ನ ಹೆಂ ಎಂದು ಹೇಳಿದ್ದೆ, ಅದಕ್ಕೆ ದ್ವೇಷ ತೀರಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾನೆ ಅಷ್ಟೇ. ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವ ಮಹದೇವಪ್ಪ ಹಾಗೂ ಸಿಎಂ ಮಗ ಬೇರೆ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಬರೀ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ. ಇದೇ ಹೆಸರಿನಲ್ಲಿ ಕೀಟಲೆ ಕೆಲಸ ಮಾತ್ರ ನಡೆಯುತ್ತಿದೆ. ಈಗಾಗಲೇ ಎಫ್‌ಐಆರ್ ವಿರುದ್ಧ ಹೈಕೋರ್ಟ್ಗೆ ಹೋಗಿದ್ದೇನೆ ಎಂದರು.

ಎಸ್.ಎಂ.ಕೃಷ್ಣ ಹೈಕಮಾಂಡ್ಗೆ ಹೇಳಿದ ಆ ಒಂದು ಮಾತು, ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಲು ಕಾರಣವಾಯಿತು. ಗೋಕುಲಂನ 2ನೇ ಹಂತದಲ್ಲಿರುವ ಇಂಟರ್ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಹೆಬ್ಬಾಳು ಫೌಂಡೇಶನ್ ಹಾಗೂ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಲಾಗಿದ್ದ ಎಸ್.ಎಂ.ಕೃಷ್ಣ 94ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ್ದರು. ಎಸ್.ಎಂ.ಕೃಷ್ಣ ಅವರೊಂದಿಗೆ ದೆಹಲಿಗೆ ಹೋಗಿದ್ದೆ. ಸಿದ್ದರಾಮಯ್ಯ ಕುರುಬ ಸಮುದಾಯದವರು, ಒಳ್ಳೆಯ ವ್ಯಕ್ತಿ ಎಂದು ಸೋನಿಯಾ ಗಾಂಧಿಯವರಿಗೆ ಹೇಳಿದೆ. ಆ ವೇಳೆ ಅಲ್ಲೇ ಇದ್ದ ಎಸ್.ಎಂ.ಕೃಷ್ಣ ಸಿದ್ದರಾಮಯ್ಯ ಡೈಮಂಡ್ ರೀತಿ, ಅವರನ್ನು ಪಕ್ಷಕ್ಕೆ ತೆಗೆದುಕೊಳ್ಳಬಹುದು ಎಂದು ಹೇಳಿದರು. ಹಾಗಾಗಿ, ಸೋನಿಯಾ ಗಾಂಧಿ ಸಿದ್ದರಾಮಯ್ಯ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಒಪ್ಪಿದರು ಎಂದು ಸ್ಮರಿಸಿದ್ದರು. ನಾನು ಯಾರಿಂದಲೂ ಸಾಲ ಪಡೆದಿಲ್ಲ. ಸಾಲ ಪಡೆಯುವ ಪರಿಸ್ಥಿತಿಯೂ ನನಗಿಲ್ಲ. ಇಂತಹ ರಾಜಕಾರಣದ ಆರೋಪಗಳಿಗೆ ಸದನದಲ್ಲಿಯೇ ಈ ಹಿಂದೆಯೂ ನಾನು ಕ್ಲೀನ್ ಚೀಟ್ ಆಗಿ ಇರುವ ಬಗ್ಗೆ ಸ್ಪಷ್ಟಪಡಿಸಿದ್ದೇನೆಂದರು.

# ಔಷಧಿ ಅಂಗಡಿಗಳ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

**ಮೈಸೂರು:** ಆನ್‌ಲೈನ್ ನಲ್ಲಿ ಔಷಧ ಮಾರಾಟ ಹಾಗೂ ಅಸಹಜ ರಿಯಾಯಿತಿಗಳ ವಿರುದ್ಧ ಅಖಿಲ ಭಾರತ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಸಂಸ್ಥೆ ರಾಷ್ಟ್ರವ್ಯಾಪಿ ಕರೆ ನೀಡಿರುವ ಬಂದ್ ಗೆ ಮೈಸೂರಿನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಕೆಲವೆಡೆ ಮೆಡಿಕಲ್ ಸ್ಟೋರ್ ಬಂದ್ ಮಾಡಿ ಬೆಂಬಲ ಸೂಚಿಸಿದರೆ, ಹಲವೆಡೆ ಎಂದಿನಂತೆ ಕಾರ್ಯ ನಿರ್ವಹಿಸಿದವು. ಆದರೆ, ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧ ವ್ಯಾಪಾರಿಗಳ ಸಂಘದ ವ್ಯಾಪ್ತಿಯಲ್ಲಿರುವ ಮೆಡಿಕಲ್ ಶಾಪ್‌ನವರು ಗ್ರಾಹಕರಿಗೆ ಸೇವೆ ಒದಗಿಸುವ ಜೊತೆಯಲ್ಲಿ ಬಂದ್‌ಗೆ ನೈತಿಕ ಬೆಂಬಲ ನೀಡಿದವು. ಸಾರ್ವಜನಿಕರು ಹಾಗೂ ರೋಗಿಗಳ ಆರೋಗ್ಯದ ಹಿತದೃಷ್ಟಿಯಿಂದ ಅಂಗಡಿಗಳನ್ನು ಮುಚ್ಚದೆ ಎಂದಿನಂತೆ ಕಾರ್ಯ ನಿರ್ವಹಿಸಿ, ಕೈಗಳಿಗೆ ಕಪ್ಪು ಧರಿಸಿ, ಬೆಂಬಲ ವ್ಯಕ್ತಪಡಿಸಿದರು. ಆನ್‌ಲೈನ್ ಔಷಧ ಮಾರಾಟ ಪದ್ಧತಿಯಿಂದ ಔಷಧ ಮಾರಾಟ ಕ್ಷೇತ್ರವು, ವೃತ್ತಿಪರತೆಯನ್ನು ಕಳೆದುಕೊಳ್ಳುವ ಸಂಭವವಿದೆ. ಅಲ್ಲದೇ, ಈ ವ್ಯವಸ್ಥೆಯನ್ನು ಯುವ ಪೀಳಿಗೆ ಹಾಗೂ ವಿದ್ಯಾರ್ಥಿಗಳು ದುರುಪಯೋಗ ಪಡಿಸಿಕೊಂಡು, ಮಾದಕ ವ್ಯಸನಿಗಳಾಗುವ ಸಂಭವವಿದೆ. ಡ್ರಗ್ ಮಾಫೀಯಾವು ಮತ್ತಷ್ಟು ಗಟ್ಟಿಕೊಳ್ಳುವ ಸಾಧ್ಯತೆಯು ಇದೆ. ಕೆಲವೊಮ್ಮೆ ರೋಗಿಗಳು ತಮ್ಮ ರೋಗದ ಗೌಪತ್ಯೆಯನ್ನು ಕಾಪಾಡುವಲ್ಲಿ ವಿಲತೆ ಹಾಗೂ ಅಸುರಕ್ಷತೆ ಹೊಂದುತ್ತಾರೆ ಎಂದು ಪ್ರತಿಭಟನಕಾರರು ಹೇಳಿದರು.


ಸಂಘದ ಅಧ್ಯಕ್ಷ ಎಂ.ರಾಜು, ಕಾರ್ಯಾಧ್ಯಕ್ಷ ಎಸ್.ದೇವರಾಜ್, ಕಾರ್ಯದರ್ಶಿ ಸಿ.ಕೆ.ಅರುಣ್, ಖಜಾಂಚಿ ಮನ್ಸೂರ್ ಅಹಮದ್‌ಖಾನ್, ಉಪಾಧ್ಯಕ್ಷ ಎಸ್.ಉಮೇಶ್, ಜಂಟಿ ಕಾರ್ಯದರ್ಶಿ ಎಚ್.ವಿ.ಚಂದ್ರಶೇಖರ್ ಸೇರಿ ಔಷಧಿ ವ್ಯಾಪಾರಿಗಳು ಉಪ ಔಷಧ ನಿಯಂತ್ರಣಾಧಿಕಾರಿ ಡಾ. ವಾಸೀಂ ಷರ್ ರನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು.

ಆನ್‌ಲೈನ್‌ನಲ್ಲಿ ಅನಧಿಕೃತ ಔಷಧ ಮಾರಾಟ ಹಾಗೂ ಕ್ವಿಕ್ ಕಾಮರ್ಸ್ ಡೆಲಿವರಿ ಆಪ್‌ಗಳಿಂದ, ಮೆಡಿಕಲ್ ಶಾಪ್ ನಡೆಸುತ್ತಿರುವ ಔಷಧ ವ್ಯಾಪಾರಿಗಳಿಗೆ ಬಹಳಷ್ಟು ತೊಂದರೆಯಾಗಲಿದೆ. ಇದಕ್ಕೆ ಸರಕಾರ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಈ ವೇಳೆಯಲ್ಲಿ ಸಂಘದ ಅಧ್ಯಕ್ಷ ಕುಮಾರಸ್ವಾಮಿ, ಕಾರ್ಯದರ್ಶಿ ಅಮನ್‌ಉಲ್ಲಾ ಖಾನ್, ಖಜಾಂಚಿ ಕೆ.ಎನ್.ನವೀನ್ ಕುಮಾರ್, ಔಷಧ ವ್ಯಾಪಾರಿಗಳು ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.









### ಚಿರತೆಗೆ ಸಾವಿಗೆ ಕಾರಣನಾಗಿದ್ದ ಆರೋಪಿ ಸೆರೆ: ಜನತಾ ರಾಯಭಾರಿ

**ಚಾಮರಾಜನಗರ:** ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಕೊತ್ತಲವಾಡಿ ಗ್ರಾಮದಲ್ಲಿ ವಿಷಪ್ರಾಶನ ಹಾಕಿ ಚಿರತೆ ಸಾವಿಗೆ ಕಾರಣರಾಗಿದ್ದವನನ್ನು ಬಂಧಿಸಲಾಗಿದೆ.

ತಾಲೂಕಿನ ಕೊತ್ತಲವಾಡಿ ಗ್ರಾಮದ ದೊಡ್ಡಸ್ವಾಮಿ (56) ಬಂಧಿತ ಆರೋಪಿ. ಈತ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ ಚಾಮರಾಜನಗರ ಪ್ರಾದೇಶಿಕ ವಲಯದ ಕೊತ್ತಲವಾಡಿ ಗ್ರಾಮದಲ್ಲಿ 2025 ಜು.10 ರಂದು ವಿಷಪ್ರಾಶನ ಮಾಡಿದ್ದರಿಂದ ಚಿರತೆಯೊಂದು ಮೃತಪಟ್ಟಿತ್ತು.

ಈ ಸಂಬಂಧ ತನಿಖೆ ಕೈಗೊಂಡಿದ್ದ ಅರಣ್ಯ ಇಲಾಖೆ ಸಿಬ್ಬಂದಿಗಳು, ಕಳೆದ 10 ತಿಂಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.



# ಸಾಧಕರ ಹಾದಿ ಪ್ರೇರಣೆ: ಮಂಜೇಗೌಡ

## ಮೈಸೂರಿನಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಣೆ

**ಮೈಸೂರು:** ಯುವ ಪೀಳಿಗೆಯು ಹಿರಿಯರು, ಮಹನೀಯರು ಮತ್ತು ಸಾಧಕರ ಜೀವನದ ಅನುಭವಗಳನ್ನು ಅರಿತು, ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಶಾಸಕರಾದ ಸಿ.ಎನ್.ಮಂಜೇಗೌಡ ಅವರು ಹೇಳಿದರು.

ಇಂದು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತೋತ್ಸವ ಸಮಿತಿ ವತಿಯಿಂದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರವು ಮಹಾನ್ ವ್ಯಕ್ತಿಗಳ ಜಯಂತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಮಾಜದ ಬುದ್ಧಿವಂತರು ಹಾಗೂ ಸಾಧಕರನ್ನು ಒಂದೇ ವೇದಿಕೆಗೆ ತರುತ್ತಿದೆ. ಸಾಧಕರು ತಮ್ಮ ಜೀವನದಲ್ಲಿ ಅನುಭವಿಸಿದ ಕಷ್ಟಗಳು ಹಾಗೂ ಅದರಿಂದ ಪಡೆದ ಯಶಸ್ಸಿನ ಫಲವನ್ನು ಇಂತಹ ವೇದಿಕೆಗಳ ಮೂಲಕ ಹಂಚಿಕೊಂಡಾಗ, ಅದು ಕೇಳುಗರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎಂದರು.

ಶಾಲೆಗಳಲ್ಲಿ ಶಿಕ್ಷಕರು ಮತ್ತು ಪಠ್ಯಪುಸ್ತಕಗಳು ಇಲ್ಲದಿದ್ದರೆ ಶಿಕ್ಷಣ ಸಾಧ್ಯವಾಗುತ್ತಿರಲಿಲ್ಲ. ಸಮಾಜಕ್ಕೆ ಕೊಡುಗೆ ನೀಡಿದ ಗಟ್ಟಿ ವ್ಯಕ್ತಿಗಳ ಸಾಧನೆಗಳನ್ನು ನಾವು ಸದಾ ಅನುಸರಿಸಬೇಕು

ಸಮಾಜವನ್ನು ಉತ್ತಮ ಹಾದಿಗೆ ತರಬೇಕಾದರೆ ಇಂತಹ ವೈಚಾರಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಉತ್ತಮ ಚಲನಚಿತ್ರಗಳನ್ನು ವೀಕ್ಷಿಸುವುದು, ಒಳ್ಳೆಯ ಪುಸ್ತಕಗಳನ್ನು ಓದುವುದು ಮತ್ತು ದಿನಪತ್ರಿಕೆ ಹಾಗೂ ದೂರದರ್ಶನದಲ್ಲಿನ ಸುದ್ದಿಗಳನ್ನು ಗಮನಿಸುವುದು ಅತ್ಯಂತ ಅಗತ್ಯ. ಇವು ಮನುಷ್ಯನಲ್ಲಿ ದೊಡ್ಡ ವೈಚಾರಿಕ ಬದಲಾವಣೆ ತರಬಲ್ಲವು ಎಂದು ಹೇಳಿದರು.

ಸತ್ಯ ಹರಿಶ್ಚಂದ್ರ ಮತ್ತು ಶ್ರೀರಾಮರಂತಹ ಮಹಾಪುರುಷರು ಸಮಾಜಕ್ಕಾಗಿ ಅನುಭವಿಸಿದ ಕಷ್ಟಗಳಿಗಿಂತ, ಅವರು ಸಮಾಜಕ್ಕೆ ನೀಡಿದ ಕೊಡುಗೆ ಮತ್ತು ಅವರು ತಂದ ಬದಲಾವಣೆಗಳು ಇಂದಿಗೂ ಪ್ರಸ್ತುತವಾಗಿವೆ. ನಮ್ಮ ಯುವ ಪೀಳಿಗೆಗೆ ಸಾಧಕರ



ಕಷ್ಟಗಳಷ್ಟೇ ಅಲ್ಲದೆ, ಅವರ ಸಾಧನೆಯ ಹಿಂದಿರುವ ಆಶಯಗಳನ್ನು ತಿಳಿಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷರಾದ ಡಾ.ವಾಮದೇವರು ಅವರು ಮಾತನಾಡಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗವು ನೋಂದಣಿಯಾಗಿ ಕಳೆದ ಎಂಟು ವರ್ಷಗಳಿಂದ ಮೈಸೂರಿನಲ್ಲಿ ನಿರಂತರವಾಗಿ ಸಕ್ರಿಯವಾಗಿದೆ. ಕರ್ನಾಟಕ ಸರ್ಕಾರವು 2017 ರಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅಧಿಕೃತವಾಗಿ ಘೋಷಿಸಿದ್ದು, ಅಂದಿನಿಂದ ಪ್ರತಿ ವರ್ಷ ಮೇ ಮಾಹೆಯಲ್ಲಿ ಈ ಜಯಂತ್ಯುತ್ಸವವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಸಮಾಜ, ನಾಡು ಮತ್ತು ದೇಶಕ್ಕಾಗಿ ಶ್ರಮಿಸಿದ ಮಹನೀಯರ ಸಾಧನೆ, ಅವರು ನೀಡಿದ ಕೊಡುಗೆಗಳು ಹಾಗೂ ಸಂದೇಶಗಳನ್ನು ಸಾರ್ವಜನಿಕರಿಗೆ ಮತ್ತು ಯುವ ಪೀಳಿಗೆಗೆ ತಲುಪಿಸುವುದು ಈ ಜಯಂತಿಗಳ ಮುಖ್ಯ ಉದ್ದೇಶವಾಗಿದೆ. ಈ ಸಂದೇಶಗಳನ್ನು ಜನರು ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದರು.

ಜೆ.ಎಸ್‌ಎಸ್ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿಯಾದ ಪುಷ್ಪಲತಾ.ಜೆ ಅವರು ಉಪನ್ಯಾಸ ನೀಡಿ ಮಾತನಾಡಿದರು ಮಲ್ಲಮ್ಮನ ಚರಿತ್ರೆಯು ದ್ಯಾಂಪುರ ಚೆನ್ನಕವಿಗಳು ಬರೆದಿರುವ ಕೃತಿಯಾಗಿದ್ದು, ಇದನ್ನು ಗೋರು ಚನ್ನಬಸಪ್ಪನವರು ಹೊಸಗನ್ನಡ ಗದ್ಯಾನುವಾದದಲ್ಲಿ ನೀಡಿದ್ದಾರೆ. ಇದು ಸಾಧ್ವಿ ಶಿರೋಮಣಿಯಾದ ಗೃಹಿಣಿಯ ಜೀವನದ ಪಾವಿತೆಯನ್ನು ಪರಿಚಯಿಸುವ ಕೃತಿಯಾಗಿದೆ ಎಂದು ಹೇಳಿದರು.

ಮಲ್ಲಮ್ಮ ಕೇವಲ ಪುರಾಣದ ವ್ಯಕ್ತಿಯಲ್ಲ, ಬದಲಿಗೆ ಚಾರಿತ್ರಿಕ ವ್ಯಕ್ತಿಯಾಗಿದ್ದಾಳು. ಇದಕ್ಕೆ ಪೂರಕವಾಗಿ ಮದರಾಸಿನ ಓರಿಯಂಟಲ್ ಲೈಬ್ರರಿಯಲ್ಲಿ ಸಿಗುವ ದಾಖಲೆಗಳ ಪ್ರಕಾರ, ಹೇಮಾರಡ್ಡಿ ಮತ್ತು ಮಲ್ಲಮ್ಮನವರು ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನದ ಕಾರ್ಯಗಳನ್ನು ನೆರವೇರಿಸಿದ್ದಾರೆ ಎಂಬ ಉಲ್ಲೇಖವಿದೆ. ಮಲ್ಲಮ್ಮನ ಸಾತ್ವಿಕ ಗುಣವನ್ನು ಸಹಿಸದ ಅವಳ ಒರಗಿತ್ತಿಯರು ಕುತಂತ್ರ ನಡೆಸಿ, ಅವಳನ್ನು ದನ ಕಾಯಲು ಕೊಟ್ಟಿಗೆಗೆ ಹಾಕಿಬಿಡುತ್ತಾರೆ. ಕೊಟ್ಟಿಗೆಯಲ್ಲೇ ಜೀವನ ನಡೆಸುತ್ತಾ, ಹಸು–ಕರುಗಳನ್ನು ನೋಡಿಕೊಳ್ಳುವ ಅವಳಿಗೆ ಕೇವಲ ಒಣಗಿದ ಮತ್ತು ಉಳಿದ ಅಕ್ಕಿಯ ಅನ್ನ ಅಳಸಿದ್ದು, ಉಲಿದದ್ದು ಮಾತ್ರ ಆಹಾರವಾಗಿ ಸಿಗುತ್ತಿತ್ತು. ಅವಳಿಗೆ ಯಾವುದೇ ಒಳ್ಳೆಯ ಬಟ್ಟೆ, ಒಡವೆ ಅಥವಾ ಕೈಗೆ ಬಳೆಗಳಿರಲಿಲ್ಲ ಎಂದರು.

ಮಲ್ಲಮ್ಮ ತನ್ನ ಶಾಂತ ಹಾಗೂ ತಾಳ್ಮೆಯ ಮನಸ್ಸಿನಿಂದಲೇ ಎಲ್ಲಾ ಕಷ್ಟಗಳನ್ನು ಎದುರಿಸಿ, ಪರಿಸರವನ್ನು ಬದಲಾಯಿಸಬಲ್ಲ ಶಕ್ತಿಯನ್ನು ಹೊಂದಿದ್ದಾಳು, ನಿಂದಿಸುವವರ ಮತ್ತು ಕುತಂತ್ರ ಮಾಡುವವರ ನಡುವೆಯೂ ಮಲ್ಲಮ್ಮನು ತನ್ನ ಶಿವಧ್ಯಾನ ಮತ್ತು ಪ್ರಶಾಂತತೆಯಿಂದ ದೂಷಣೆಯ ದುಸ್ಥಿತಿಯನ್ನೇ ಸುಸ್ಥಿತಿಗೆ ಬದಲಾಯಿಸಿಕೊಂಡಳು. ನಾವೂ ಸಹ ಸಣ್ಣಪುಟ್ಟ ಟೀಕೆಗಳಿಗೆ ತಕ್ಷಣವೇ ಪ್ರತಿಕ್ರಿಯಿಸದೆ, ಮಲ್ಲಮ್ಮನಂತೆ ಪರಿಸ್ಥಿತಿಯನ್ನು ಪ್ರಶಾಂತ ಮನಸ್ಸಿನಿಂದ ಸ್ವೀಕರಿಸಿ, ನಮ್ಮ ಸತ್ಕರ್ಮಗಳ ಮೂಲಕವೇ ಸಮಾಜಕ್ಕೆ ಮಾದರಿಯಾದರು ಎಂದು ಹೇಳಿದರು.

ಸಾಧ್ವಿಮಣಿಯರ ಕಥೆಗಳನ್ನು ಕೇವಲ ಕೇಳುವುದಷ್ಟೇ ಅಲ್ಲ, ಅವರ ಜೀವನದ ಅದ್ಭುತ ಪವಾಡಗಳನ್ನು ಬದಿಗಿಟ್ಟು, ಅವರು ತೋರಿದ ತತ್ವಗಳು ಹಾಗೂ ಮನಸ್ಸಿನ ಪ್ರಶಾಂತತೆಯನ್ನು ನಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಯೋಚಿಸಬೇಕು. ಜಗತ್ತನ್ನು ಬದಲಾಯಿಸುವ ಮುನ್ನ ನಮ್ಮ ಸ್ವಂತ ಮನೆ ಹಾಗೂ ಕುಟುಂಬದ ನಾಲ್ಕು ಜನರನ್ನು ಪ್ರೀತಿ ಮತ್ತು ಗೌರವದಿಂದ ಗೆಲ್ಲುವುದು ಮುಖ್ಯ. ನಮ್ಮ ನಡವಳಿಕೆಯಲ್ಲಿ ಪ್ರಾಮಾಣಿಕತೆ ಇದ್ದಾಗ ಮಾತ್ರ ಸಮಾಜದಲ್ಲಿ ಗೌರವ ರಾಜಮನ್ನಣೆ ಹಾಗೂ ಗುರುಗಳ ಶ್ರೀರಕ್ಷೆ ಸಿಗಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ ಡಿ ಸುದರ್ಶನ್, ಸಿ.ಇ. ಟಿ. ಆರ್. ಟಿ ನ ಹಿರಿಯ ವಿಜ್ಞಾನಿಗಳಾದ ಡಾ. ತಿಪ್ಪೇಸ್ವಾಮಿ, ಹೇಮರೆಡ್ಡಿ ಮಲ್ಲಮ್ಮ ಬಳಗದ ಉಪಾಧ್ಯಕ್ಷರಾದ ಶಾರದಾ ಶಿವಲಿಂಗ ಸ್ವಾಮಿ, ಕಾರ್ಯದರ್ಶಿಗಳಾದ ಡಾ.ವಿಠಲ್ ಚುಳಿಕಿ, ಮಹಾಂತೇಶ್ .ಟಿ ಮತ್ತಿತರರು ಉಪಸ್ಥಿತರಿದ್ದರು.

# ಮೇ23 ನಾಲ್ವಡಿ ಪ್ರಶಸ್ತಿ ಪ್ರದಾನ



**ಮೈಸೂರು:** ರವಿಸಂತು ಬಳಗದ ವತಿಯಿಂದ ಮೇ 23 ರಂದು ಬೆಳಗ್ಗೆ 11 ರಿಂದ ರಾತ್ರಿ 9 ರವರೆಗೆ ನಗರದ ಪುರಭವನದಲ್ಲಿ ಡಾ.ರಾಜ್‌ಕುಮಾರ್ ಗೀತನಮನ ಹಾಗೂ ನಾಲ್ವಡಿ ಹೆಸರಿನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಬಳಗದ ಮುಖ್ಯಸ್ಥ ರವಿಸಂತು ತಿಳಿಸಿದರು.


ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 11 ರಿಂದ ಸಂಜೆ 5 ರವರೆಗೆ ಗಾಯನ ಕಾರ್ಯಕ್ರಮವಿದ್ದು, ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಹವ್ಯಾಸಿ ಹಾಗೂ ಇನ್ನಿತರ ಗಾಯಕರು ಡಾ. ರಾಜ್‌ಕುಮಾರ್ ಚಿತ್ರಗೀತೆಗಳನ್ನು ಹಾಡಲಿದ್ದಾರೆ. ಬಳಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಶಾಸಕ ಟಿ.ಎಸ್.ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಖ್ಯಾತ ನಟ ಅಭಿಜಿತ್ ಇನ್ನಿತರರು ವೇದಿಕೆಯಲ್ಲಿರುವರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 41 ಮಂದಿಗೆ ನಾಲ್ವಡಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದು ಸಂಪೂರ್ಣ ಉಚಿತ ಪ್ರವೇಶದ ಕಾರ್ಯಕ್ರಮವಾಗಿದೆ ಎಂದರು. ತಂಡದ ಅನುಭವಿ, ಸಿಂಚನ, ರವಿ, ಕಿರಣ್, ಶ್ರೀನಿವಾಸ್, ಸುಧಾಕರ್, ಚಂದನ್, ಪದ್ಮಾ ಹಾಗೂ ವೀಣಾ ಇದ್ದರು.

# ಮೇ22 ರಿಂದ ಗ್ರೀಷ್ಮ ರಂಗೋತ್ಸವ



**ಮೈಸೂರು:** ಚಲನ ಮೈಸೂರು ತಂಡದ ವತಿಯಿಂದ ಮೇ 22 ರಿಂದ 24 ರವರೆಗೆ ಕಲಾ ಮಂದಿರದ ಕಿರು ರಂಗಮಂದಲ್ಲಿ ಗ್ರೀಷ್ಮ ರಂಗೋತ್ಸವ ಕಾರ್ಯಕ್ರಮವನ್ನು ಬೆಂಗಳೂರಿನ ಉದ್ಭವ ಕಲಾವಿದರ, ಅರಳಿ ಸೇವಾ ಟ್ರಸ್ಟ್, ತಸ್ಮಿ ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಡನೆ ಆಯೋಜಿಸಲಾಗಿದೆ ಎಂದು ತಂಡದ ಮುಖ್ಯಸ್ಥ ದೀಪಕ್ ಮೈಸೂರು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 22 ರಂದು ಸಂಜೆ 6.30ಕ್ಕೆ ಉದ್ಘಾಟನೆ ನಡೆಯಲಿದ್ದು, ಶಾಸಕ ಹರೀಶ್‌ಗೌಡ, ಡಾ.ಡಿ.ಬಿ.ಲಿಂಗರಾಜು, ನಿರ್ಮಲ ಮಠಪತಿ, ರಶ್ಮಿಕೋಟಿ, ಶಾಂತ ವೇದಿಕೆಯಲ್ಲಿರುವರು. ಬಳಿಕ ನಾಟ್ಯ ವೈಭವ ಸೆಂಟ್ರಲ್ ಕಾಲೇಜು ವಿದ್ಯಾರ್ಥಿಗಳಿಂದ ಪ್ರಕಾಶ್ ಜಿ. ಅವರ ನನ್ನಿರಿ ನಾಟಕ, 23 ರಂದು ಸಂಜೆ 6.30ಕ್ಕೆ ಜನಮನ ಸಾಂಸ್ಕೃತಿಕ ಸಂಘಟನೆಯಿಂದ ದೇವನೂರು ಮಹಾದೇವ ಅವರ ಕೃತಿ ಆಧರಿಸಿದ ಸಂಬಂಜ ಅನ್ನೋದು ದೊಡ್ಡದು ಕನಾ ನಾಟಕ, 24 ರಂದು ಸಂಜೆ 6.30ಕ್ಕೆ ತಮ್ಮ ತಂಡದಿಂದ ಆಸಿಫ್ ಕ್ಷತ್ರಿಯ ಅವರ ರಚನೆಯ ಎರಡೆರಡ್ಲಾ ಐದು ಎಂಬ ನಾಟಕ ಪ್ರದರ್ಶನ ನಡೆಯಲಿದೆ. ಇವುಗಳಿಗೆ ಟಿಕೆಟ್ ಇಲ್ಲ. ಆದರೆ ಪ್ರೋತ್ಸಾಹಧನ ನೀಡಬಹುದಾಗಿದೆ ಎಂದು ಮಾಹಿತಿ ನೀಡಿದರು. ಚಿತ್ರ ನಿರ್ಮಾಪಕ ಬಾಬು, ಹಿರಿಯ ರಂಗಕರ್ಮಿ ನಾಗೇಂದ್ರ ಪ್ರಸಾದ್, ರಾಧಾ ನಾರಾಯಣಗೌಡ, ಸಾಗರ್ ಇದ್ದರು.



**ಕೃಷ್ಣ ವಂದನ**



**ಸ್ನೇಹಾ ಆನಂದ್**

### ಹೇ ಕೃಷ್ಣಾ!

**ದಣಿಕೆಯಾಯಿತೆ ದೊರೆಯೇ,**
**ಧರೆಯನಾಳುತ ಭರದಿ,**
**ಕಲಿಯುಗದಲಿ ಕೃಷ್ಣ ಕೃಪೆಯ ತೋರುತಲಿ!**

**ಮಂದಹಾಸವ ಬೀರಿ ತರುಲತೆಗಳು,**
**ಸೂರ್ಯ, ಚಂದ್ರರ ಕಿರಣದಲಿ!**
**ಕರುಗಳು ಕರೆಯುವವು ನಿನ್ನ ಪ್ರೀತಿಯಲಿ**
**ತನ್ನ ದೊರೆ ಮುರಳಿಗೆ ತಲೆದೂಗುತಿಹವು!**

**ತೇತ್ರಾ ಯುಗದಲಿ ರಾಮನಾಗಿ ಬಂದೆ,**
**ಕಲಿಯುಗದಲಿ ನೀ ನಿಂದೆ ಕೃಷ್ಣನಾಗಿ !**
**ಹೇಮಗಿರೀಶನಾಗಿ ಹಯವದನ ಪ್ರಿಯನಾಗಿ**
**ಪರಿಮಳಾರ್ಯರಿಗೆ ನೀ ಒಲಿದು ಬಂದೆ!**

# ಸರ್ಕಾರಿ ಪಠ್ಯಪುಸ್ತಕ ವಿತರಣೆ ಆರಂಭ: ಬಿಇಓ

**ರಾಮನಗರ:** ರಾಜ್ಯ ಸರ್ಕಾರ ಪ್ರಕಟಿಸಿರುವ 2026–27ನೇ ಸಾಲಿನ ಪಠ್ಯ ಪುಸ್ತಕಗಳ ವಿತರಣಗೆ ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಸೋಮಲಿಂಗಯ್ಯ ಚಾಲನೆ ನೀಡಿದರು.

ನಗರದಲ್ಲಿರುವ ಬಿಇಓ ಕಚೇರಿಯಲ್ಲಿ ಕೆಲವು ಸರ್ಕಾರಿ ಶಾಲೆಗಳ ಮುಖ್ಯಶಿಕ್ಷಕರಿಗೆ ಸಾಂಕೇತಿಕವಾಗಿ ಪಠ್ಯಪುಸ್ತಕಗಳನ್ನು ನೀಡುವ ಮೂಲಕ ವಿತರಣೆಗೆ ಚಾಲನೆ ನೀಡಿದ ವೇಳೆ ಮಾತನಾಡಿದ ಅವರು, ಕರ್ನಾಟಕ ಪಠ್ಯ ಪುಸ್ತಕ ಸಂಘದಿಂದ 2026–27ನೇ ಸಾಲಿಗೆ ಶೇ 75ರಷ್ಟು ಪಠ್ಯಪುಸ್ತಕಗಳನ್ನು ಸರಬರಾಜು ಮಾಡಿದೆ. ಶಾಲಾ ಆರಂಭದ ದಿನವೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಲಭ್ಯವಾಗಬೇಕು, ಹೀಗಾಗಿ ಎಲ್ಲ ಸಿದ್ದತೆಗಳನ್ನು ಸರ್ಕಾರದ ಆದೇಶದಂತೆ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ವೇಳೆ ಬಿ.ಆರ್.ಸಿ ಬಿ.ಸಿ.ಸುರೇಶ್, ಪಠ್ಯ



ಪುಸ್ತಕ ನೋಡಲ್ ಅಧಿಕಾರಿ ನವೀನ್ ಕುಮಾರ್ ಶಿಂಧೆ ಮತ್ತು ರಾಜಣ್ಣ.ಎಂ.ಜಿ., ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ಶಿವಸ್ವಾಮಿ, ಸಿಆರ್‌ಪಿ ಮುನಿಯಪ್ಪ, ಶಿಕ್ಷಕ ಹನುಮಯ್ಯ ಇದ್ದರು.

**ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ, ಕೃಷ್ಣರಾಜನಗರ**
**14/74, ಮೊದಲನೇ ಮಹಡಿ, 7ನೇ ರಸ್ತೆ, ಗಣೇಶ್ ಕ್ಲಿನಿಕ್ ಮುಂಭಾಗ, ಕೃಷ್ಣರಾಜನಗರ–571602.**
**Email Id: adtpkrnagar@gmail.com Ph: 08223-262298**
**ಸಂ:ನಯೋಪ್ರಾ/ಕೆ.ಆರ್.ನಗರ/ಅ.ಟೆಂ.ಆ./2026–27/89 ದಿನಾಂಕ:18.05.2026**

**ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಪ್ರಕಟಣೆ**

ಕೃಷ್ಣರಾಜನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ಅತ್ಯಾವಶ್ಯಕವಾಗಿರುವ ಈ ಕೆಳಕಂಡ ಸಿಬ್ಬಂದಿ ವರ್ಗದವರನ್ನು ಬಾಹ್ಯ ಮೂಲಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಹತ್ತು ತಿಂಗಳ ಅವಧಿಯವರೆಗೆ ಸದರಿ ಸೇವೆಯನ್ನು ಪಡೆಯಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಸೇವೆಯನ್ನು ಪಡೆಯುವ ಸಿಬ್ಬಂದಿ ವರ್ಗದವರ ವಿವರ ಈ ಕೆಳಕಂಡಂತಿದೆ.

**ಸೇವೆಯನ್ನು ಪಡೆಯುವ ಸಿಬ್ಬಂದಿ ವರ್ಗದವರ ವಿವರ:**

1. ಕಂಪ್ಯೂಟರ್ ಆಪರೇಟರ್ (ಡಾಟಾ ಎಂಟ್ರಿ) – 01
2. ಗ್ರೂಪ್ 'ಡಿ' ನೌಕರರು – 01

ಈ ಮೇಲ್ಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಸೇವೆಯನ್ನು ಈ ಕಛೇರಿಗೆ ಸರಬರಾಜು ಮಾಡಲು ಸಕ್ಷಮ ಪ್ರಾಧಿಕಾರದಿಂದ ನೋಂದಣಿಯಾಗಿರುವ ಅರ್ಹ ಸಂಸ್ಥೆ/ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಹ್ವಾನಿಸಲಾಗಿರುತ್ತದೆ.

**1)** 2026–27 ನೇ ಸಾಲಿಗೆ 01.06.2026 ರಿಂದ 31.03.2027 ರವರೆಗೆ (ಹತ್ತು ತಿಂಗಳ ಅವಧಿಗೆ) ಅನ್ವಯವಾಗುವಂತೆ ಈ ಮೇಲಿನ ಹುದ್ದೆಗಳಿಗೆ ಕೋರುವ ಮಾಸಿಕ ಕನಿಷ್ಠ ವೇತನ, ಪಿ.ಎಫ್. ಇ.ಎಸ್.ಐ, ಸರ್ವಿಸ್ ಚಾರ್ಜ್ ಮತ್ತು ಜಿ.ಎಸ್.ಟಿ ಈ ಎಲ್ಲಾ ವಿವರಗಳೊಂದಿಗೆ ಸಲ್ಲಿಸುವ ದರಪಟ್ಟಿಯು ರೂ.5.00 ಲಕ್ಷವನ್ನು ಮೀರತಕ್ಕದ್ದಲ್ಲ. **2)** ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ ಏಳು(07) ದಿನದೊಳಗೆ ಸಂಜೆ 4.00 ಗಂಟೆಯೊಳಗೆ ದರಪಟ್ಟಿಯನ್ನು ಸದಸ್ಯ ಕಾರ್ಯದರ್ಶಿಗಳು, ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ, ಕೃಷ್ಣರಾಜನಗರ ಕಛೇರಿಗೆ ಸಲ್ಲಿಸತಕ್ಕದ್ದಾಗಿರುತ್ತದೆ. **3)** ಅದೇ ದಿನ ಸಂಜೆ 5.00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ತೆರೆಯಲಾಗುವುದು. **4)** ಅತ್ಯಂತ ಕಡಿಮೆ ದರದ ದರಪಟ್ಟಿಯನ್ನು ಅಂಗೀಕರಿಸಲಾಗುವುದು. ಅಂಗೀಕರಿಸಿದ ಅಲ್ಪಾವಧಿ ಟೆಂಡರ್‌ದಾರರು ಕಂಪ್ಯೂಟರ್ ಆಪರೇಟರ್ ಮತ್ತು ಗ್ರೂಪ್ 'ಡಿ' ನೌಕರರನ್ನು ಸರಬರಾಜು ಮಾಡಲು ಸದಸ್ಯ ಕಾರ್ಯದರ್ಶಿಗಳು, ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ, ಕೃಷ್ಣರಾಜನಗರ ರವರೊಂದಿಗೆ ಜಂಟಿಯಾಗಿ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು. **5)** ಹೆಚ್ಚಿನ ವಿವರಗಳಿಗೆ ಕಚೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಅಲ್ಪಾವಧಿ ಟೆಂಡರ್ ಅನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಇವರು ಕಾಯ್ದಿರಿಸಿಕೊಂಡಿರುತ್ತಾರೆ.

**ಸಹಿ/– ಅಧ್ಯಕ್ಷರು**
**ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ,**
**ಕೃಷ್ಣರಾಜನಗರ.**

**ಸಹಿ/– ಸದಸ್ಯ ಕಾರ್ಯದರ್ಶಿಗಳು**
**ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ,**
**ಕೃಷ್ಣರಾಜನಗರ.**

DIPR/DDMYS/198/KSMCA/147/2026-27


# ತಾರತಮ್ಯದಿಂದ ಕೂಡಿದ ಶಿಕ್ಷಣ ದೇಶಕ್ಕೆ ಮಾರಕ: ಡಾ.ದೇವರಾಜು

**ಚಾಮರಾಜನಗರ:** ಶಿಕ್ಷಕರು ಮತ್ತು ಮಕ್ಕಳ ಪರವಲ್ಲದ ಹಾಗೂ ತಾರತಮ್ಯಗಳಿಂದ ಕೂಡಿರುವ ಶಿಕ್ಷಣ ನೀತಿಗಳು ದೇಶಕ್ಕೆ ಮಾರಕವಾಗಿದೆ ಎಂದು ಭೋಗಾಪುರ ವಸತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೇವರಾಜ್ ಆತಂಕ ವ್ಯಕ್ತಪಡಿಸಿದರು.

ನಗರದ ಪರಿವರ್ತನಾ ಅಧ್ಯಯನ ಕೇಂದ್ರದಲ್ಲಿ ಸೇವಾ ನಿರತ ಶಿಕ್ಷಕರಿಗಾಗಿ ಮಂಗಳವಾರ ಆಯೋಜಿಸಿದ್ದ ಟಿಇಟಿ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಹಲವಾರು ಒತ್ತಡಗಳನ್ನು ಅನುಭವಿಸುತ್ತಿದ್ದಾರೆ. ಕಾಲಕಾಲಕ್ಕೆ ಬದಲಾದ ಶಿಕ್ಷಣ ನೀತಿಗಳಿಂದ ಶಿಕ್ಷಕರು ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಶಿಕ್ಷಣ ನೀತಿಗಳ ಹುನ್ನಾರಗಳನ್ನು ಶಿಕ್ಷಕರು ಅರಿತುಕೊಳ್ಳದಿದ್ದರೇ ಭವಿಷ್ಯದಲ್ಲಿ ಶಿಕ್ಷಕರು ಅಪಾಯವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ದೇಶದಲ್ಲಿ ಕೇವಲ ಶೇ.14 ಜನರಿಗಷ್ಟೇ ಶಿಕ್ಷಣವಿತ್ತು. ಆದರೆ ನಮ್ಮ ಸಂವಿಧಾನ ರಚನಾಕಾರರು ಪ್ರತಿಯೊಬ್ಬರಿಗೂ ಶಿಕ್ಷಣದ ಅವಕಾಶ ಕಲ್ಪಿಸಿಕೊಡುತ್ತಾರೆ. ಸಾವಿರಾರು ಭಾಷೆ ಮತ್ತು ಸಂಸ್ಕೃತಿಯನ್ನು ಒಳಗೊಂಡಿರುವ ದೇಶದಲ್ಲಿ ಪ್ರತಿಯೊಬ್ಬರಿಗೂ ಅತ್ಯುತ್ತಮ ಶಿಕ್ಷಣವನ್ನು ನೀಡಬೇಕಿದೆ. ಆದರೆ ಸರ್ಕಾರಗಳು ಮ್ಯಾಗ್ನೆಟಿಕ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿರುವುದು ಆತಂಕವನ್ನು ಸೃಷ್ಟಿಸುತ್ತಿದೆ. 10–20 ಶಾಲೆಗಳನ್ನು ವಿಲೀನಗೊಳಿಸಿ ಒಂದು ಶಾಲೆ ಮಾಡಿದರೇ, ಅಲ್ಲಿಗೆ ಮೂಲಸೌಕರ್ಯವನ್ನು ಹೇಗೆ ಕಲ್ಪಿಸುತ್ತಾರೆ ಎಂಬ ಪ್ರಶ್ನೆ ಎದುರಾಗಿದೆ. ಶಿಕ್ಷಕರ ಜೊತೆಗೆ ಚರ್ಚಿಸದೇ ಶಿಕ್ಷಕರ ನೀತಿಗಳನ್ನು ಜಾರಿ ಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.



ಹನೂರು ಜಿ.ವಿ.ಗೌಡ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ನಂಜುಂಡಯ್ಯ ಮಾತನಾಡಿ, ನಾವು ರಾಜ್ಯ ಪಠ್ಯಕ್ರಮಗಳ ಜೊತೆಗೆ ಕೇಂದ್ರಿಯ ಪಠ್ಯಕ್ರಮಗಳನ್ನು ಅಧ್ಯಯನ ಮಾಡುವ ಮೂಲಕ ಟಿಇಟಿಯಂತಹ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಸಿದ್ಧತೆ ನಡೆಸಬೇಕಿದೆ ಎಂದು ಸಲಹೆ ನೀಡಿದರು.

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕ ಪ್ರೊ.ರಮೇಶ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಪ್ರತಿಯೊಬ್ಬರಲ್ಲೂ ಅಧ್ಯಯನ ಶೀಲತೆ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬರ ಮನೆಯಲ್ಲಿ ದೇವರ ಮನೆ ಇರುತ್ತದೆಯೇ ಹೊರತು ಅಧ್ಯಯನ ಕೋಣೆ ಇರುವುದಿಲ್ಲ. ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಅಧ್ಯಯನ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಾಮರಾಜನಗರ ವಿಶ್ವವಿದ್ಯಾಲಯ ಕನ್ನಡ ಪ್ರಾಧ್ಯಾಪಕ ಪ್ರೊ.ಬಸವಣ್ಣ ಮೂಕಹಳ್ಳಿ, ಎಸ್ಸಿ, ಎಸ್ಟಿ ನೌಕರರ ಸಂಘದ ಕಾರ್ಯಾಧ್ಯಕ್ಷ ಸಿ.ಎನ್.ಶಿವಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಶಿಕ್ಷಕರಾದ ಶಶಿಕಲಾ, ನಂದಿನಿ, ನಟರಾಜ್, ಕುಮಾರ್, ಶಿವಕುಮಾರ್ ಹಾಗೂ ಇತರರು ಹಾಜರಿದ್ದರು.

# ವರಸುದಾರರ ಪತ್ತೆಗಾಗಿ ಮನವಿ

**ಬೆಂಗಳೂರು:** ಚನ್ನಪಟ್ಟಣ ಮತ್ತು ರಾಮನಗರ ರೈಲು ನಿಲ್ದಾಣಗಳ ನಡುವೆ ರೈಲ್ವೇ ಕೀ.ಮೀ ನಂ.50/800–900 ರ ಅಪ್ ಲೈನ್ ರೈಲ್ವೇ ಹಳಿ ಬಳಿ ಮೇ 16 ರಂದು ಅಪರಿಚಿತ ಗಂಡಸು ( ಸುಮಾರು 30 ರಿಂದ 35) ರೈಲಿಗೆ ಸಿಕ್ಕಿ ಮೃತಪಟ್ಟಿರುತ್ತಾರೆ. ಈ ಬಗ್ಗೆ ರೈಲ್ವೇ ಪೊಲೀಸ್ ಠಾಣೆಗೆ ಪ್ರಕರಣ ದಾಖಲಾಗಿರುತ್ತದೆ.

ಮೃತನ ಚಹರೆ: ಎತ್ತರ 170 ಅಡಿ, ಸಣಕಲು ಶರೀರ, ಗೋಧಿ ಮೈಬಣ್ಣ, ಕೋಲು ಮುಖ,ನೀಳವಾದ ಮೂಗು,ಅಗಲವಾದ ಹಣೆ, ಅಗಲವಾದ ಕಿವಿ ಇರುತ್ತದೆ.ಎಡಗೈನ ಮೊಣಕೈ ಮೇಲೆ "ಟಂಟ" ಹಾಗೂ ಬಲಗೈ ಮೊಣಕೈನ ಮೇಲೆ "vinu" ಎಂಬ ಅಚ್ಚೆ ಗುರುತು ಇರುತ್ತದೆ.

ಅಪರಿಚಿತ ಗಂಡಸಿನ ಮೃತದೇಹವನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ



ಇರಿಸಲಾಗಿದ್ದು, ಮೃತ ಗಂಡಸಿನ ವಾರಸುದಾರರು ಇದಲ್ಲಿ ಕಂಟೋನ್ಮೆಂಟ್ ರೈಲ್ವೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–22371057 ರೈಲ್ವೇ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 080–22871291 ಅನ್ನು ಸಂಪರ್ಕಿಸಬಹುದು ಎಂದು ಕಂಟೋನ್ಮೆಂಟ್ ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕರು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




**ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ವಿಧಾನ ಪರಿಷತ್ತಿನ ಸದಸ್ಯರಾದ ಪುಟ್ಟಣ್ಣ ರವರು ಉದ್ಘಾಟಣೆ ಮಾಡಿ ಮಾತನಾಡಿದರು.**

## ಜ್ಞಾನ ಭಾರತಂ ಮಿಷನ್ ಯೋಜನೆಗೆ ಮುಂದಿನ ಪೀಳಿಗೆಗೆ ಸಹಕಾರ

# ಜ್ಞಾನ ಸಂಪತ್ತಿನ ಸಂರಕ್ಷಣೆಗೆ ಅಗತ್ಯ: ಡಾ.ಕುಮಾರ

**ಮಂಡ್ಯ:** ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಅನ್ನು ಜಾರಿಗೆ ತಂದಿದ್ದು ಈ ಯೋಜನೆಯಲ್ಲಿ ಸಾವಿರಾರು ಶತಮಾನದ ವರ್ಷಗಳ ಹಿಂದೆ ಇದ್ದ ಹಳೆಯ ಸಂಪ್ರದಾಯಿಕ ಹಸ್ತ ಪ್ರತಿ ಹಾಗೂ ತಾಳೆ ಪತ್ರಗಳನ್ನು ಸಂರಕ್ಷಣೆ ಮಾಡುವುದರಿಂದ ಮುಂದಿನ ಪೀಳಿಗೆಗೆ ಜ್ಞಾನ ಸಂಪತ್ತಿನ ಸಂರಕ್ಷಣೆ ಮಾಡಿ ಹಸ್ತಪ್ರತಿ ತಾಳೆ ಪತ್ರಗಳನ್ನು ಡಿಜಿಟಲೀಕರಣಗೊಳಿಸಿ ಶಾಶ್ವತವಾಗಿ ಸಂರಕ್ಷಣೆ ಮಾಡುವಂತೆ ಸೂಚಿಸಿದರು.

ದಿನಾಂಕ 19–05–2026 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಭಾರತ ಸರ್ಕಾರದ ಕೇಂದ್ರ ಸಂಸ್ಕೃತಿ ಮಂತ್ರಾಲಯದ ಜ್ಞಾನ ಭಾರತಂ ಮಿಷನ್ ಅಡಿ ರಾಷ್ಟ್ರೀಯ ಹಸ್ತ ಪ್ರತಿ ಸಮೀಕ್ಷೆಯ ಜಿಲ್ಲಾ ಮಟ್ಟದ ಕಾರ್ಯ ಚಟುವಟಿಕೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವ ಸಂಬಂಧ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಜ್ಞಾನ ಭಾರತಂ ಮಿಷನ್ ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ದೇಶದ ಪ್ರಾಚೀನ ಹಸ್ತ ಪ್ರತಿಗಳನ್ನು (ಹಳೆಯ ಹಸ್ತಪ್ರತಿಗಳು/ಗ್ರಂಥಗಳು) ಸಂರಕ್ಷಿಸಲು, ಡಿಜಿಟಲೀಕರಣಗೊಳಿಸಲು ಮತ್ತು ಜಾಗತಿಕವಾಗಿ ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಆರಂಭಿಸಲಾಗಿದೆ ಎಂದು ತಿಳಿಸಿದರು.




ಯೋಜನೆಯ ಪ್ರಮುಖ ಉದ್ದೇಶ ಪ್ರಾಚೀನ ಭಾರತೀಯ ಜ್ಞಾನ, ವಿಜ್ಞಾನ, ಕಲೆ ಮತ್ತು ತತ್ವಶಾಸ್ತ್ರದ ಬರವಣಿಗೆಗಳನ್ನು ನಾಶವಾಗದಂತೆ ರಕ್ಷಿಸುವುದು ಮತ್ತು ಯುವ ಪೀಳಿಗೆಗೆ ತಲುಪಿಸುವುದು ಆಗಿದೆ.ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ಬಳಸಿ ಹಳೆಯ ಕೈಬರಹಗಳನ್ನು ಓದಿ ಡಿಜಿಟಲ್ ರೂಪಕ್ಕೆ ಪರಿವರ್ತಿಸಲಾಗುತ್ತಿದೆ ಎಂದು ತಿಳಿಸಿದರು.

ಜ್ಞಾನ ಭಾರತಂ ಮಿಷನ್ ಅಡಿಯಲ್ಲಿ ಹಸ್ತಪ್ರತಿ ಹಾಗೂ ತಾಳೆ ಪತ್ರಗಳ ದಾಖಲೆಗಳ ಸಂರಕ್ಷಣೆ ಜೊತೆಗೆ ಜ್ಞಾನದ ಸಂರಕ್ಷಣೆಯನ್ನು ಮಾಡಬಹುದಾಗಿದ್ದು ದೇವಾಲಯಗಳು, ಮಠಗಳು, ಶೈಕ್ಷಣಿಕ ಸಂಸ್ಥೆಗಳು, ಮತ್ತು ಖಾಸಗಿ ಗ್ರಂಥಾಲಯಗಳಲ್ಲಿ ಹಸ್ತಪ್ರತಿಗಳನ್ನು ಗುರುತಿಸಿ ದಾಖಲಿಸಬೇಕು ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಹಸ್ತ ಪ್ರತಿ ಸಂರಕ್ಷಕರಲ್ಲಿ ಮಿಷನ್ ಉದ್ದೇಶಗಳ ಕುರಿತು ಸ್ಥಳೀಯ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿ ರಾಘವೇಂದ್ರ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೇ, 22 ರಂದು ನೇರ ಸಂದರ್ಶನ

**ಮಡಿಕೇರಿ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮೇ, 22 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ?ನೇರ ಸಂದರ್ಶನ? ಆಯೋಜಿಸಲಾಗಿದೆ. ನೇರ ಸಂದರ್ಶನದಲ್ಲಿ ಜೆಕೆ ಟೈರ್ಸ್ ಮೈಸೂರು ಅವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಈ ನೇರ ಸಂದರ್ಶನದಲ್ಲಿ ?ಜೆಕೆ ಟೈಯರ್ಸ್ ಮೈಸೂರು? ಇವರು ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ನೇರ ಸಂದರ್ಶನದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮ, ಪದವಿ ಹಾಗೂ ಸ್ನಾತಕೋತರ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಿ ಉದ್ಯೋಗದ ನೇರವು ಪಡೆಯಬಹುದಾಗಿದೆ. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣಪತ್ರ (ಅನ್ವಯಿಸುವವರಿಗೆ ಮಾತ್ರ) ಹಾಗೂ ಸ್ವ-ವಿವರಗಳ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಜಾಬ್ ಕೋಆರ್ಡಿನೇಟರ್ 8296020826 ಅವರನ್ನು ಸಂಪರ್ಕಿಸಬಹುದು.

# ಬಾಡಿಗೆ ಕಟ್ಟಡ ಒದಗಿಸಲು ಮನವಿ

**ಮಡಿಕೇರಿ:** ನಗರ ವ್ಯಾಪ್ತಿಯಲ್ಲಿ 01 ಮೌಲಾನಾ ಆಜಾದ್ ಮಾದರಿ ಶಾಲೆಯನ್ನು ಪ್ರಾರಂಭಿಸಲು ಪ್ರತಿ ಕೊಠಡಿಗೆ 60 ಸಂಖ್ಯಾಬಲಕ್ಕೆ ಅನುಗುಣವಾಗಿ ಸುಮಾರು 07 ರಿಂದ 08 ಕೊಠಡಿಗಳನ್ನೊಳಗೊಂಡ ಸುಸಜ್ಜಿತವಾದ ಬಾಡಿಗೆ ಕಟ್ಟಡ ಬೇಕಿದೆ. ಈ ಕಟ್ಟಡವು ಮೂಲಭೂತ ಸೌಕರ್ಯಗಳಾದ 24*7 ನೀರಿನ ವ್ಯವಸ್ಥೆ, 24*7 ವಿದ್ಯುತ್ ಸರಬರಾಜು, ಸೂಕ್ತವಾದ ಪಾರ್ಕಿಂಗ್ ವ್ಯವಸ್ಥೆ, ಲ್ಯಾಬ್, ಗ್ರಂಥಾಲಯ, ಕಂಪ್ಯೂಟರ್ ಸೌಲಭ್ಯ ಹಾಗೂ ಇತರೆ ಸಂಗ್ರಹಕ್ಕೆ ಪ್ರತ್ಯೇಕವಾದ ಸ್ಥಳಾವಕಾಶ, ಸೂಕ್ತವಾದ ಗಾಳಿ ಬೆಳಕು ಹೊಂದಿರಬೇಕು. ಕಟ್ಟಡಕ್ಕೆ ಸೇಪ್ಟಿ ಆರ್ಥಿಂಗ್ ಇರಬೇಕು. ಕಟ್ಟಡವು ವಿದ್ಯುತ್ ಕಂಬಗಳಿಂದ ಸೂಕ್ತವಾದ ಅಂತರದಲ್ಲಿರಬೇಕು ಹಾಗೂ ಕಟ್ಟಡವು ವಿದ್ಯುತ್ ತಂತಿಗಳಿಂದ ಸುರಕ್ಷತೆ ಕಾಯ್ದುಕೊಂಡಿರಬೇಕು. ಕಟ್ಟಡವು ನಿ?ೇದಿತ ಹಾಗೂ ವ್ಯಸನ ಪದಾರ್ಥಗಳಿಂದ ಮುಕ್ತವಾದ ಸ್ಥಳದಲ್ಲಿರಬೇಕು. ಕಟ್ಟಡವು ಬಸ್ ನಿಲ್ದಾಣಕ್ಕೆ ಹತ್ತಿರದಲ್ಲಿರಬೇಕು. ಕಟ್ಟಡದ ಮಾಲೀಕರು ಟೈಟಲ್‌ಡೀಡ್ ಹೊಂದಿರಬೇಕು.

ಆಸಕ್ತಿಯುಳ್ಳ ಕಟ್ಟಡ ಮಾಲೀಕರು 08272-225528, ಮೊ.ಸಂ.9972171266, 9972799091 ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ದಿವಾಕರ ಅವರು ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

**ಮಡಿಕೇರಿ:** ಪ್ರಸಕ್ತ(2026-27) ಸಾಲಿನ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೊಮೊ ಕೋರ್ಸ್ ಕಲಿಕೆಗಾಗಿ 39 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ(ಕರ್ನಾಟಕ) (22 ಅಭ್ಯರ್ಥಿಗಳು), ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ(ತಮಿಳುನಾಡು) 12 ಅಭ್ಯರ್ಥಿಗಳು, ಎಸ್‌ಪಿಕೆಎಂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ(ನೆಲ್ಲೂರು ಜಿಲ್ಲೆ, ಆಂದ್ರಪ್ರದೇಶ) 03 ಅಭ್ಯರ್ಥಿಗಳು ಹಾಗೂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು(ಕೇರಳ) (02 ಅಭ್ಯರ್ಥಿಗಳು) ಈ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ.2,500 ರಂತೆ ಶಿಷ್ಯ ವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲೀಷ್ ಅನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. 2026 ರ ಜುಲೈ, 01 ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು 15 ರಿಂದ 23 ರ ವಯೋಮಿತಿಯಲ್ಲಿರಬೇಕು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು 15 ರಿಂದ 25 ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೂಢೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾಗಿರುತ್ತದೆ. ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾಯ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಿಲಿಂಗ್‌ಗಾಗಿ ಕರೆಯಲಾಗುವುದು. ಆಸಕ್ತಿ ಇರುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಮತ್ತು ಅರ್ಜಿ ಫಾರಂಗಳಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ಮೊ.ಸಂ.9916143619 ಅಥವಾ ಆಯಾಯ ಜಿಲ್ಲೆಯ ಸಹಾಯಕ ನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ(ಡಿಐಸಿ), ಕೊಹಿನೂರು ರಸ್ತೆ, ಮಡಿಕೇರಿ ದೂ.ಸಂ.08272-220365 ನ್ನು ಸಂಪರ್ಕಿಸಬಹುದು.

# ಎಸ್ಸಿ, ಎಸ್ಟಿಗಳ ಮೀಸಲಾತಿ ಕಸಿಯುವ ಕಾಂಗ್ರೆಸ್ :ಶ್ರೀರಾಮುಲು ಆರೋಪ

**ಮೈಸೂರು:** ಹಿಂದಿನ ಬಿಜೆಪಿ ಸರ್ಕಾರ ಎಸ್ಸಿ, ಎಸ್ಟಿ ಸಮುದಾಯಗಳಿಗೆ ಮಾಡಿದ್ದ ಮೀಸಲಾತಿ ಹೆಚ್ಚಳವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಕಸಿದುಕೊಳ್ಳುವ ಮೂಲಕ ಆ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮು ಆರೋಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, 30 ವರ್ಷಗಳ ನಿರಂತರ ಹೋರಾಟ ಹಾಗೂ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯ ಆಧಾರದ ಮೇಲೆ, ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ದೃಢ ನಿರ್ಧಾರ ಕೈಗೊಂಡು ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15 ರಿಂದ ಶೇ.17ಕ್ಕೆ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿತ್ತು. ಈ ನಿರ್ಧಾರಕ್ಕೆ ಅಂದು ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಸೇರಿ ಸರ್ವಪಕ್ಷಗಳೂ ಒಮ್ಮತದ ಬೆಂಬಲ ಸೂಚಿಸಿದ್ದವು. ಆದರೆ, ಕಾಂಗ್ರೆಸ್ ಸರ್ಕಾರ ಈ ಮೀಸಲಾತಿ ಸೌಲಭ್ಯ ಕಸಿದುಕೊಳ್ಳುವ ಕೆಲಸ ಮಾಡಿದೆ ಎಂದು ಕಿಡಿಕಾರಿದರು.

ಮೀಸಲಾತಿ ಹೆಚ್ಚಳದ ವಿರುದ್ಧ ರಾಯಚೂರಿನ ಕಾಂಗ್ರೆಸ್ ವ್ಯಕ್ತಿಯೊಬ್ಬರು ನ್ಯಾಯಾಲಯದ ಮೆಟ್ಟಿಲೇರಿದಾಗ, ರಾಜ್ಯ ಸರ್ಕಾರದ ಪರ ವಕೀಲರು ಸಮರ್ಪಕವಾಗಿ ವಾದ ಮಂಡಿಸದ ಕಾರಣ ಹೈಕೋರ್ಟ್‌ನಲ್ಲಿ ತಾತ್ಕಾಲಿಕ ತಡೆಯಾಜ್ಞೆ ಬಂದಿದೆ. ಇದರ ಬೆನ್ನಲ್ಲೇ ಎಸ್‌ಟಿ ಸಮುದಾಯದ ಮೀಸಲಾತಿಯನ್ನು ರಾತ್ರೋರಾತ್ರಿ ಮತ್ತೆ ಶೇ.3ಕ್ಕೆ ಇಳಿಸುವಂತಹ ಗೊಂದಲಕಾರಿ ಆದೇಶವನ್ನು ಸರ್ಕಾರ ಹೊರಡಿಸಿದೆ. ಇದರಿಂದಾಗಿ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದ ನೂರಾರು ಬಡ ವಿದ್ಯಾರ್ಥಿಗಳ ಭವಿಷ್ಯ ಕತ್ತಲಿಗೆ ದೂಡಲ್ಪಟ್ಟಿದೆ. ಸರ್ಕಾರದ ಈ ಎಡವಟ್ಟಿನಿಂದ ಬೇಸತ್ತು ಈಗಾಗಲೇ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಾವುಗಳಿಗೆ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿದರು.

ಬೆಳಗಾವಿ ಅಧಿವೇಶನದಲ್ಲಿ ಒಳಮೀಸಲಾತಿಗಾಗಿ 6-6-5 ಮಾದರಿಯ ವರ್ಗೀಕರಣದ ಮಸೂದೆ ಅಂಗೀಕರಿಸಿ, ಡಿಸೆಂಬರ್ 2025ರಲ್ಲಿ ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಯಿತು. ತದನಂತರ ರಾಜ್ಯಪಾಲರ ಬಳಿ ಹೋಗಿ ಶೇ.17ರ ವರ್ಗೀಕರಣಕ್ಕೆ ಸಹಿ ಮಾಡಿಸಿಕೊಂಡು ಬಂದ ಸರ್ಕಾರ, ಅದೇ ದಿನ ಸಂಜೆ ಸಚಿವ ಸಂಪುಟ ಸಭೆ ಕರೆದು ಸುಪ್ರೀಂ ಕೋರ್ಟ್ ಮಿತಿಯಾದ ಶೇ.50ರ ಒಳಗಡೆಯೇ ಮೀಸಲಾತಿ ನಿರ್ವಹಿಸುತ್ತೇವೆ ಎಂದು ಉಲ್ಟಾ ಹೊಡೆಯಿತು. ರಾಜಭವನಕ್ಕೆ ಒಂದು ಮಾಹಿತಿ ನೀಡಿ, ಕ್ಯಾಬಿನೆಟ್‌ನಲ್ಲಿ ಮತ್ತೊಂದು ತೀರ್ಮಾನ ಮಾಡುವ ಮೂಲಕ ಇಡೀ ಪ್ರಕ್ರಿಯೆಯನ್ನು ಕಗ್ಗಂಟಾಗಿಸಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎನ್.ಮಹೇಶ್, ಹರ್ಷವರ್ಧನ್, ಎಲ್.ನಾಗೇಂದ್ರ, ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್, ಜಿಲ್ಲಾ ವಕ್ತಾರ ಡಾ.ಕೆ.ವಸಂತ್ ಕುಮಾರ್, ಮುಖಂಡರಾದ ಎಸ್.ಮಹಾದೇವಯ್ಯ, ಮಹಿಳಾ ಮೋರ್ಚಾದ ರಾಜ್ಯ ಉಪಾಧ್ಯಕ್ಷೆ ಪ್ರಫುಲ್ಲಾ ಮಲ್ಲಾಡಿ, ಪ್ರಧಾನ ಕಾರ್ಯದರ್ಶಿ ಸೋಮ ಸುಂದರ್, ರುದ್ರಮೂರ್ತಿ, ಪರೀಕ್ಷಿತ್ ಅರಸು, ಎಸ್ ಸಿ ಮೋರ್ಚಾದ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ಎಸ್ ಟಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ನವೀನ್, ನಗರ ಮಾಧ್ಯಮ ಪ್ರಮುಖರಾದ ಮಹೇಶ್ ರಾಜೇಶ್ ಅರಸು, ಸಂತೋಷ್, ಜಯ್ ಶೇಖರ್ ಇನ್ನಿತರರು ಉಪಸ್ಥಿತರಿದ್ದರು






ಸಿದ್ದರಾಮಯ್ಯ ಅವರೇ ಮೀಸಲಾತಿ ಕಡಿತದ ಮೂಲಕ ಸಾಮಾಜಿಕ ಅನ್ಯಾಯದ ಕಳನಾಯಕರಾಗಬೇಡಿ. ಶಾಸನಬದ್ಧವಾಗಿರುವುದನ್ನು ಕಡಿತಗೊಳಿಸಿ ಸಂವಿಧಾನಕ್ಕೆ ಅಪಚಾರ ಎಸಗಿದ್ದೀರಿ. ಈ ನಿರ್ಧಾರವನ್ನು ತಕ್ಷಣವೇ ವಾಪಸ್ ಪಡೆಯಿರಿ.

। ಸಿ.ಟಿ.ರವಿ, ಮಾಜಿ ಸಚಿವ.

## ಸ್ಥಳೀಯ ಚುನಾವಣೆ ನಡೆಸಿ: ಸಿ.ಟಿ.ರವಿ ಸವಾಲು

**ಮೈಸೂರು:** ನೆನ್ನೆಯಷ್ಟೇ ಸಾಧನಾ ಸಮಾವೇಶ ಮಾಡಿ ಸವಾಲು ಸ್ವೀಕರಿಸಲು ಸಿದ್ಧ ಎಂದು ಭಾಷಣ ಬಿಗಿದ ಸಿದ್ದರಾಮಯ್ಯ, ಈಗ ಉತ್ತರನ ಪೌರುಷ ಕೋರ್ಟ್ ಮುಂದೆ ಎಂಬಂತೆ ಜಿಬಿಎ ಚುನಾವಣೆ ಮುಂದೂಡಲು ಕೋರ್ಟ್ ಮೊರೆ ಹೋಗಿರುವುದೇಕೆ? ನಿಮಗೆ ನಿಜವಾಗಿಯೂ ಜನರ ಮೇಲೆ ವಿಶ್ವಾಸವಿದ್ದರೆ ಸ್ಥಳೀಯ ಚುನಾವಣೆ ನಡೆಸಿ ಎಂದು ಮಾಜಿ ಸಚಿವ ಸಿ.ಟಿ.ರವಿ ಸವಾಲು ಹಾಕಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಬಿಎ ಚುನಾವಣೆ ಮುಂದೂಡಲು ಸುಪ್ರೀಂಕೋರ್ಟ್ ಮುಂದೆ ಹೋಗಿ ನಿಂತಿರುವುದೇಕೆ? ನಿಮಗೆ ನಿಜವಾಗಿಯೂ ಜನರ ಮೇಲೆ ವಿಶ್ವಾಸವಿದ್ದರೆ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ನಗರಸಭೆ, ಪುರಸಭೆ ಚುನಾವಣೆಗಳನ್ನು ನಡೆಸಿ ತೋರಿಸಿ. ಚುನಾವಣೆ ನಡೆಸಲು ಹಿಂಜರಿಯುತ್ತಿರುವುದನ್ನು ನೋಡಿದರೆ ನಿಮಗೆ ಸೋಲಿನ ಭೀತಿ ಕಾಡುತ್ತಿರುವುದು ಸ್ಪಷ್ಟ ಎಂದರು.

ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವ ಸಂದರ್ಭದಲ್ಲೇ ಪ್ರಧಾನಿಯವರ ವಿದೇಶ ಪ್ರವಾಸದ ಕುರಿತ ಟೀಕೆಗೆ ಪ್ರತಿಕ್ರಿಯಿಸಿ,


ಯುದ್ಧವನ್ನು ಭಾರತ ಬಯಸಿದ್ದಲ್ಲ, ಆದರೆ ಅದರ ಜಾಗತಿಕ ಪರಿಣಾಮ ನಮ್ಮ ಮೇಲಾಗಿದೆ. ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ಪಥ್ಯ ಹೇಳುವಂತೆ, ದೇಶದ ಆರ್ಥಿಕ ಹಿತದೃಷ್ಟಿಯಿಂದ ದುಂದುವೆಚ್ಚ ಹಾಗೂ ಚಿನ್ನದ ಖರೀದಿ ಬೇಡ ಎಂದು ಮೋದಿ ಕರೆ ನೀಡಿದ್ದಾರೆ. ಇದರಿಂದ ವಿದೇಶಿ ವಿನಿಮಯದ ಕೊರತೆಯಾಗುವುದನ್ನು ತಡೆಯಬಹುದು. 1990-91 ರಲ್ಲಾದ ಆರ್ಥಿಕ ಸಂಕಷ್ಟದಂತೆ ಚಿನ್ನ ಅಡವಿಡುವ ಪರಿಸ್ಥಿತಿ ದೇಶಕ್ಕೆ ಬರಬಾರದು ಎಂದರು.

ಪ್ರಧಾನಿ ಮೋದಿಯವರು ಮೋಜು-ಮಸ್ತಿಗಾಗಿ ವಿದೇಶಕ್ಕೆ ಹೋಗುತ್ತಿಲ್ಲ. ದೇಶದ ಹಿತದೃಷ್ಟಿಯಿಂದ ಪ್ರಮುಖ ಒಪ್ಪಂದಗಳನ್ನು ಮಾಡಿಕೊಳ್ಳಲು ಹೋಗುತ್ತಿದ್ದಾರೆ. 3 ದಿನ ಪ್ರಚಾರ ಮಾಡಿ 30-40 ದಿನ ಮಾಯವಾಗುವ ಕಾಂಗ್ರೆಸ್ ನಾಯಕರಿಗೆ ಈ ಪ್ರಶ್ನೆ ಕೇಳಬೇಕು ಎಂದು ತಿರುಗೇಟು ನೀಡಿದರು.

# ಮೈಸೂರು ವಿ.ವಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಚಾಂಪಿಯನ್

**ಮೈಸೂರು:** ರಾಜ್ಯದ ಅತಿದೊಡ್ಡ ಅಂತರ್-ವಿಶ್ವವಿದ್ಯಾಲಯ ಪತ್ರಿಕೋದ್ಯಮ ಉತ್ಸವಗಳಲ್ಲಿ ಒಂದೆಂದು ವಿವರಿಸಲಾದ ತುಮಕೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ಇಂಪ್ರೆಷನ್ 2026 ಮಾಧ್ಯಮಹಬ್ಬದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಉತ್ಸವದಲ್ಲಿ ರಾಜ್ಯಾದ್ಯಂತ ಸುಮಾರು 15 ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಪ್ರತಿನಿಧಿಸುವ 300 ಕ್ಕೂ ಹೆಚ್ಚು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೈಸೂರು, ಧಾರವಾಡ, ವಿಜಯಪುರ, ಬಾಗಲಕೋಟೆ, ಹಾವೇರಿ, ಬೆಂಗಳೂರು ಮತ್ತು ತುಮಕೂರು ಸೇರಿದಂತೆ ವಿವಿಧ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು. ಚರ್ಚಾಸ್ಪರ್ಧೆಯಲ್ಲಿ ಬಸವರಾಜ್ ಬಿಂಗಿ ಮತ್ತು ಹಿತೇಶ್ ಪ್ರಥಮ ಸ್ಥಾನ, ರೇಡಿಯೋ ಜಾಕಿ ರೂಪ ದಿತ್ವೀಯ ಸ್ಥಾನ, ಫೋಟೋಗ್ರಫಿ ಹಿತೇಶ್ ಮತ್ತು ರಕ್ಷಿತಾ ಪ್ರಥಮ ಸ್ಥಾನ, ಪುಟ್ಟಕಥೆ ಮತ್ತು ಪಿ.ಟಿ.ಸಿ ಯಲ್ಲಿ ಇಂಚರ, ಗುಂಪು ಸ್ಪರ್ಧೆ ಮ್ಯಾಡ್ ಆಡ್ ನಲ್ಲಿ ಸ್ಪಂದನಾ, ರಮೇಶ್,ಶಶಿ, ರಾಹುಲ್,ಚರಣ್ ಪ್ರಥಮ ಸ್ಥಾನ ಪಡೆದು ಒಟ್ಟಾರೆಯಾಗಿ ಮೈಸೂರು ವಿಶ್ವವಿದ್ಯಾನಿಲಯ ಚಾಂಪಿಯನ್ ಆಗಿ ಹೊರಹೊಮ್ಮಿದರು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಮತ್ತು ಸಂಯೋಜಕ ಡಾ.ಸಂಜಯ್, ಸಂಶೋಧಕರಾದ ಅಭಿಷೇಕ್ ಪಾಳ್ಯಗಾರ್ ರನ್ನು ವಿಭಾಗದ ಮುಖ್ಯಸ್ಥ ಪ್ರೊ.ಎನ್.ಮಮತ, ಪ್ರಾಧ್ಯಾಪಕರಾದ ಪ್ರೊ. ಎಂ.ಎಸ್.ಸಪ್ನ ಅಭಿನಂದಿಸಿದರು.




## ಮಡಿಕೇರಿ ತಾಲ್ಲೂಕು 12 ನೇ ಕನ್ನಡ ಸಾಹಿತ್ಯ ಸಮ್ಮೇಳನ

# ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ: ಕೆ.ಜಿ.ಬೋಪಯ್ಯ

**ಮಡಿಕೇರಿ:** ಕನ್ನಡ ಭಾಷೆ, ನಾಡು-ನುಡಿ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಮತ್ತು ಸ್ವಾಭಿಮಾನ ಇರಬೇಕು ಎಂದು ವಿಧಾನಸಭೆಯ ಮಾಜಿ ಸಭಾಧ್ಯಕ್ಷರಾದ ಕೆ.ಜಿ.ಬೋಪಯ್ಯ ಅವರು ತಿಳಿಸಿದ್ದಾರೆ.



ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕಡಂಗ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ವೇದಿಕೆಯಲ್ಲಿ ಬುಧವಾರ ನಡೆದ ತಾಲ್ಲೂಕಿನ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಮೊದಲ ಸ್ಥಾನ. ಆದರೆ ವಾಸ್ತವ ಪರಿಸ್ಥಿತಿ ಹೇಗಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು ಎಂದರು.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಸಹ ಸ್ಥಳೀಯ ಹಾಗೂ ನಾಡಿನ ಭಾಷೆಗಳು ಬಲಯುತವಾಗಿದೆ. ಆದರೆ ನಗರ, ಮಹಾನಗರ ಪ್ರದೇಶಗಳಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ ಎಂದು ಕೆ.ಜಿ.ಬೋಪಯ್ಯ ಅವರು ಒತ್ತಿ ಹೇಳಿದರು.

ಕನ್ನಡ ಭಾಷೆ ಬಗ್ಗೆ ತಾತ್ಸಾರ ಇರಬಾರದು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಚಿಂತಿಸಬೇಕಿದೆ ಎಂದರು. ಎಲ್ಲರಲ್ಲೂ ಸ್ವಾಭಿಮಾನ ಬಿತ್ತಬೇಕು. ಕನ್ನಡ, ಕೊಡವ, ಅರೆಭಾಷೆ ಜನರ ಅರೆಭಾಷೆ ಉಳಿಯಬೇಕು. ರಾಜ್ಯದಲ್ಲಿ ಇತರೆ ಭಾಷೆಗಳನ್ನು ಸಮಾನವಾಗಿ ಕಾಣುತ್ತೇವೆ. ಆದರೆ ಹತ್ತಿರದ ರಾಜ್ಯಗಳಿಗೆ ತೆರಳಿದಾಗ ಪರಿಸ್ಥಿತಿ ಬೇರೆ ಇದೆ ಎಂಬುದನ್ನು ಮನಗಾಣಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾದ ಎಂ.ಪಿ.ಕೇಶವ ಕಾಮತ್ ಅವರು ಮಾತನಾಡಿ ಕನ್ನಡ ಭಾಷೆ, ನಾಡು-ನುಡಿ, ವಿಚಾರಧಾರೆಗಳು ಎಲ್ಲೆಡೆ ತಲುಪಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸಹಕಾರಿ ಆಗಿದೆ ಎಂದರು.

ಪುಸ್ತಕ ಬಿಡುಗಡೆ, ಸ್ಮರಣ ಸಂಚಿಕೆ ಹೊರತರುವುದು, ಕವಿಗೋಷ್ಠಿ, ವಿಚಾರಗೋಷ್ಠಿ, ಕೃಷಿ, ಸಾಹಿತ್ಯ ಹೀಗೆ ಪ್ರತಿಯೊಂದು ಬಗ್ಗೆಯೂ ಸಾಹಿತ್ಯ ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ತೀತಿರ ಧರ್ಮಜ ಉತ್ತಪ್ಪ ಅವರು ಮಾತನಾಡಿ ನಾಡಿನಲ್ಲಿ ಕನ್ನಡ ಭಾಷೆಗೆ ಮೊದಲ ಸ್ಥಾನವಿದೆ. ಅದನ್ನು ಉಳಿಸಿಕೊಂಡು ಹೋಗಬೇಕು. ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು. ಕನ್ನಡ ಭಾಷೆಗೆ ಮತ್ತಷ್ಟು ಉತ್ತೇಜನ ನೀಡಬೇಕು ಎಂದರು.

ತಾಲ್ಲೂಕು 12ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಐತಿಚಂಡ ರಮೇಶ್ ಉತ್ತಪ್ಪ ಅವರು ಮಾತನಾಡಿ ಪ್ರಸಕ್ತ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ 19 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಇವರಲ್ಲಿ 18,678 ವಿದ್ಯಾರ್ಥಿಗಳು ಪ್ರಥಮ ಭಾಷೆ ಕನ್ನಡ ಭಾಷೆಯಲ್ಲಿಯೇ ಅನುತ್ತೀರ್ಣರಾಗಿರುವ ಬಗ್ಗೆ ಚಿಂತಿಸಬೇಕಿದೆ ಎಂದರು.

ನಮ್ಮದೇ ಭಾಷೆ, ನಮ್ಮದೇ ಉಸಿರಾಗಿರುವ ಕನ್ನಡದಲ್ಲಿ ನಮ್ಮ ಮಕ್ಕಳೇ ಅನುತ್ತೀರ್ಣರಾಗುತ್ತಿದ್ದಾರೆ. ಇದಕ್ಕೊಂದು ಪರಿಹಾರವೇನು ಎಂಬುದನ್ನು ಎಲ್ಲರೂ ಅವಲೋಕನ ಮಾಡಬೇಕಿದೆ ಎಂದರು.

ನಾಡಿನ ಮಕ್ಕಳಿಗೆ ಕನ್ನಡ ಭಾಷೆ ಕಬ್ಬಿಣದ ಕಡಲೆಯೇ, ಪಠ್ಯ ಪುಸ್ತಕ ದೋಷವೇ, ಕಲಿಸುವಲ್ಲಿ ದೋಷವೇ, ಅಥವಾ ವ್ಯವಸ್ಥೆಯ ದೋಷವೇ ಎಂಬ ಬಗ್ಗೆ ಆತ್ಮವಲೋಕನ ಮಾಡಿಕೊಳ್ಳಬೇಕಿದೆ ಎಂದು ರಮೇಶ್ ಉತ್ತಪ್ಪ ಅವರು ಪ್ರತಿಪಾದಿಸಿದರು.

# ಕೆ.ಆರ್.ನಗರದಲ್ಲಿ ಸೃಜನ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ ಮೇ 24ರಂದು

**ಕೆ.ಆರ್.ನಗರ:** ಪಟ್ಟಣದ ಸೃಜನ ಲೇಖಕರು ಮತ್ತು ಕಲಾವಿದರ ಬಳಗದ 23ನೇ ಹಾಗೂ ವಿಚಾರಪ್ರಜ್ಞೆ ಪಾಕ್ಷಿಕ ಪತ್ರಿಕೆಯ 8ನೇ ವಾರ್ಷಿಕೋತ್ಸವ ಹಾಗೂ ವಿವಿಧ ಕ್ಷೇತ್ರಗಳ ಸಾಧಕರುಗಳಿಗೆ ಸೃಜನ ಸದ್ಭಾವನಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಮೇ.24ರ ಭಾನುವಾರ ಬೆಳಿಗ್ಗೆ 10ಗಂಟೆಗೆ ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ರಾ.ಸುರೇಶ್ ತಿಳಿಸಿದ್ದಾರೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಡಿ.ರವಿಶಂಕರ್ ವಹಿಸಲಿದ್ದು, ಉದ್ಘಾಟನೆಯನ್ನು ಅರಗು ಮತ್ತು ಬಣ್ಣ ಕಾರ್ಖಾನೆಯ ಅಧ್ಯಕ್ಷ ಎಚ್.ಡಿ.ಗಣೇಶ್ ನೆರವೇರಿಸುವರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಸೃಜನ ಸದ್ಭಾವನಾ ಪ್ರಶಸ್ತಿಯನ್ನುಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷದೊಡ್ಡಸ್ವಾಮೇಗೌಡ ಪ್ರದಾನ ಮಾಡಿದರೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಪ್ರಧಾನ ಭಾಷಣ ಮಾಡಲಿದ್ದು ಹಲವು ಗಣ್ಯರುಗಳು ಪಾಲ್ಗೊಳ್ಳಲಿದ್ದಾರೆ.

ಸೃಜನ ಲೇಖಕರು ಮತ್ತು ಕಲಾವಿದರ ಬಳಗದ ವತಿಯಿಂದ ಪ್ರತಿ ವರ್ಷವೂ ಕೂಡ ವಿವಿಧ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಸಾಧಕರುಗಳನ್ನು ಗುರುತಿಸಿ ಅವರುಗಳಿಗೆ ಸೃಜನ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಿಕೊಂಡು ಬರಲಾಗುತ್ತಿದ್ದು, 2026ನೇ ಸಾಲಿನ ಸೃಜನ ಸದ್ಭಾವನಾ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ನಾಡಿನ 32 ಸಾಧಕರುಗಳನ್ನು ಆಯ್ಕೆ ಮಾಡಲಾಗಿದೆ ಎಂದು ಬಳಗವು ಪ್ರಕಟಣೆಯಲ್ಲಿ ತಿಳಿಸಿದೆ.

ಸೃಜನ ಸದ್ಭಾವನಾ ಪ್ರಶಸ್ತಿಗೆ ಆಯ್ಕೆಯಾಗಿರುವ ವಿವಿಧ ಕ್ಷೇತ್ರಗಳ ಸಾಧಕರುಗಳ ವಿವರ: ಅನುಸೂಯ (ಪ್ರಗತಿಪರ ರೈತ ಮಹಿಳೆ, ಬಸವರಾಜಪುರ), ಕೆ.ಎಸ್.ಬಾಲಸುಬ್ರಹ್ಮಣ್ಯಂ (ನಿವೃತ್ತ ತಹಸೀಲ್ದಾರ್, ಮೈಸೂರು), ಡಾ.ಟಿ.ಎಸ್.ದೀಪ್ತಿ (ಕಣ್ಣಿನ ತಜ್ಞರು, ಕೆ.ಆರ್.ನಗರ), ಎಸ್.ಟಿ.ರವಿಕುಮಾರ್ (ಸಂಪಾದಕರು, ನಗರದೂತ ದಿನಪತ್ರಿಕೆ, ಮೈಸೂರು),

ಕೆ.ಟಿ.ಮೋಹನ್ ಕುಮಾರ್ (ಪತ್ರಕರ್ತರು, ಕಾಳಮ್ಮನ ಕೊಪ್ಪಲು), ಜಿ.ಶೇಷಾದ್ರಿ (ಮಾಜಿ ಕೌನ್ಸಿಲರ್), ಎಸ್.ಎನ್. ರವೀಂದ್ರ ರಾಜನ್ (ಗ್ರಂಥಪಾಲಕರು), ಎಚ್.ಎಸ್.ವಿಜಯ್ (ಪೊಲೀಸ್ ಕಾನ್ಸ್ಟೇಬಲ್ ), ಹೆಚ್.ಎನ್.ಮಂಜುನಾಥ್ (ಪಶು ವೈದ್ಯಕೀಯ ಪರೀಕ್ಷಕರು, ಹನಸೋಗೆ), ವೈ. ಕೆ.ಮಂಜುನಾಥ್ (ಸಾಮಾಜಿಕ ಕಾರ್ಯಕರ್ತ, ಮೈಸೂರು), ಟಿ.ಪಿ.ಶ್ರೀನಿವಾಸ್ (ಕ್ರೀಡಾಪಟು), ಸುಂದರೇಗೌಡ (ಬಿಲ್ ಕಲೆಕ್ಟರ್ ತಂದ್ರೆ ಗ್ರಾ.ಪಂ), ಎಸ್.ಆತ್ಮರಾಗಿಣಿ (ರೇಷ್ಮೆ ಇಲಾಖೆ ನೌಕರರು), ಎಂ.ವಿಸ್ಮಯ (ಅಂಚೆ ನೌಕರರು), ಹೆಚ್.ಎ.ರಂಗಸ್ವಾಮಿ (ಕಲಾವಿದರು), ಚಿಕ್ಕಣ್ಣೇಗೌಡ (ಪಶು ವೈದ್ಯಕೀಯ ಹಿರಿಯ ಪರೀಕ್ಷಕರು, ಪಶುಪತಿ), ಸಿ.ಎಚ್.ಸ್ವಾಮಿ (ಮಾದರಿ ಪ್ರಗತಿಪರ ರೈತ, ಚಿಕ್ಕಕೊಪ್ಪಲು),

ಡಾ.ಕೆ.ಚಂದ್ರಶೇಖರ್ (ಹಿರಿಯ ಮಕ್ಕಳ ತಜ್ಞರು), ಡಾ.ಜಿ.ಆರ್.ಹೇಮ (ಮಕ್ಕಳ ತಜ್ಞರು), ಎಂ.ಸುಬ್ರಹ್ಮಣ್ಯ (ಸಂಪಾದಕರು, ವಿಶ್ವದೂತ ದಿನಪತ್ರಿಕೆ, ಮೈಸೂರು),

ಟಿ.ಎಸ್.ಚಿದಾನಂದ (ಪಿ.ಡಿ.ಓ, ಹಳಿಯೂರು), ಡಾ.ರೇಣುಕಾರಾಧ್ಯ ಚಿಟ್ಟಿ (ಪ್ರಾಂಶುಪಾಲರು, ಬಳ್ಳಾರಿ), ಚಂದ್ರಶೇಖರ್ (ಆಲ್ಫಾ ಪಿಯು ಕಾಲೇಜು), ಜೆ.ಎಸ್. ರವಿ (ಪಶು ವೈದ್ಯಕೀಯ ಪರೀಕ್ಷಕರು, ಮಾರಗೌಡನಹಳ್ಳಿ ), ಕೆ.ಬಿ.ಮಹದೇವ ಪ್ರಸಾದ್ (ಸುಶ್ರುಷಕ ಅಧಿಕಾರಿ), ಜಯಕುಮಾರಿ ಮತ್ತು ಹೇಮಲತಾ (ಅಂಗನವಾಡಿ ಕಾರ್ಯಕರ್ತೆಯರು ತಿಪ್ಪೂರು), ರವಿ (ಪೌರಕಾರ್ಮಿಕರು), ಹರೀಶ್ ಕುಮಾರ್ (ಅಂಚೆ ನೌಕರರು), ಕೆ.ಪಿ.ಮಹದೇವ (ಪುರೋಹಿತರು ಕಿತ್ತೂರು), ಎನ್.ಪ್ರಸಾದ್ (ಈಜುಗಾರರು, ಸನ್ಯಾಸಿಪುರ), ಕೆ.ಕಿರಣ್ (ಪ್ರತಿಭಾವಂತ ವಿದ್ಯಾರ್ಥಿ).

# ಡೆಂಗ್ಯೂ ರೋಗವನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ವಹಿಸಿ: ಡಾ. ಕುಮಾರ

**ಮಂಡ್ಯ:** ಡೆಂಗ್ಯೂ ಒಂದು ಅಪಾಯಕಾರಿ ಸಾಂಕ್ರಾ ಮಿಕ ರೋಗವಾಗಿದ್ದು, ಏಡಿಸ್ (Aedes) ಜಾತಿಯ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗವಾಗಿದೆ.ವಿಶೇಷವಾಗಿ ಮಳೆಗಾಲದಲ್ಲಿ ಮತ್ತು ನೀರು ನಿಂತುಕೊಳ್ಳುವ ಪ್ರದೇಶಗಳಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚು ಕಂಡುಬರುತ್ತವೆ. ಆದ್ದರಿಂದ ಡೆಂಗ್ಯೂ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ತಿಳಿಸಿದರು.

ಜಿಲ್ಲಾ ಕಛೇರಿ ಸಭಾಂಗದಲ್ಲಿ ನಡೆದ ಡೆಂಗ್ಯೂ ನಿಯಂತ್ರಣ ಕುರಿತು ಅಂತರ್ ಇಲಾಖೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡೆಂಗ್ಯೂ ಜ್ವರ ಪ್ರಕರಣಗಳ ಅಗತ್ಯ ನಿರ್ವಹಣೆಗಾಗಿ ತಾಲೂಕು ಆಸ್ಪತ್ರೆಗಳಲ್ಲಿ ಕನಿಷ್ಠ ತಲ 05 ಬೆಡ್ ಗಳನ್ನು ಮೀಸಲೀಡಬೇಕು ಮತ್ತು ಶಾಲೆಗಳಲ್ಲಿ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಿರಂತರ ನಿರಂತರವಾಗಿ ಹಮ್ಮಿಕೊಳ್ಳಬೇಕು ಶಾಲಾ ಪ್ರಾರ್ಥನ ವೇಳೆಯಲ್ಲಿ ಡೆಂಗಿ ನಿಯಂತ್ರಣ ಕುರಿತು ಕರಪತ್ರಗಳನ್ನು ಓದುವಂತೆ ನಿರ್ದೇಶನ ನೀಡಿದರು.



ರಸ್ತೆ ಬದಿಯಲ್ಲಿ ತೆರೆದಿಟ್ಟ ಆಹಾರ ಪದಾರ್ಥಗಳು ಮತ್ತು ಹಣ್ಣುಗಳನ್ನು ಕತ್ತರಿಸಿ ಮಾರಾಟ ಮಾಡುವುದನ್ನು ನಿಷೇಧಿಸುವುದು ಮತ್ತು ಹೋಟೆಲ್ ಗಳಲ್ಲಿ ಮಾಂಸದ ಅಂಗಡಿಗಳಲ್ಲಿ ಕಲ್ಯಾಣ ಮಂಟಪಗಳಲ್ಲಿ ಸ್ವಚ್ಛತೆ ನೈರ್ಮಲ್ಯ ಕಾಪಾಡುವುದರ ಜೊತೆಗೆ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಗೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಉತ್ತಮ ಪರಿಸರಕ್ಕೆ ಹೆಚ್ಚು ಮಹತ್ವ ನೀಡಲಾಗಿದ್ದು ಮನೆ, ಶಾಲೆ ಹಾಗೂ ಸಾರ್ವಜನಿಕ ಸ್ಥಳಗಳನ್ನು ಕಡ್ಡಾಯವಾಗಿ ಸ್ವಚ್ಛತೆಯನ್ನು ಕಾಪಾಡಬೇಕು ಗ್ರಾಮ ಪಂಚಾಯಿತಿ ಮತ್ತು ನಗರಸಭೆಗಳು ನಿಯಮಿತವಾಗಿ ಫಾಗಿಂಗ್ ಕೀಟನಾಶಕ ಸಿಂಪಡಣೆ ಮಾಡಬೇಕು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಆರೋಗ್ಯ ಇಲಾಖೆ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಸೂಚಿಸಿದರು. ಜನರಲ್ಲಿ ಅರಿವು ಮೂಡಿಸುವುದು ಬಹಳ ಅಗತ್ಯವಾಗಿದ್ದು ಶಾಲೆಗಳು, ಕಾಲೇಜುಗಳು ಮತ್ತು ಸಾಮಾಜಿಕ ಸಂಘಟನೆಗಳು ಡೆಂಗ್ಯೂ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ?ಸ್ವಚ್ಛ ಪರಿಸರ ? ಡೆಂಗ್ಯೂ ಮುಕ್ತ ಸಮಾಜ? ಎಂಬ ಮನೋಭಾವನೆಯನ್ನು ಪ್ರತಿಯೊಬ್ಬರಲ್ಲೂ ಬೆಳೆಸಬೇಕು ಎಂದು ತಿಳಿಸಿದರು.

ಡೆಂಗ್ಯೂ ಒಂದು ತಡೆಯಬಹುದಾದ ರೋಗವಾಗಿದೆ. ಜಾಗೃತಿ ಮತ್ತು ಮುಂಜಾಗ್ರತಾ ಕ್ರಮಗಳ ಮೂಲಕ ಡೆಂಗ್ಯೂ ಹರಡುವಿಕೆಯನ್ನು ನಿಯಂತ್ರಿಸಬಹುದು. ಪ್ರತಿಯೊಬ್ಬ ನಾಗರಿಕನು ತನ್ನ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಿದರೆ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಸಭೆಯಲ್ಲಿ ಜಿಲ್ಲಾ ಆರ್. ಸಿ. ಹೆಚ್ ಅಧಿಕಾರಿ ಡಾ. ಕೆ. ಪಿ. ಅಶ್ವಥ್, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ಲೋಕೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಪ್ರಶಸ್ತಿ ಪ್ರದಾನ ಸಮಾರಂಭ

**ಮಡಿಕೇರಿ :** ಕನ್ನಡಸಿರಿ ಸ್ನೇಹ ಬಳಗ ವತಿಯಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದ ಕೊಡಗು ಜಿಲ್ಲೆಯ ಪ್ರೌಢಶಾಲೆಗಳಿಗೆ ಸಾಧನಸಿರಿ ಪ್ರಶಸ್ತಿ ಪ್ರದಾನ ಸಮಾರಂಭ ಮೇ 22 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಶಾಲಾ ಶಿಕ್ಷಣ ಇಲಾಖೆ ನಿವೃತ್ತ ಉಪ ನಿರ್ದೇಶಕರಾದ ಪಿ.ಎಸ್.ಮಚಾಡೊ, ಕನ್ನಡ ಸಿರಿ ಸ್ನೇಹ ಬಳಗ ಹಾಗೂ ಕೊಡಗು ಜಿಲ್ಲಾ ಕ.ಸಾ.ಪ ನಿಕಟಪೂರ್ವ ಅಧ್ಯಕ್ಷರಾದ ಲೋಕೇಶ್ ಸಾಗರ್ ಬಿ.ಎಸ್., ಕುಶಾಲನಗರ ರೋಟರಿ ಸಂಸ್ಥೆ ಅಸಿಸ್ಟೆಂಟ್ ಗವರ್ನರ್ ಎಂ.ಡಿ.ರಂಗಸ್ವಾಮಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ (ಆಡಳಿತ) ಬಸವರಾಜ್, ಡಯಟ್ ಉಪ ನಿರ್ದೇಶಕರಾದ (ಅಭಿವೃದ್ಧಿ) ರಾಮಚಂದ್ರ ರಾಜೇ ಅರಸ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಪಿ.ಮಹೇಶ್, ಸೋಮವಾರಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೃಷ್ಣಪ್ಪ, ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಜೆ.ಆನಂದ್, ಕ.ರಾ.ಪ್ರೌ.ಸಾ.ಶಿ.ಸಂ ಜಿಲ್ಲಾಧ್ಯಕ್ಷರಾದ ಹೆಚ್.ಜಿ.ಕುಮಾರ್, ಮಡಿಕೇರಿ ತಾಲ್ಲೂಕು ಅಧ್ಯಕ್ಷರಾದ ಪಿ.ಎಸ್. ರವಿ ಕೃಷ್ಣ, ಸೋಮವಾರಪೇಟೆ ತಾಲ್ಲೂಕು ಅಧ್ಯಕ್ಷರಾದ ಟಿ.ಆರ್.ರತ್ನಕುಮಾರ್, ವಿರಾಜಪೇಟೆ ತಾಲ್ಲೂಕು ಅಧ್ಯಕ್ಷರಾದ ಡಿ.ಚಂದನ, ಕ.ಸಾ.ಪ ಮಡಿಕೇರಿ ತಾಲ್ಲೂಕು ಅಧ್ಯಕ್ಷರಾದ ಕುಡೇಕಲ್ ಸಂತೋಷ್, ಪಾಲ್ಗೊಳ್ಳಲಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಅಕ್ರಮ ಕೇರಳ ಲಾಟರಿ ಮಾರಾಟ: ವ್ಯಕ್ತಿ ಬಂಧನ



**ಗುಂಡ್ಲುಪೇಟೆ:** ಪಟ್ಟಣದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿ ಪಂಜನಹಳ್ಳಿ ಗ್ರಾಮದ ಮಂಜುನಾಥ್ ಎಂದು ಗುರುತಿಸಲಾಗಿದೆ. ಪಟ್ಟಣದಲ್ಲಿ ಅಕ್ರಮವಾಗಿ ಲಾಟರಿ ಮಾರಾಟ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರಕಿದ ಹಿನ್ನೆಲೆ, ಪಿಎಸ್‌ಐ ನರೇಶ್ ಕುಮಾರ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗಳಾದ ನಟೇಶ್, ಮಣಿ ಮತ್ತು ಸಂತೋಷ್ ಕುಮಾರ್ ತಂಡ ದಾಳಿ ನಡೆಸಿದರು.

ದಾಳಿಯ ವೇಳೆ ಆರೋಪಿ ಬಳಿಯಿದ್ದ 115 ಲಾಟರಿ ಟಿಕೆಟ್‌ಗಳು ಹಾಗೂ ?5,500 ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಕುರಿತು ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

### ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ರಾಮನಗರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯ್ಕೆಯಾದ ಹಾರೋಹಳ್ಳಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕಂ ಕ್ರಷ್ ಕೇಂದ್ರಗಳನ್ನು ಅಂಗನವಾಡಿ ಕಂ ಕ್ರೀಚ್ ಕೇಂದ್ರಗಳಾದ ಚಾಮುಂಡೇಶ್ವರಿ ಬಡಾವಣೆ, ಕೀರಣಗೆರೆ, ದೊಡ್ಡಮರಳವಾಡಿ–2, ಟಿ. ಬನ್ನಿಕುಪ್ಪೆ, ಹುಳುಗೊಂನಹಳ್ಳಿಯಲ್ಲಿ ಕಾರ್ಯನಿರ್ವಹಿಸಲು 5 ಕ್ರಷ್ ಕಾರ್ಯಕರ್ತೆಯರು ಮತ್ತು 05 ಕ್ರಷ್ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಧಿತ ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನಾ ಕಚೇರಿ, ನಾಗೇಶ್ ಬಿಲ್ಡಿಂಗ್, ಕೃಷ್ಣಸ್ವಾಮಿ ದೇವಸ್ಥಾನದ ಎದುರುಗಡೆ ರಸ್ತೆ, ಹಾರೋಹಳ್ಳಿ. ಈ ಕಚೇರಿ ಪಡೆದು 2026ರ ಜೂನ್ 20ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ನಾಗೇಶ್ ಬಿಲ್ಡಿಂಗ್, ಕೃಷ್ಣಸ್ವಾಮಿ ದೇವಸ್ಥಾನದ ಎದುರು ರಸ್ತೆ, ಹಾರೋಹಳ್ಳಿ. ದೂ.ಸಂಖ್ಯೆ: 7892933001 ಅನ್ನು ಸಂಪರ್ಕಿಸುವಂತೆ ಹಾರೋಹಳ್ಳಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಾರಸುದಾರರ ಪತ್ತೆಗೆ ಮನವಿ

**ರಾಮನಗರ:** ಚನ್ನಪಟ್ಟಣ ತಾಲ್ಲೂಕು ತಿಟ್ಟಮಾರನಹಳ್ಳಿ ಗ್ರಾಮದ ಬೆಂಗಳೂರು ಮೈಸೂರು ರಸ್ತೆಯ ಸರ್ವೀಸ್ ರಸ್ತೆಯ ಪಕ್ಕದ ಜಮೀನಿನ ಬಳಿ ರಸ್ತೆಯಲ್ಲಿ ಸುಮಾರು 35–40 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಮೃತಪಟ್ಟಿರುತ್ತಾರೆ.

ಮೃತರ ಹೆಸರು ವಿಳಾಸ ತಿಳಿದುಬಂದಿಲ್ಲ. ತೆಳ್ಳನೆಯ ಮೈಕಟ್ಟು, ಕಪ್ಪು ಮೈಬಣ್ಣ, 5.3 ಅಡಿ ಎತ್ತರ, ಇವರು ತಿಳಿ ನೀಲಿ ಬಣ್ಣದ ಅರ್ಧ ತೋಳಿನ ಟೀ ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಇವರ ವಾರಸುದಾರರು ಯಾರಾದರು ಇದ್ದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ, ಚನ್ನಪಟ್ಟಣ, ಬೆಂಗಳೂರು ದಕ್ಷಿಣ (ರಾಮನಗರ), ಜಿಲ್ಲೆ. ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

# ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ, ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು: ಎನ್. ಚಲುವರಾಯಸ್ವಾಮಿ

**ಬೆಂಗಳೂರು:** ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಹಾಗೂ ಕೃಷಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ "ಕೃಷಿ – ಮಾಧ್ಯಮ ಸಂವಾದ"ದಲ್ಲಿ ಪಾಲ್ಗೊಂಡ ಕೃಷಿ ಸಚಿವ ಚಲುವರಾಯಸ್ವಾಮಿಯವರು,ಕೃಷಿ ಇಲಾಖೆಯ ಕಳೆದ ಮೂರು ವರ್ಷಗಳ ಸಾಧನೆಯ ಬಗ್ಗೆ ಮಾಹಿತಿ ಹಂಚಿಕೊಂಡರು..

**ನಮ್ಮ ಸರ್ಕಾರ ಕೃಷಿ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಲು ಬದ್ಧ**

ನಮ್ಮ ಸರ್ಕಾರ ಕೃಷಿ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಲು ಬದ್ಧವಾಗಿದೆ. ಕೃಷಿಯನ್ನು ಕೇವಲ ಬದುಕಿನ ಅನಿವಾರ್ಯತೆಯನ್ನಾಗಿಸದೆ, ಅದನ್ನು ಗೌರವಯುತ ಮತ್ತು ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸುವುದು ನಮ್ಮ ಸರ್ಕಾರದ ಪ್ರಮುಖ ಗುರಿಯಾಗಿದೆ.

ಕಳೆದ 3 ವರ್ಷಗಳಲ್ಲಿ ನಮ್ಮ ದಕ್ಷ ಆಡಳಿತದಿಂದ ರೈತರ ಆತ್ಮಹತ್ಯೆಗಳು ಗಣನೀಯವಾಗಿ ಇಳಿಕೆಯಾಗಿವೆ. 'ಕೃಷಿ ಭಾಗ್ಯ' ಯೋಜನೆಯಡಿ ?435.05 ಕೋಟಿ ಸಹಾಯಧನದೊಂದಿಗೆ 36,213 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದ್ದು, ?173 ಕೋಟಿ ವೆಚ್ಚದಲ್ಲಿ 524 'ಹೈಟೆಕ್ ಹಾರ್ವೆಸ್ಟರ್ ಹಬ್'ಗಳನ್ನು ಸ್ಥಾಪಿಸಲಾಗಿದೆ. 'ಬೀಜ ಪರಂಪರೆ' ಮೂಲಕ 2,100 ದೇಶಿ ತಳಿಗಳನ್ನು ಸಂರಕ್ಷಿಸಿ ಕರ್ನಾಟಕ ದೇಶಕ್ಕೇ ಮಾದರಿಯಾಗಿದೆ. ಕಿಖ ಅಠಜಜ, ಈಖಳಅ ಮತ್ತು 'ಇ–ಸ್ಯಾಪ್' ತಂತ್ರಜ್ಞಾನದ



ಮೂಲಕ ಕೃಷಿಯಲ್ಲಿ ಪಾರದರ್ಶಕ ಡಿಜಿಟಲ್ ಕ್ರಾಂತಿ ತರಲಾಗಿದೆ. ಜೋಯಿಡಾ ಮತ್ತು ಪಾಂಡವಪುರ ತಾಲ್ಲೂಕುಗಳನ್ನು ಸಂಪೂರ್ಣ ಸಾವಯವ ತಾಲ್ಲೂಕುಗಳನ್ನಾಗಿ ಪರಿವರ್ತಿಸಲಾಗುತ್ತಿದ್ದು, ಸಿರಿಧಾನ್ಯ ಮೇಳಗಳ ಮೂಲಕ ?335 ಕೋಟಿಗೂ ಅಧಿಕ ವಾಣಿಜ್ಯ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಲಕ್ಷಾಂತರ ರೈತರಿಗೆ ರಿಯಾಯಿತಿ ದರದಲ್ಲಿ ಬೀಜ, ಯಾಂತ್ರೀಕರಣ ಹಾಗೂ ಸೂಕ್ಷ್ಮ ನೀರಾವರಿ ಒದಗಿಸಲಾಗಿದೆ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ರಾಷ್ಟ್ರಮಟ್ಟದ ಗೌರವ ಲಭಿಸಿದ್ದು, ಮುಂದಿನ ದಿನಗಳಲ್ಲಿ 'ಡಿಜಿಟಲ್ ಕೃಷಿ' ಮೂಲಕ ರೈತರ ಉತ್ಪಾದನಾ ವೆಚ್ಚ ತಗ್ಗಿಸಿ ಆದಾಯ ದುಪ್ಪಟ್ಟುಗೊಳಿಸಲು ನಾವು ಶ್ರಮಿಸುತ್ತೇವೆ.

ಕಳೆದೆರಡು ವರ್ಷಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜಿಲ್ಲೆಗಳ ಪ್ರಗತಿಪರ ರೈತರ ಮನೆ, ತೋಟಗಳಿಗೆ ಭೇಟಿ ನೀಡಿ ಸುದೀರ್ಘ ವಿಚಾರ ವಿನಿಮಯ ಮಾಡಿದ್ದೇನೆ. ಈ ಸಂವಾದಗಳಿಂದ ಕಲಿತ ಅನೇಕ ಸಂಗತಿಗಳು ನಮ್ಮ ನೂತನ ಕೃಷಿ ನೀತಿ ಹಾಗೂ ಯೋಜನೆಗಳಾಗಿ ರೂಪುಗೊಂಡಿವೆ. ವಿಶೇಷವೆಂದರೆ, ವೈಜ್ಞಾನಿಕ ಮತ್ತು ಸಾವಯವ ಕೃಷಿ ಮಾಡುತ್ತಿರುವ ಯಾವೊಬ್ಬ ರೈತನೂ ಆರ್ಥಿಕ ತೊಂದರೆಗೆ ಸಿಲುಕಿಲ್ಲ. ಇಂತಹ ಪ್ರಗತಿಪರ ರೈತರು ಪ್ರತಿ ಹಳ್ಳಿಯಲ್ಲೂ ಹೆಚ್ಚಾಗಬೇಕಿದೆ. ಕೃಷಿಯಲ್ಲಿನ ಇಂತಹ ಅತ್ಯುತ್ತಮ ಪದ್ಧತಿಗಳನ್ನು ಪ್ರತಿಯೊಬ್ಬ ರೈತರೂ ಕಲಿತು ಅಳವಡಿಸಿಕೊಳ್ಳುವ ಅಗತ್ಯವಿದ್ದು, ಇದನ್ನು ಇಡೀ ಸಮುದಾಯಕ್ಕೆ ತಲುಪಿಸುವುದು ನಮ್ಮ ಆದ್ಯತೆಯಾಗಿದೆ. ಇದರ ಜೊತೆ ರೈತರಿಗೆ ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಕ್ಷಣ ಮಾತ್ರದಲ್ಲಿ ಪರಿಹಾರ ಹಾಗೂ ಮಾಹಿತಿ ಕಲ್ಪಿಸುವ ದಿಶೆಯಲ್ಲಿ ವಿನೂತನವಾಗಿ ಅಗ್ರಿ ಬಾಟ್ ಎನ್ನುವ ತಂತ್ರಜ್ಞಾನವನ್ನು ಶೀಘ್ರದಲ್ಲಿ ಪರಿಚಯಿಸಲಾಗುತ್ತಿದೆ.

ನಿರ್ದೇಶಕರಾದ ಶ್ರೀ ಜಿಟಿ ಪುತ್ರ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸಿ.ಎನ್. ಶಿವಪ್ರಕಾಶ್, ಅಧ್ಯಕ್ಷರಾದ ಶ್ರೀ ಬಿ ಹೆಚ್ ಹರೀಶ್ ಸಹಿತ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕುರಕ್ಷೇತ್ರ ನಾಟಕ ಪ್ರದರ್ಶನ, ಸಾಧಕರಿಗೆ ಸನ್ಮಾನ ಮೇ 23ರಂದು

**ಮಂಡ್ಯ:** ಮಹಾರಾಜ ಕಲಾ ಬಳಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯ ಇವರ ಸಹಯೋಗದಲ್ಲಿ ಕುರುಕ್ಷೇತ್ರ ನಾಟಕ ಪ್ರದರ್ಶನ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವು ಮೇ 23 ರಂದು ಬೆಳಿಗ್ಗೆ 10 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಕೆಹೆಚ್ ಬಿ ಮಹಾರಾಜನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹರೀಶ್ ಬಾಣಸವಾಡಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಾಟಕ ಪ್ರದರ್ಶನದ ನಂತರ ಮಧ್ಯಾಹ್ನ 3 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಕೆಎಎಸ್ ಅಧಿಕಾರಿ ಯೋಗಾನಂದ ಉದ್ಘಾಟಿಸುವರು. ಶಾಸಕ ಪಿ.ರವಿಕುಮಾರ್ ಗೌಡ ಅಧ್ಯಕ್ಷತೆ ವಹಿಸುವರು. ತಿಮ್ಮದಾಸ್ ಗ್ರೂಪ್ ಮಾಲೀಕರಾದ ಸಿ.ಟಿ.ಶಂಕರ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದರು.

ಜಂಟಿ ಕೃಷಿ ನಿರ್ದೇಶಕ ವಿ.ಎಸ್. ಅಶೋಕ್ ಅವರಿಗೆ ರೈತ ಮಿತ್ರ, ಸಮಾಜ ಸೇವಕರು ಹಾಗೂ ಮಮತ ನಸಿಂಗ್ ಹೋಂ ಮಾಲೀಕರಾದ ಡಾ.ಎಚ್.ಸಿ.ಆನಂದ್ ಅವರಿಗೆ ವೈದ್ಯ ರತ್ನ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಂಕೇಗೌಡ ಅವರಿಗೆ ಪುಸ್ತಕ ರತ್ನ ಹಾಗೂ ಜನಪದ ಗಾಯಕ ಮತ್ತು ಕೀರ್ತನಕಾರ ಶಿವಾರ ಉಮೇಶ್ ಅವರಿಗೆ ಕಲಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಕ.ರಾ.ಸ.ನೌ. ಸಂಘದ ಉಪಾಧ್ಯಕ್ಷ ಶಂಭುಗೌಡ, ಕೆಎಸ್‌ಒಯು ಸಹಾಯಕ ಕುಲಸಚಿವ ಸಿ.ಕೆ.ಪುಟ್ಟಸ್ವಾಮಿ, ಖಾದಿ ಗ್ರಾಮೋದ್ಯೋಗಿ ಮಂಡಳಿ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಸುಧಾಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ವಿ. ನಂದೀಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಮನುಜಶ್ರೀ, ಸಾಯಿ ಎಲೆಕ್ಟ್ರಾನಿಕ್ ಮಾಲೀಕ ಡಿ.ಪಿ.ಸ್ವಾಮಿ, ಬಿಜೆಪಿ ಮುಖಂಡ ವಸಂತ್ ಕುಮಾರ್, ರಂಗಭೂಮಿ ನಿರ್ದೇಶಕ ಅಂಕರಾಜು ಅವರನ್ನು ಅಭಿನಂದಿಸಲಾಗುವುದು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡ ಅಭಿನಂದನಾ ನುಡಿಗಳಾಡುವರು. ಜಿಪಂ ಮಾಜಿ ಸದಸ್ಯ ಎನ್.ಶಿವಣ್ಣ ಚಂದಗಾಲು ಅಭಿನಂದಿತರನ್ನು ಕುರಿತು ಮಾತನಾಡುವರು ಎಂದು ವಿವರಿಸಿದರು.

ಪಿಇಟಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯಾನಂದ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ, ಮನ್‌ಮುಲ್ ಅಧ್ಯಕ್ಷ ಶಿವಪ್ಪ ಉಮ್ಮಡಹಳ್ಳಿ, ನಿರ್ದೇಶಕ ಬಿ.ಆರ್.ರಾಮಚಂದ್ರು, ನಗರಸಭೆ ಮಾಜಿ ಅಧ್ಯಕ್ಷರಾದ ಎಚ್.ಎಸ್.ಮಂಜುನಾಥ್, ನಾಗೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

ನಾಟಕ ಪ್ರದರ್ಶನ ಸಂಬಂಧ ಮೇ 21 ರಂದು ಸಾತನೂರು, ಕಾರಸವಾಡಿ, ಕೆರಗೋಡು, ಹೊಡಾಘಟ್ಟ, ಕೀಲಾರ ಹಾಗೂ ಹೊಸಹಳ್ಳಿ ಸೇರಿದಂತೆ ಇತರ ಗ್ರಾಮಗಳಲ್ಲಿ ಪ್ರಚಾರ ಕಾರ್ಯ ಹಮ್ಮಿಕೊಳ್ಳಲಾಗಿದೆ. ಕಲಾ ಪ್ರೋತ್ಸಕರು ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ಪ್ರದರ್ಶನ ವೀಕ್ಷಿಸಿ ನಾಟಕ ಯಶಸ್ವಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಅಶೋಕ್, ಖಜಾಂಚಿ ಜಿ.ಪಿ.ಶಶಿಧರ್, ಪದಾಧಿಕಾರಿಗಳಾದ ಮಹಾದೇವಸ್ವಾಮಿ ಹಾಗೂ ಕೃಷ್ಣೇಗೌಡ ಹಾಜರಿದ್ದರು.

# ಮಧ್ಯ ರಂಗನಾಥ ಸ್ವಾಮಿ ದೇವಸ್ಥಾನದ ಲೋಕಾರ್ಪಣೆಗೆ ಅಂತಿಮ ಸಿದ್ಧತೆ

**ಕೊಳ್ಳೇಗಾಲ:** ತಾಲೂಕಿನ ಪುರಾಣಪ್ರಸಿದ್ಧ ಮಧ್ಯ ರಂಗನಾಥಸ್ವಾಮಿ ದೇಗುಲವು ಪ್ರಾಚ್ಯವಸ್ತು ಇಲಾಖೆ ಹಾಗೂ ದಾನಿಗಳ ನೆರವಿನಿಂದ ಸುಮಾರು 5.38 ಕೋಟಿ ಅನುದಾನದಲ್ಲಿ ಪುನರ್ ನವೀಕರಣಗೊಂಡಿದ್ದು, ನಾಳೆ ಲೋಕಾರ್ಪಣೆಗೆ ಸಜ್ಜಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಲಿದ್ದಾರೆ.

ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಆಗಮಿಸುತ್ತಿರುವ ಹಿನ್ನೆಲೆ ರಸ್ತೆ ಕಾಮಗಾರಿಗೆ ಸಿದ್ಧತೆ, ದೇಗುಲದ ಕಾಮಗಾರಿಗಳ ಪಕ್ಷಿ ನೋಟ, ಗಣ್ಯರಿಗೆ ಕುಳಿತುಕೊಳ್ಳಲು ವೇದಿಕೆ, ಸಮಾರಂಭಕ್ಕೆ ಸೂಕ್ತ ಸ್ಥಳ, ದಾಸೋಹ, ಗಣ್ಯರಿಗೆ ಪ್ರಸಾದದ ಸಿದ್ಧತೆ ಕುರಿತು ಸಹ ಮಾಹಿತಿ ಪಡೆದುಕೊಂಡಿದ್ದು, ಎಲಿಫ್ಯಾಡ್ ಸೇರಿದಂತೆ ಇನ್ನಿತರ ಅಗತ್ಯ ಸಿದ್ಧತೆಗಳನ್ನು ಪರಿಶೀಲನೆ ನಡೆಸಿ ಕಾರ್ಯಕ್ರಮದಲ್ಲಿ ಅತಿ ಗಣ್ಯ ವ್ಯಕ್ತಿಗಳು ಬರುವ ಹಿನ್ನೆಲೆಯಲ್ಲಿ ಯಾವುದೇ ಲೋಪದೋಷವಾದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.



# ಮದ್ದೂರು । ಮದ್ಯಪಾನ ಮಾಡಿ ಜಗಳ ; ಯುವಕನ ಕೊಲೆಯಲ್ಲಿ ಅಂತ್ಯ

**ಮದ್ದೂರು:** ಬಾರ್ ನಲ್ಲಿ ಕೂತು ಮದ್ಯಪಾನ ಮಾಡುತ್ತಿದ್ದ ವೇಳೆ ಯುವಕರ ನಡುವಿನ ಜಗಳ ಕೊಲೆಯಲ್ಲಿ ಅಂತ್ಯಕೊಂಡಿದೆ.

ಮದ್ದೂರು ತಾಲೂಕಿನ ಚುಂಚಗಳ್ಳಿ ಗ್ರಾಮದ ಸುನೀಲ್ (29) ಕೊಲೆಯಾದ ಯುವಕ.

**ಘಟನೆ ವಿವರ:** ಸುನೀಲ್ ತನ್ನ ಸ್ನೇಹಿತರಾದ ಸತೀಶ್, ಸಿದ್ದರಾಜು ಅವರೊಂದಿಗೆ ಮಂಗಳವಾರ ರಾತ್ರಿ 9.30ರ ವೇಳೆಗೆ ಕೆ.ಹೊನ್ನಲಗೆರೆಯ ದೀಪ ಬಾರ್ ನಲ್ಲಿ ಮದ್ಯಪಾನ ಮಾಡುವ ವೇಳೆಗೆ ಅಜ್ಜಹಳ್ಳಿ ಗ್ರಾಮದ ನಿಶಾಂತ್ ಮತ್ತು ಆತನ ಸ್ನೇಹಿತರು ಆಗಮಿಸಿದ್ದಾರೆ.



ನಿಶಾಂತ್ ಕ್ಯಾಷಿಯರ್ ಜೊತೆಗೆ ಕೆಲಕಾಲ ಮಾತಿನ ಚಕಮಕಿ ನಡೆದಿದೆ.ಬಳಿಕ ಸುನೀಲ್ ಮತ್ತು ಆತನ ಸ್ನೇಹಿತರು ಮಧ್ಯೆ ಪ್ರವೇಶಿಸಿ ತಿಳಿಗೊಳಿಸಿದ್ದಾರೆ. ಇದರಿಂದಾಗಿ ಕೋಪ ಗೊಂಡ ಸುನೀಲ್ ಮತ್ತು ಸ್ನೇಹಿತರು ಒಂದೇ ಬೈಕ್ ನಲ್ಲಿ 10.30 ರ ಸಮಯಕ್ಕೆ ತಮ್ಮ ಸ್ವಗ್ರಾಮ ಚುಂಚಗನಹಳ್ಳಿ ಗ್ರಾಮಕ್ಕೆ ತೆರಳುವಾಗ ಕೆ. ಹೊನ್ನಲಗೆರೆಯ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗ ಕಾರಿನಲ್ಲಿ ಬಂದ ದುಷ್ಕರ್ಮಿಗಳ ಗುಂಪೊಂದು ಬೈಕ್ ಅನ್ನು ಅಡ್ಡಗಟ್ಟಿ ಬೈಕ್ ನ ಹಿಂಬದಿ ಕುಳಿತಿದ್ದ ಸುನೀಲ್ ಕುತ್ತಿಗೆ ಭಾಗಕ್ಕೆ ಲಾಂಗ್ ಬೀಸಿ ಪರಾರಿಯಾಗಿದ್ದಾರೆ.

ಮಾರಕಾಸ್ತ್ರದ ದಾಳಿಗೆ ಸುನೀಲ್ ಗಂಭೀರವಾಗಿ ಗಾಯಗೊಂಡು, ಕುಸಿದು ಬಿದ್ದಿದ್ದಾನೆ. ಕೂಡಲೇ ಮದ್ದೂರು ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ನವೀನ್ ಹಾಗೂ ಸಿಬ್ಬಂದಿಗಳು ಗಾಯಾಳು ಸುನೀಲ್ ನನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಆದರೆ ಗಾಯಾಳು ಸುನೀಲ್ ಚಿಕಿತ್ಸೆ ಫಲಕಾರಿಯಾಗದೆ ಮಿಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

**ಪೊಲೀಸ್ ವರಿಷ್ಠಾಧಿಕಾರಿ ಭೇಟಿ** ವಿಷಯ ತಿಳಿದು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ. ಶೋಭಾರಾಣಿ ಭೇಟಿ ನೀಡಿ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿ ಪಡೆದು ಕೊಂಡು ಕೊಲೆ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚನೆ ಮಾಡಿದ್ದಾರೆ.

# ಬಿಜೆಪಿ ನಾಯಕರು ಫೋಟೋ ಶೂಟ್ ಬಿಟ್ಟು ನಿತ್ಯ ಸಾರ್ವಜನಿಕ ಸಾರಿಗೆ ಬಳಸುತ್ತಾರಾ?: ಡಿಸಿಎಂ

**ಬೆಂಗಳೂರು:** ಬಿಜೆಪಿ ನಾಯಕರು ಒಂದು ದಿನದ ಫೋಟೋ ಶೂಟ್ ಬಿಟ್ಟು ಪ್ರತಿನಿತ್ಯ ಮೆಟ್ರೋ, ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ?? ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರಶ್ನಿಸಿದರು.



ಸರ್ಕಾರಿ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿಶಿವಕುಮಾರ್ ಅವರು ಮಾಧ್ಯಮಗೋಷ್ಠಿ ನಡೆಸಿ ಗುರುವಾರ ಮಾತನಾಡಿದರು. ತಿರುಪತಿಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಪ್ರಾರ್ಥನೆ ಮಾಡಿರುವುದಾಗಿ ಹೇಳಿದ್ದೀರಿ, ಬೇರೆ ಏನು ಪ್ರಾರ್ಥನೆ ಮಾಡಿಕೊಳ್ಳಲಿಲ್ಲವೇ ಎಂದು ಕೇಳಿದಾಗ, ?ಮಾಂಗಲ್ಯ ಎಂಬುದು ನಮ್ಮ ಧರ್ಮದ ಸಂಕೇತ. ಹೆಣ್ಣು ಗಂಡು ಸೇರಿ ವಧು ವರರಾಗುತ್ತಾರೆ, ಅಕ್ಕಿ ಹಾಗೂ ಅರಿಶಿನ ಸೇರಿ ಮಂತ್ರಾಕ್ಷತೆಯಾಗುತ್ತದೆ. ಹಿಂದೂ ಧರ್ಮದಲ್ಲಿ ಈ ಹೆಣ್ಣು ಹಾಗೂ ಗಂಡಿನ ನಡುವೆ ಬಾಂಧವ್ಯ ಬೆಸೆಯುವುದು ಮಾಂಗಲ್ಯ. ಅದು ದೇವಾನು ದೇವತೆಗಳ ಕಾಲದಿಂದ ನಡೆದುಕೊಂಡು ಬಂದಿದೆ. ನಾವು ದೇವರಿಗೂ ಮಾಗಲ್ಯ ಹಾಕಿರುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಮಾಂಗಲ್ಯವನ್ನು ಖರೀದಿ ಮಾಡಬೇಡ ಎಂದರೆ ಹೇಗೆ? ನೀವು ದುಡಿದ ಹಣದಲ್ಲಿ ನೀವು ಅದನ್ನು ಖರೀದಿ ಮಾಡಿರುತ್ತೀರಿ. ನೀವು ಮದುವೆಯಾಗುವಾಗಲೂ ಚಿನ್ನ ಖರೀದಿ ಮಾಡಬೇಡ, ತಾಳಿ ಕಟ್ಟಬೇಡ ಅರಿಶಿನ ಕೊಂಬು ಕಟ್ಟಿಕೊಳ್ಳಿ ಎಂದರೆ ಹೇಗೆ? ನಿಮ್ಮ ಕೈಯಲ್ಲಿ ಬೆಲೆ ಏರಿಕೆ ತಡೆಯಲು ಆಗಲಿಲ್ಲ, ಅಡುಗೆ ಎಣ್ಣೆ, ಇಂಧನ ಕಡಿಮೆ ಬಳಸಿ ಎನ್ನುತ್ತಿದ್ದಾರೆ. ಇವರು ಒಂದೆರಡು ದಿನ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಸೋಮಣ್ಣ ಹಾಗೂ ಇತರೆ ಸಚಿವರು ಹಾಗೂ ಬಿಜೆಪಿ ನಾಯಕರು ದಿನನಿತ್ಯ ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ? ಅವರು ಓಡಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಅವರು ಪೆಟ್ರೋಲ್, ಡೀಸೆಲ್ ಉಳಿಸಲಿ, ಎವರು ಅಡುಗೆ ಎಣ್ಣೆ ಬಳಸಿದ ಆಹಾರ ತಿನ್ನುವುದೇ ಬೇಡ ಎಂದರು.

# ಉಡುಪಿಯಲ್ಲಿ ಮೇ 23–24 ರಂದು 6 ಪುಸ್ತಕಗಳ ಬಿಡುಗಡೆ

**ಮಂಡ್ಯ :** ಕನ್ನಡ ನಾಡು–ನುಡಿ , ಸಾಹಿತ್ಯ ಸಂಸ್ಕೃತಿಯ ಪ್ರಚಾರ ಪ್ರಸಾರಕ್ಕಾಗಿ ಶ್ರಮಿಸುತ್ತಿರುವ "ನುಡಿತೋರಣ ಬಳಗದ 4ನೇ ವಾರ್ಷಿಕೊಓತ್ಸವವವು ಮೇ ತಿಂಗಳ 23&24ನೇ ಉಡುಪಿಯಲ್ಲಿ ನಡೆಯಲಿದೆ

ಈ ವಾರ್ಷಿಕೋತ್ಸವದಲ್ಲಿ ವಿಶೇಷವಾಗಿ ಗುಂಪಿನ ಸದಸ್ಯರ 6 ಪುಸ್ತಕಗಳನ್ನು ಅತಿಥಿಗಳಾಗಿ ಪ್ರೇಮಶೇಖರ ಹಾಗೂ ಎ.ಎಸ್‌ಕೆ ಹೆಬ್ಬಾರ್ ಬಿಡುಗಡೆ ಮಾಡಲಿದ್ದಾರೆ

ಮುಂಬೈ ಕನ್ನಡತಿ ಶ್ರೀಮತಿ ಮಧು ವಸ್ತ್ರದ ಅವರ "ಚೈತ್ರದ ಚಿಗುರು" (ಎದೆಯ ಮಿಡಿತದ ಕವನ ಸಂಕಲನ) ಇದು ಇವರ ಎರಡನೇ ಕವನ ಸಂಕಲನವಾಗಿದ್ದು ಬದುಕಿನ ಹಸಿರು, ಉಸಿರು, ಬಿಸಿಲು, ಮಳೆ–ಗಾಳಿ ಗಳನ್ನು ಕಾವ್ಯದ ಕನ್ನಡಿಯಲ್ಲಿ ಬಿಂಬಿಸಿದ್ದಾರೆ..ಪ್ರಕೃತಿ, ಸಂಸ್ಕೃತಿ, ಮಾನವೀಯ ಸಂಬಂಧಗಳ ಬೆಸುಗೆಯೇ ಈ ಕೃತಿಯ ಜೀವಾಳವಾಗಿದೆ..

ಶ್ರೀಮತಿ ವಿಜಯ ನಿರ್ಮಲ ಇವರ 'ಕನ್ನಡದ ಆಧುನಿಕ ಸಾಧಕಿಯರು' (ನಾಡಿನ ಮಹಿಳಾ ಸಾಹಿತಿಗಳ ಪರಿಚಯ ಕೃತಿ) ಇದೊಂದು ಅಪೂರ್ವ ಕೃತಿ. ಇದರಲ್ಲಿ ನಾಡಿನ 47 ಮಹಿಳಾ ಸಾಹಿತ್ಯ ಸಾಧಕರ ಸುದೀರ್ಘ ಪರಿಚಯ ಇದೆ. ಪ್ರಸ್ತುತ ಸ್ವಾರ್ಥದ ಜಗತ್ತಿನಲ್ಲಿ ಯಾವುದೇ ಅಪೇಕ್ಷೆಯಿಲ್ಲದೆ ನಾಡಿನ ಮಹಿಳಾ ಸಾಧಕಿಯರನ್ನು ಗುರುತಿಸಿ ಪರಿಚಯಿಸಿದ್ದಾರೆ. ಇದು ಲೇಖಕಿಯ 3ನೇ ಕೃತಿಯಾಗಿದೆ.

ಶ್ರೀಕಾಂತ ಪತ್ರೆಮರ ಅವರ ಚೊಚ್ಚಲ ಕವನ ಸಂಕಲನ 'ವ್ಯಕ್ತ ಪತ್ರೆಗಳು' ಪುಸ್ತಕ ಇದಾಗಿದ್ದು, ಪತ್ರೆಮರ ಪ್ರಕಾಶನ, ಬೆಂಗಳೂರು ವತಿಯಿಂದ ಪ್ರಕಟಗೊಂಡಿದೆ.

ತಂದೆಯವರಿಂದ ಬಳುವಳಿಯಾಗಿ ಬಂದ ಸಾಹಿತ್ಯಾಸಕ್ತಿಯೇ ಈ ಕಾವ್ಯ ರಚನೆಗೆ ಮೂಲ ಪ್ರೇರಣೆಯಾಗಿದ್ದು, ಬದುಕಿನ ಭಾವನಾತ್ಮಕ ಅನುಭವಗಳಿಗೆ ಇಲ್ಲಿ ಅಕ್ಷರದ ರೂಪ ನೀಡಲಾಗಿದೆ. "ಹೋಗುವಾಗ ಏನನ್ನೂ ಒಯ್ಯಲು ಸಾಧ್ಯವಿಲ್ಲ; ಒಂದೋ ಬಿಟ್ಟು ಹೋಗಬೇಕು, ಇಲ್ಲವೇ ಕೊಟ್ಟು ಹೋಗಬೇಕು" ಎಂಬ ದಾರ್ಶನಿಕ ಸತ್ಯಕ್ಕೆ ಓಗೊಟ್ಟು ಲೇಖಕರು ಈ ಕೃತಿಯನ್ನು ತಂದಿದ್ದಾರೆ. ತಾವು ಬರೆದ ಕವಿತೆಗಳು




ಚದುರಿ ಹೋಗದೆ, ನೆನಪಿನ ಬುತ್ತಿಯಾಗಿ ಓದುಗರನ್ನು ತಲುಪಲಿ ಎಂಬ ಸದಾಶಯದೊಂದಿಗೆ ಈ ಹೊತ್ತಿಗೆಯನ್ನು ಲೋಕಾರ್ಪಣೆಗೊಳಿಸಲಾಗಿದೆ.

'ನುಡಿಕಥಾಮಾಲಾ' (ಕಥೆಗಳ ಸಂಕಲನ) ? ಸಂಪಾದಕರು: ಶ್ರೀಮತಿ ಜಯಶ್ರೀ ರಾಜು, ಬೆಂಗಳೂರು (?ನುಡಿಸಂಭ್ರಮ 2026?ರ ಕಥಾಸ್ಪರ್ಧೆಯ ಕಥೆಗಳ ಸಂಕಲನ)

(ನುಡಿಸಂಭ್ರಮ 2026?ರ ರಾಜ್ಯಮಟ್ಟದ ಕಥಾಸ್ಪರ್ಧೆಯ ಆಯ್ದ ಕಥೆಗಳ ಸಂಕಲನ) ನುಡಿಸಂಭ್ರಮ 2026?ರ ಅಂಗವಾಗಿ ಆಯೋಜಿಸಲಾಗಿದ್ದ ಕಥಾಸ್ಪರ್ಧೆಯು ನಾಡಿನಾದ್ಯಂತ ಹೊಸ ಬರವಣಿಗೆಯ ಅಲೆ ಎಬ್ಬಿಸಿತ್ತು. ಆ ಸ್ಪರ್ಧೆಯಿಂದ ಆಯ್ದ ಅತ್ಯುತ್ತಮ 19 ಕಥೆಗಳ ಜೊತೆ ನುಡಿತೋರಣ ಬಳಗದ ಕೆಲ ಸದಸ್ಯರ ಕಥೆಗಳೂ ಸೇರಿ ಒಟ್ಟು 24 ವೈವಿಧ್ಯಮಯ ಕಥೆಗಳು ಈ ?ನುಡಿಕಥಾಮಾಲಾ? ಸಂಕಲನದಲ್ಲಿ ಅಕ್ಷರರೂಪ ಪಡೆದಿವೆ.

ಶ್ರೀ ಕಿರಣ್ ಹಿರಿಸಾವೆ ಅವರ 'ಆ ಐದು ನಿಮಿಷಗಳು' (ಸಮಕಾಲೀನ ಆಧುನಿಕ ನಗರದ ಬದುಕಿನ ಏರಿಳಿತಗಳ ಧ್ವನಿಸುವ ಕಥಾ ಸಂಕಲನ) ?

ತಾಂತ್ರಿಕ ವೃತ್ತಿಯಲ್ಲಿದ್ದರೂ ವರ್ತಮಾನದ ತಲ್ಲಣಗಳನ್ನು ಅಕ್ಷರಗಳಲ್ಲಿ ಸಮರ್ಥವಾಗಿ ಹಿಡಿದಿಟ್ಟಿರುವ ಕಿರಣ್ ಹರಿಸಾವೆ ಅವರ ಚೊಚ್ಚಲ ಕಥಾಸಂಕಲನವು ಅತ್ಯಂತ ಸುಲಲಿತ ಮತ್ತು ಸರಾಗವಾದ ಶೈಲಿಯಲ್ಲಿದೆ. ಸಂಕಲನದಲ್ಲಿನ ಎಂಟು ಕಥೆಗಳು ವಿಭಿನ್ನ ಶೀರ್ಷಿಕೆ ಮತ್ತು ಕಥಾವಸ್ತುಗಳನ್ನು ಹೊಂದಿದ್ದು, ಪ್ರಸ್ತುತ ಕಾಲಘಟ್ಟದ ಬದುಕಿನ ವಿವಿಧ ಆಯಾಮಗಳನ್ನು ಸೊಗಸಾಗಿ ತರೆದಿಡುತ್ತವೆ. 22ನೇ ಶತಮಾನದ ಕೃತಕ ಬುದ್ಧಿಮತ್ತೆಯ ಬದುಕಿನಿಂದ ಹಿಡಿದು, ಮಧ್ಯವಯಸ್ಕ ಹೆಣ್ಣುಮಕ್ಕಳ ಆಸೆ–ಆಕಾಂಕ್ಷೆಗಳು, ದಾಂಪತ್ಯದ ಸಿಹಿ–ಕಹಿ ಹಾಗೂ ಇಂದಿನ ಯಾಂತ್ರಿಕ ಜೀವನದ ಓಟದವರೆಗಿನ ಕಟು ವಾಸ್ತವಗಳನ್ನು ಈ ಕಥೆಗಳು ಮುಟ್ಟುತ್ತವೆ. ಪ್ರತಿಯೊಂದು ಕಥೆಯಲ್ಲೂ ಲೇಖಕರು ವಿಭಿನ್ನ ಪಾತ್ರಗಳನ್ನು ಶ್ರಮವಹಿಸಿ, ಸಶಕ್ತವಾಗಿ ಕಟ್ಟಿಕೊಡುವ ಮೂಲಕ ಕಥನ ಕಲೆಯನ್ನು ಸಿದ್ಧಿಸಿಕೊಂಡಿರುವುದನ್ನು ತೋರಿಸಿದ್ದಾರೆ.

**ಶ್ರೀ ಕಿರಣ್ ಹಿರಿಸಾವೆ, ಯವರ ಕಥಾ ಸಂಕಲನದ ಅನುವಾದವನ್ನು** : ಡಾ. ಜಿ. ಎಸ್. ಸರೋಜಾ, ಕೇಂದ್ರ ಸರ್ಕಾರದ ಹಿಂದಿ ಪರಿಷತ್ ಸಮಿತಿ ಸದಸ್ಯೆ (?ಆ ಐದು ನಿಮಿಷಗಳು? ಕೃತಿಯ ಹಿಂದಿ ಆವೃತ್ತಿ)

ಮಾಡಿರುತ್ತಾರೆ. ಕೃತಿಯ ಹೆಸರು 'ವೋ ಪಾಂಚ್ ಮಿನಟ್' ಅನುವಾದಕರುಮೂಲ ಲೇಖಕರ ಕಥಾ ಹರಿವು ಮತ್ತು ಭಾವನೆಗಳನ್ನು ಅತ್ಯಂತ ಅನುಪಮ ರೂಪದಲ್ಲಿ ಹಿಂದಿ ಭಾಷೆಗೆ ಇಳಿಸಿರುವುದು ಅನುವಾದಕಿ ಸರೋಜಾ ಅವರ ಕೌಶಲ್ಯ ಮತ್ತು ಲೇಖನಿಯ ಪವಾಡ ಅದ್ಭುತವಾಗಿದೆ. ಮಾತೃಭಾಷೆಯಲ್ಲದ ಮತ್ತೊಂದು ಭಾಷೆಗೆ ಸಾಹಿತ್ಯವನ್ನು ತರ್ಜುಮೆ ಮಾಡುವುದು ಅತ್ಯಂತ ಗಂಭೀರ ಹಾಗೂ ಸವಾಲಿನ ಕೆಲಸವಾಗಿದ್ದು, ಅದನ್ನು ಸರೋಜಾ ಅವರು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಈ ಯಶಸ್ವಿ ಅನುವಾದದ ಮೂಲಕ ಸರೋಜಾ ಅವರು ಸಾಹಿತ್ಯದ ಮಾಧ್ಯಮದಲ್ಲಿ ಉತ್ತರ ಮತ್ತು ದಕ್ಷಿಣ ಭಾರತದ ನಡುವಿನ ಭಾಷಾಂತರದ ದೂರವನ್ನು ಅಳಿಸುವ ಅತ್ಯಮೂಲ್ಯ ಕೆಲಸ ಮಾಡಿದ್ದಾರೆ.

ಇಂತಹ 6 ಉತ್ತಮ ಸಾಹಿತ್ಯಿಕ ರಚನೆಗಳ ಬಿಡುಗಡೆ ಮಾಡುತ್ತಿರುವ " ನುಡಿ ತೋರಣ" 175 ಸಮಾನ ಮನಸ್ಕ ಕವಿಗಳ ಕುಟುಂಬವಾಗಿದೆ. ಪರಸ್ಪರರ ಅಭಿವೃದ್ಧಿಯಲ್ಲಿ ಸಾಹಿತ್ಯವನ್ನು ಪ್ರೋತ್ಸಾಹಿಸುತ್ತ ನುಡಿ ಕುಟುಂಬ ವಾರಕ್ಕೆ ಒಂದು ಅಂಕಣದಂತೆ ಇದುವರೆಗೂ 35ಕ್ಕೂ ಹೆಚ್ಚು ಅಂಕಣಗಳನ್ನು ಪ್ರಕಟಿಸಿದೆ. ನುಡಿ ಬುತ್ತಿ, ನುಡಿ ರಥ, ಸಾಹಿತಿಗಳೊಂದಿಗೆ ಸಂವಾದ, ತಿಂಗಳಿಗೊಮ್ಮೆ ಕನ್ನಡ ಕೃತಿಗಳ ಕುರಿತು ಚರ್ಚೆ ಮೊದಲಾದ ಸಾಹಿತ್ಯಿಕ ಚರ್ಚೆ ನಡೆಯುತ್ತದೆ. ವಿಶೇಷ ವ್ಯಕ್ತಿಗಳೊಂದಿಗೆ ಸಂವಾದ ನಡೆಸುವ ಈ ಬಾರಿಯ ವಾರ್ಷಿಕೋತ್ಸವದದಲ್ಲಿ ಖ್ಯಾತ ಲೇಖಕ ಸಂತೋಷ್ ಮೆಹಂದಳೆ ಅವರೊಂದಿಗೆ ಸಂವಾದ, ಡಾ.ಮೀರಾ ಎಚ್ ಎನ್ ಅವರ "ಪಂಚವರ್ಣೆ" ಏಕ ವ್ಯಕ್ತಿ ನಾಟಕ, ಹಿರಿಯ ಕವಿಗಳ ಕವಿತಾ ವಾಚನದ ಕವಿ ಗೋಷ್ಠಿ, ನುಡಿ ಭೂಷಣ ಪ್ರಶಸ್ತಿ ಪ್ರದಾನ, ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಜೊತೆಗೆ ನೃತ್ಯ, ನಮ್ಮ ಸಂಸ್ಕೃತಿ ಬಿಂಬಿಸುವ ವಿಶೇಷ ವೇಷ ಭೂಷಣ ಮೊದಲಾದ ಕಾರ್ಯ ನಡೆಯಲಿದೆ. ಸಮಾರೋಪವನ್ನು ನರೇಂದ್ರ ರೈ ದೇರ್ಲ ಅವರ ಮಾತುಗಳಿಂದ ಮುಗಿಯಲಿದೆ.

# ಆನ್‌ಲೈನ್ ಔಷಧ ವ್ಯಾಪಾರ ನಿಲ್ಲಿಸುವಂತೆ ಒತ್ತಾಯಿಸಿ ಔಷಧ ವ್ಯಾಪಾರ ಬಂದ್

**ರಾಮನಗರ:** ರಾಮನಗರ: ರಾಮನಗರ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ನೀಡಿದ್ದ ಬಂದ್ ಕರೆಯ ಮೇರೆಗೆ ಜಿಲ್ಲಾ ಕೇಂದ್ರ ರಾಮನಗರದಲ್ಲಿ ಬಹುತೇಕ ಔಷಧ ವ್ಯಾಪಾರಿಗಳು ಸ್ಪಂದಿಸಿದ್ದರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಹುತೇಕ ಔಷಧ ಅಂಗಡಿಗಳು ಬಂದ್ ಆಗಿದ್ದವು.



ಇ-ಕಾಮರ್ಸ್ ಮೂಲಕ ಔಷಧ ವ್ಯಾಪಾರವನ್ನು ತಡೆಯಬೇಕು. ಕಾರ್ಪೋರೇಟ್ ಔಷಧ ಮಳಿಗೆಗಳು ಅನುಸರಿಸುತ್ತಿರುವ ಅತಿಯಾದ ರಿಯಾಯಿತಿ ವ್ಯಾಪಾರವನ್ನು ತಡೆಯಬೇಕು ಎಂಬ ಸರ್ಕಾರಗಳನ್ನು ಒತ್ತಾಯಿಸಿ ಔಷಧ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ಸ್ಥಗಿತಗೊಳಿಸಿ ಪ್ರತಿಭಟಿಸಿದರು.

**ನ್ಯಾಯಸಮ್ಮತ ಸ್ಪರ್ಧೆಕೆ ಧಕ್ಕೆ:** ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ಅತಿಯಾದ ರಿಯಾಯಿತಿ ನೀಡುವ ಮೂಲಕ ಪಾರಂಪರಿಕವಾಗಿ ಸ್ಥಾಪಿತವಾಗಿರುವ ಔಷಧ ವ್ಯಾಪಾರಿಗಳ ನಡುವೆ ನ್ಯಾಯಸಮ್ಮತ ಸ್ಪರ್ಧೆಯನ್ನು ಹಾಳು ಮಾಡುತ್ತಿವೆ ಸಣ್ಣ ಮತ್ತು ಮಧ್ಯಮ ಔಷಧಿ ವ್ಯಾಪಾರಿಗಳ ಬದುಕಿಗೆ ಅಪಾಯ ಉಂಟುಮಾಡುತ್ತಿವೆ, ಅಸ್ಥಿರ ಮಾರುಕಟ್ಟೆ ಪರಿಸ್ಥಿತಿಯನ್ನು ನಿರ್ಮಿಸುತ್ತಿವೆ ಎಂದು ಔಷಧ ವ್ಯಾಪಾರಿಗಳ ಸಂಘ ಆರೋಪಿಸಿದೆ.

ಆನ್ ಲೈನ್ (ಇ-ಕಾಮರ್ಸ್) ಸ್ಟೋರುಗಳಿಗೆ ಅವಕಾಶ ಮಾಡಿಕೊಟ್ಟಿರುವುದರಿಂದ ವಿಶೇಷವಾಗಿ ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳ ಔಷಧ ವ್ಯಾಪಾರಿಗಳಿಗೆ ಸಮಸ್ಯೆಯಗುತ್ತಿದೆ. ಇವರು ಗ್ರಾಮೀಣ ಭಾರತದ ಆರೋಗ್ಯ ಸೇವೆಯ ಬೆನ್ನೆಲುಬಾಗಿದ್ದಾರೆ. ಇಂತಹ ವ್ಯಾಪಾರಿಗಳ ಅಸ್ತಿತ್ವಕ್ಕೆ ಧಕ್ಕೆಯಾಗುವುದು ಔಷಧಿಗಳ ಲಭ್ಯತೆ ಮತ್ತು ಕೈಗೆಟುಕುವ ದರಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಔಷಧ ವ್ಯಾಪಾರಿಗಳು ತಮಗಾಗುತ್ತಿರುವ ಸಮಸ್ಯೆಯನ್ನು ಸರ್ಕಾರಕ್ಕೆ ಬರೆದ ಮನವಿಯಲ್ಲಿ ಹೇಳಿಕೊಂಡಿದ್ದಾರೆ.


**ಕೇಂದ್ರ ಸಚಿವರಿಗೆ ಬರೆದ ಮನವಿ, ಜಿಲ್ಲಾಡಳಿತಕ್ಕೆ ಸಲ್ಲಿಕೆ:** ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಜಯಪ್ರಕಾಶ್‌ನಡ್ಡಾ ಅವರಿಗೆ ಬರೆದ ಮನವಿಯನ್ನು ರಾಮನಗರ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಜಿಲ್ಲಾಡಳಿತಕ್ಕೆ ಸಲ್ಲಿಸಿದರು.

- ಅರ್ಧ ದಿನ ವ್ಯಾಪಾರ ಸ್ಥಗಿತ
- ಕೇಂದ್ರ ಆರೋಗ್ಯ ಸಚಿವರಿಗೆ ಬರೆದ ಮನವಿ ಜಿಲ್ಲಾಡಳಿತದ ಮೂಲಕ ರವಾನೆ
- ಕಾರ್ಪೋರೇಟ್ ವ್ಯಾಪಾರಿಗಳಿಂದಾಗಿ ಗ್ರಾಮೀಣ ಔಷಧ ವ್ಯಾಪಾರಿಗಳಿಗೆ ತೊಂದರೆ

ದೇಶದ ಸಣ್ಣ ಔಷಧಿ ವ್ಯಾಪಾರಿಗಳ ಬದುಕಿನ ಮೇಲೆ ದುಷ್ಪರಿಣಾಮ ಬೀರುತ್ತಿರುವ ಕೆಲವು ಗಂಭೀರ ಸಮಸ್ಯೆಗಳ ಕುರಿತು ಹಲವಾರು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು ನಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಿಲ್ಲ. ಹೀಗಾಗಿ ಔಷಧ ವ್ಯಾಪಾರವನ್ನು ಬಂದ್ ಮಾಡಿ ಸರ್ಕಾರದ ಗಮನ ಸೆಳೆಯುವ ಅನಿವಾರ್ಯವುಂಟಾಗಿದೆ ಎಂದು ಔಷಧ ವ್ಯಾಪಾರಿಗಳು ಮನವಿಯಲ್ಲಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈಗಲೂ ತಮ್ಮ ಮನವಿಗೆ ಸ್ಪಂದಿಸದಿದ್ದರೆ ಮತ್ತೆ ಹೋರಾಟ ಮಾಡುವುದಾಗಿಯೂ ವ್ಯಾಪಾರಿಗಳು ಸಚಿವರಿಗೆ ಎಚ್ಚರಿಕೆ ನೀಡಿದ್ದಾರೆ. ಔಷಧ ವ್ಯಾಪಾರಿಗಳು ನೀಡಿದ ಮನವಿಯನ್ನು ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಸ್ವೀಕರಿಸಿದರು. ಈ ವೇಳೆ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎಚ್.ಮಂಜುನಾಥ್, ಜಂಟಿ ಕಾರ್ಯದರ್ಶಿ ರಾಜಶೇಖರ್, ಖಜಾಂಚಿ ಅತೀಕ್, ಕಾರ್ಯದರ್ಶಿ ರೂಪೇಶ್, ಕಾರ್ಯಕಾರಿ ಸಮಿತಿ ಸದಸ್ಯ ಕೆ. ಜಯರಾಮ್, ರಾಮನಗರ ತಾಲ್ಲೂಕು ಸಂಘದ ಅಧ್ಯಕ್ಷ ಪುರುಷೋತ್ತಮ್, ಖಜಾಂಚಿ ಅಕ್ರಂಪಾಷ, ಬಿಡದಿ ಹೋಬಳಿ ಸಂಘದ ಖಜಾಂಚಿ ವರುಣ್, ಕಾರ್ಯದರ್ಶಿ ಜಯರಾಂ, ಪ್ರಮುಖರಾದ ನವೀನ್, ಸುನಿಲ್, ಗವಿರಾಜ್, ನವೀನ್‌ರಾವ್, ಕಾಶಿಫ್, ಮುಜಿಬುಲ್ಲಾ ಖಾನ್, ಸಂಸ್, ಮನ್‌ಸೂರ್, ಅಕ್ರಂ, ತೌಷಿಪ್ ಪಾಷ, ಸಮೀನ್ ಪಾಷ, ಮುಬಾರಕ್, ಸಾಧಿಕ್ ಪಾಷ, ರಿಜ್‌ವಾನ್ ಪಾಷ, ಇಂಬ್ರಾನ್ ಪಾಷ ಮುಂತಾದವರಿದ್ದರು.

---

# ನಿಯಮಿತ ಹವ್ಯಾಸಗಳು... ಯಶಸ್ಸಿನ ಸೋಪಾನಗಳು



ವೀಣಾ ಹೇಮಂತ್‌ಗೌಡ ಪಾಟೀಲ್



ಅದೊಂದು ಪುಟ್ಟ ಹಳ್ಳಿಯಲ್ಲಿ ತನ್ನ ಪಾಲಕರು ಹಾಗೂ ಪುಟ್ಟ ಸಹೋದರನೊಂದಿಗೆ ವಾಸವಾಗಿದ್ದ ಆ ಯುವಕ ಸಂದೀಪ ಕಳೆದ ಕೆಲ ತಿಂಗಳುಗಳ ಹಿಂದೆ ತನ್ನ ಪದವಿ ಶಿಕ್ಷಣವನ್ನು ಪೂರೈಸಿದ್ದ. ಆದರೆ ಯಾವುದೇ ಕೆಲಸವನ್ನು ಹುಡುಕುವ ಯೋಚನೆಯನ್ನು ಆತ ಮಾಡಿರಲಿಲ್ಲ. ಮುಂಜಾನೆ ಯಾವುದೋ ಹೊತ್ತಿಗೆ ಎದ್ದು ನಂತರ ತನ್ನ ದಿನಚರಿಯನ್ನು ಪೂರೈಸುತ್ತಿದ್ದನಾತ. ಆತನ ನಿಷ್ಕ್ರಿಯತೆ ಆತನ ಪಾಲಕರಲ್ಲಿ ಬೇಸರವನ್ನುಂಟು ಮಾಡಿದ್ದು ಈತನಿಗೆ ಬುದ್ಧಿ ಯಾವಾಗ ಬರುತ್ತದೆ ಎಂದು ಅವರು ಸದಾ ಚಿಂತಿಸುವಂತೆ ಆಗಿತ್ತು. ಇದಕ್ಕೆ ಜೊತೆಯಾಗಿ ನೆರೆಹೊರೆಯುವುದು ಸಂದೀಪ ಏನು ಮಾಡುತ್ತಾನೆ? ಮುಂದೆ ಏನು ಯೋಜನೆಗಳನ್ನು ಹಾಕಿಕೊಂಡಿದ್ದಾನೆ? ಎಂದು ಪ್ರಶ್ನಿಸಲು ಆರಂಭಿಸಿದ್ದರು.

ಇನ್ನೇನು ಸುಧಾರಿಸುತ್ತಾನೆ, ತನ್ನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾನೆ ಎಂಬ ಪಾಲಕರ ಕನಸು ಕನಸಾಗಿಯೇ ಉಳಿಯುತ್ತದೆ ಎಂಬ ಭಯ ಅವರಲ್ಲಿ ಉಂಟಾಯಿತು. ಅದೊಮ್ಮೆ ಮಗಳನ್ನು ನೋಡಲು ಬಂದ ಆತನ ಅಜ್ಜ ಮನೆಯ ಪರಿಸ್ಥಿತಿಯನ್ನು ಅರಿತರು.

ಮನೆಯ ಹಿತ್ತಲಿನಲ್ಲಿದ್ದ ದೊಡ್ಡ ಮರವನ್ನು ತೋರಿಸಿದ

ಅವರು ಮೊಮ್ಮಗ ಸಂದೀಪನಿಗೆ "ಈ ಗಿಡ ಒಂದೇ ದಿನಕ್ಕೆ ಇಷ್ಟು ದೊಡ್ಡದಾಗಿ ಬೆಳೆದಿಲ್ಲ ಪ್ರತಿದಿನ ಕೊಂಚ ಕೊಂಚ ತನ್ನ ಗಾತ್ರವನ್ನು ಹೆಚ್ಚಿಸಿಕೊಂಡು ಇದು ನಿರಂತರವಾಗಿ ಬೆಳೆದ ಪರಿಣಾಮವೇ ಇಂದು ಇಷ್ಟು ದೊಡ್ಡ ಮರವಾಗಿದೆ... ಹಾಗೆಯೇ ನಾವು ಒಳ್ಳೆಯ ಅಭ್ಯಾಸಗಳನ್ನು ಬದುಕಿನಲ್ಲಿ ಹೊಂದಿ ಅವುಗಳ ಮೂಲಕ ಯಶಸ್ಸನ್ನು ಸಾಧಿಸಬೇಕು" ಎಂದು ಅವರು ಸೂಚ್ಯವಾಗಿ ಹೇಳಿದರು.... ಆದರೆ ಸಂದೀಪನ ಮೇಲೆ

ಅಜ್ಜನ ಈ ಮಾತುಗಳು ಯಾವುದೇ ಪರಿಣಾಮವನ್ನು ಬೀರಲಿಲ್ಲ. ಆತನ ನಿಷ್ಕ್ರಿಯತೆ ಹಾಗೆಯೇ ಮುಂದುವರೆಯಿತು.

ಇದರಿಂದ ಬೇಸತ್ತ ಸಂದೀಪನ ತಾಯಿ ಅದೊಂದು ದಿನ ಊರಿನ ಹೊರಗೆ ವಾಸಿಸುತ್ತಿದ್ದ ಗುರುಗಳ ಬಳಿ ಆತನನ್ನು ಕರೆದೊಯ್ದರು. ತಾಯಿಯ ಸೂಚನೆಯಂತೆ ಗುರುಗಳಿಗೆ ನಮಸ್ಕರಿಸಿದ ಯುವಕನನ್ನು ನೋಡಿ ಗುರುಗಳು ಮೆಲು ನಗೆಯನ್ನು ಸೂಸಿ ಅತ್ಯಂತ ಪ್ರೀತಿಯಿಂದ 'ಹೇಳು ಏನು ನಿನ್ನ ತೊಂದರೆ" ಎಂದು ಕೇಳಿದರು.

'ಗುರುಗಳೇ ನನಗೆ ಜೀವನದಲ್ಲಿ ದೊಡ್ಡ ಸಾಧನೆ ಮಾಡುವ, ಹೆಚ್ಚು ಹಣವನ್ನು ಸಂಪಾದಿಸುವ ಉದ್ಯೋಗವನ್ನು ಹೊಂದುವ ಆಸೆ, ಆದರೆ ಹೇಗೆ ಮುಂದುವರಿಯಬೇಕು ಎಂಬುದು ಗೊತ್ತಾಗುತ್ತಿಲ್ಲ ಇದರಲ್ಲಿಯೇ ನನ್ನ ದಿನಗಳು ಕಳೆದು ಹೋಗುತ್ತಿವೆ' ಎಂದು ಬೇಸರದಿಂದ ಹೇಳಿದ.

ಆತನ ಮಾತಿನ ಶೈಲಿಯಿಂದ ಆತನ ಗೊಂದಲವನ್ನು ಅರಿತ ಗುರುಗಳು ಪ್ರತಿದಿನ ನೀನು ಮಾಡುವ ಯಾವುದಾದರೂ ಮೂರು ಕೆಲಸಗಳನ್ನು ಒಂದು ನೋಟ್ ಪುಸ್ತಕದಲ್ಲಿ ಬರೆಯಬೇಕು ಎಂದು ಹೇಳಿದರು. ಕುಡಿದ ಒಂದು ಲೋಟ ನೀರಿನ ಬಗ್ಗೆ ಕೂಡ ಬರೆಯಬಹುದು ಎಂದು ಅವರು ಹೇಳಿದಾಗ ಅರೆ ! ಇಷ್ಟು ಚಿಕ್ಕ ವಿಷಯಗಳನ್ನು ಕೂಡ ಬರೆದು ದಾಖಲಿಸುವುದು ಅಷ್ಟೊಂದು ಕಷ್ಟದ ವಿಷಯವಲ್ಲ ಎಂದು ಮನಸ್ಸಿನಲ್ಲಿ ಯೋಚಿಸಿದ ಸಂದೀಪ ಆಯ್ತು ಎಂದು ಹೇಳಿ ಮನೆಗೆ ಬಂದ.

ಮರುದಿನ ಮುಂಜಾನೆ ತಾನು ಮಾಡಿದ ಎಲ್ಲಾ ಕೆಲಸಗಳಲ್ಲಿ ಮೂರು ಮುಖ್ಯ ಕೆಲಸಗಳನ್ನು ನೋಟ್ ಪುಸ್ತಕದಲ್ಲಿ ದಾಖಲಿಸಿದ ಹೀಗೆ ಎರಡು ಮೂರು ದಿನಗಳ ಕಾಲ ತಾನು ಮಾಡಿದ ಕೆಲಸಗಳನ್ನು ದಾಖಲಿಸಿದ ಸಂದೀಪ ನಾಲ್ಕನೆಯ ದಿನ ತುಸು ತಡವಾಗಿ ಎದ್ದನಲ್ಲದೇ ನೋಟ್ ಪುಸ್ತಕದಲ್ಲಿ ಬರೆಯುವುದನ್ನು ತಪ್ಪಿಸಿದ. 5 6ನೇ ದಿನ ಮತ್ತೆ ಎಲ್ಲವನ್ನು ನೋಟ್ ಪುಸ್ತಕದಲ್ಲಿ ದಾಖಲಿಸಿದ ಆತ ಏಳನೇ ದಿನ ಮತ್ತೆ ದಾಖಲಿಸಲು ಎಡವಿದ.

ವಾರದ ನಂತರ ಬಂದು ಗುರುಗಳನ್ನು ಆತ ಭೇಟಿಯಾದಾಗ ಆತನ ಮುಖದಲ್ಲಿ ಇದ್ದ ಮ್ಲಾನತೆಯನ್ನು ಗುರುಗಳು ಗಮನಿಸಿದರು. ಸಪ್ಪಗಿರುವೆ ಏಕೆ ? ಎಂದು ಗುರುಗಳು ಕೇಳಿದರು. ಅದಕ್ಕೆ ಉತ್ತರವಾಗಿ ಸಂದೀಪ ಮೆಲುವಾಗಿ

'ನೀವು ಹೇಳಿದ ಅತ್ಯಂತ ಪುಟ್ಟ ಕೆಲಸವನ್ನು ಕೂಡ ನನಗೆ ಸಂಪೂರ್ಣವಾಗಿ ಮಾಡಿ ಮುಗಿಸಲು ಸಾಧ್ಯವಾಗಲಿಲ್ಲ. ಒಂದು ವಾರದಲ್ಲಿ ನಾನು ಸರಿ ಸುಮಾರು ಎರಡು ಮೂರು ಬಾರಿ ದಾಖಲಿಸಲು ಸಾಧ್ಯವಾಗಿಲ್ಲ' ಎಂದು ಹೇಳಿದ.

ನಸುನಕ್ಕ ಗುರುಗಳು ಪರವಾಗಿಲ್ಲ ಕನಿಷ್ಠ ಪಕ್ಷ ನಿನಗೆ ನೀನು ಮಾಡಿದ ತಪ್ಪಿನ ಅರಿವಾದರೂ ಆಗಿದೆ ಅಲ್ಲವೇ. ಇದೀಗ ನೀನು ಮನೆಗೆ ಮರಳಿ ಮತ್ತೆ ನಿನ್ನ ಪ್ರಯತ್ನವನ್ನು ಮುಂದುವರಿಸು ಮುಂದಿನ ವಾರ ಬಾ ಎಂದು ಹೇಳಿದರು. ಗುರುಗಳ ಮಾತಿನಿಂದ ಆಶಾಭಾವ ಹೊಂದಿದ ಸಂದೀಪ ಮನೆಗೆ ಮರಳಿದ. ಈ ಬಾರಿ ಆತ ಮುಂಜಾನೆ ನಸುಕಿನ ಜಾವದಲ್ಲಿ ಎದ್ದು ಒಂದಷ್ಟು ವ್ಯಾಯಾಮ ಮಾಡುವುದನ್ನು ರೂಢಿಸಿಕೊಂಡ ದೂರ ಬೆಟ್ಟದವರೆಗೆ ನಡೆದು ಪೂರೈಸಿದ. ಆದರೂ ಕೂಡ ಒಂದೆರಡು ದಿನ ಮತ್ತೆ ತಾನು ಮಾಡಿದ ಕೆಲಸಗಳನ್ನು ದಾಖಲಿಸುವುದನ್ನು ತಪ್ಪಿಸಿದ.

ವಾರದ ನಂತರ ಸಂದೀಪ ತನ್ನ ಗುರುಗಳ ಬಳಿ ಹೋಗಿ ನೋಟ್ ಪುಸ್ತಕವನ್ನು ಅವರ ಮುಂದೆ ಹಿಡಿದಾಗ ಗುರುಗಳು ಪರವಾಗಿಲ್ಲ ತುಸು ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವೆ ಪ್ರತಿದಿನ ನಿನ್ನ ಪ್ರಯತ್ನದ ಶೇಕಡ ಒಂದನ್ನು ನೀನು ಬಳಸುವ ಮೂಲಕ ನಿರಂತರ ಯಶಸ್ಸನ್ನು ಪಡೆಯಬಹುದು ಎಂದು ತಿಳಿಹೇಳಿ ಮತ್ತೆ ಇದೇ ರೀತಿ ಮುಂದುವರೆಯಲು ಕೆಲವು ಸಲಹೆ ಸೂಚನೆಗಳನ್ನು ನೀಡಿ ಆತನ ಬೆನ್ನು ಚಪ್ಪರಿಸಿ ಕಳುಹಿಸಿ ಕೊಟ್ಟರು.

ಹೀಗೆಯೇ ಮೂರು ವಾರಗಳು ಕಳೆಯುವ ಹೊತ್ತಿಗೆ ಆತನಲ್ಲಿ ಪ್ರತಿದಿನ ಮುಂಜಾನೆ ಬೇಗನೆ ಏಳುವ, ಆರೋಗ್ಯದ ಕುರಿತು ಕಾಳಜಿ ವಹಿಸುವ ನಿಟ್ಟಿನಲ್ಲಿ ವ್ಯಾಯಾಮ ನಡುಗೆಗಳಲ್ಲಿ ತೊಡಗಿಕೊಂಡ ಕಾರಣ ಯವ್ವನದ ಕಾಂತಿ ಚಿಮ್ಮತೊಡಗಿತ್ತು. ನಿಶ್ಚಿತ ಉದ್ದೇಶವಿಟ್ಟುಕೊಂಡು ಮನೆಯ ಕೆಲಸ ಕಾರ್ಯಗಳಲ್ಲಿ ಆತ ತನ್ನನ್ನು ತಾನು ತೊಡಗಿಸಿಕೊಂಡ ಪರಿಣಾಮವಾಗಿ

ಆತನಲ್ಲಿ ಒಂದು ಬಗೆಯ ಶಿಸ್ತು ಮೂಡಲಾರಂಭಿಸಿತ್ತು. ಈ ಹಿಂದಿನಂತೆ ಮೊಬೈಲ್ ಬಳಸದ ಪರಿಣಾಮವಾಗಿ ಆತ ತನ್ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಂಡನು. ಹೆಚ್ಚಿನ ಜ್ಞಾನವನ್ನು ಸಂಪಾದಿಸಲು ಪುಸ್ತಕಗಳ ಮೊರೆ ಹೋದ.

ತಂದೆಗೆ ಕೃಷಿ ಕೆಲಸದಲ್ಲಿ ಸಹಾಯ ತಾಯಿಗೆ ಮನೆ ಕೆಲಸದಲ್ಲಿ ಸಹಭಾಗಿತ್ವ ಹಾಗೂ ಪುಟ್ಟ ಸೋದರನಿಗೆ

ಆತನ ಓದಿನಲ್ಲಿ ನೆರವನ್ನು ನೀಡುವ ಮೂಲಕ ಮನೆಯವರ ಮೆಚ್ಚುಗೆಗೆ ಪಾತ್ರನಾದ. ಮೂರು ನಾಲ್ಕು ವಾರ ಕಳೆಯುವಷ್ಟರಲ್ಲಿ ಆತನಲ್ಲಿ ಉಂಟಾದ ಈ ಬದಲಾವಣೆಯ ಬೆಳವಣಿಗೆ ಗ್ರಾಮದ ಜನರಲ್ಲಿ ಕೂಡ ಅಚ್ಚರಿಯನ್ನುಂಟು ಮಾಡಿತು. ಎಲ್ಲರೂ ಆತನನ್ನು ಪ್ರಶಂಸಿಸಲು ಆರಂಭಿಸಿದರು. ಇದ್ದರೆ ಇಂಥ ಮಗನಿರಬೇಕು ಎಂದು ಹೇಳತೊಡಗಿದರು.

ಎರಡು ತಿಂಗಳು ಕಳೆಯುವಷ್ಟರಲ್ಲಿ ಆ ಊರಿಗೆ ಬಂದ ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿಗಳು ಪದವೀಧರ ವಿದ್ಯಾರ್ಥಿಗಳಿಗೆ ನೌಕರಿ ಕೊಡುವ ನಿಟ್ಟಿನಲ್ಲಿ ಅವರನ್ನು ಸಂದರ್ಶನ ಮಾಡಲು ಆರಂಭಿಸಿದರು. ತಾನು ಕೂಡ ಅವರ ಸಂದರ್ಶನದಲ್ಲಿ ಪಾಲ್ಗೊಂಡ ಸಂದೀಪ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ಉತ್ತರಿಸಿ ಅತ್ಯುನ್ನತ ಅಂಕಗಳೊಂದಿಗೆ ಪಾಸಾದ.... ಹತ್ತಿರದ ಪಟ್ಟಣದಲ್ಲಿ 5 ಅಂಕಿಯ ಸಂಬಳದ ನೌಕರಿ, ವಾಸಕ್ಕೆ ಮನೆ ಹಾಗೂ ಮತ್ತಿತರ ಸೌಲಭ್ಯಗಳನ್ನು ಹೊಂದಿದ ನೌಕರಿ ಆತನ ಕೈ ಸೇರಿತ್ತು. ಗ್ರಾಮದ ಎಲ್ಲರೂ ಆತನ ಅದೃಷ್ಟವನ್ನು ಹೊಗಳುವವರೇ.

ಇನ್ನೇನು ನಾಳೆ ನೌಕರಿಗೆ ಹೋಗಿ ಸೇರಿಕೊಳ್ಳಬೇಕು ಎಂಬ ಹೊತ್ತಿನಲ್ಲಿ ಆತ ಗುರುಗಳ ಬಳಿ ಹೋದ ಈಗಾಗಲೇ ಗ್ರಾಮದ ಎಲ್ಲ ವಿಷಯಗಳು ಗುರುಗಳಿಗೆ ಅರಿವಾಗಿತ್ತು. ತಮಗೆ ನಮಸ್ಕರಿಸಿದ ಸಂದೀಪನ ಬೆನ್ನನ್ನು ತಟ್ಟಿದ ಅವರು ಆತನನ್ನು ಬಾಚಿ ತಬ್ಬಿಕೊಂಡರು. ಸಂದೀಪನ ಕಣ್ಣುಗಳಲ್ಲಿ ನೀರಿನ ಪಸೆಯಿತು ಆದರೆ ಮುಖದಲ್ಲಿ ಗುರುಗಳ ಕುರಿತ ಗೌರವ ಭಾವ. ಅತ್ಯಂತ ನಮ್ರನಾಗಿ ನಾನು ನನ್ನ ಬದುಕಿನಲ್ಲಿ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಲು

ಸಲಹೆ ನೀಡಿ ಅದನ್ನು ಪಾಲಿಸಲು ಪ್ರೋತ್ಸಾಹಿಸಿದ ತಾನೇ ಇಂದಿನ ನನ್ನ ಈ ಯಶಸ್ವಿಗೆ ಕಾರಣ ಎಂದು ಅತ್ಯಂತ ಕೃತಜ್ಞತೆಯಿಂದ ಹೇಳಿದ.

ವಿಷಯ ಅದಲ್ಲ... ಸಲಹೆ ನೀಡಿದ್ದು ನಾನೇ ಆದರೂ ಅದನ್ನು ನಿರಂತರವಾಗಿ ನಿನ್ನ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡು ಹಂತ ಹಂತವಾಗಿ ಯಶಸ್ವಿಯಾದ ನೀನು. ನಿಜವಾಗಿ ಈ ಉದ್ಯೋಗಕ್ಕೆ ಅರ್ಹನಾದ ವ್ಯಕ್ತಿ. ಒಂದು ಹಂತದವರೆಗೆ ಮಾತ್ರ ನಿನ್ನ ಪಾಲಕರು ಗುರುಗಳು




ಮತ್ತು ಬದುಕು ನಿನ್ನನ್ನು ಕೈ ಹಿಡಿದು ನಡೆಸುತ್ತದೆ ನಂತರ ನಿನ್ನನ್ನು ನಡೆಸುವುದು ನೀನು ರೂಡಿಸಿಕೊಂಡ ಹವ್ಯಾಸಗಳು ಹಾಗೂ ನಿನ್ನ ಕೆಲಸದಲ್ಲಿನ ಶ್ರದ್ಧೆಯ ಭಾವ ಎಂದು ಗುರುಗಳು ಆತನನ್ನು ಶ್ಲಾಘಿಸಿದರು.

ನೋಡಿದಿರಾ ಸ್ನೇಹಿತರೆ ? ನೋಡಲು ಅತ್ಯಂತ ಪುಟ್ಟ ಕೆಲಸಗಳು ಎನಿಸಿದರೂ ದೈನಂದಿನ ಒಳ್ಳೆಯ ಹವ್ಯಾಸಗಳು ನಮ್ಮಲ್ಲಿ ಗಟ್ಟಿಯಾದ ವ್ಯಕ್ತಿತ್ವವನ್ನು ಬೆಳೆಸಲು ಸಹಾಯಕವಾಗುತ್ತದೆ ಇಂತಹ ಗಟ್ಟಿಯಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡ ವ್ಯಕ್ತಿಯನ್ನು

ಬೇರಾರೂ ಸೋಲಿಸಲು ಸಾಧ್ಯವಿಲ್ಲ ಒಳ್ಳೆಯ ಹವ್ಯಾಸಗಳು ಹಂತ ಹಂತವಾಗಿ ನಮ್ಮನ್ನು ಉಳಿಸುತ್ತವೆ, ಬೆಳೆಸುತ್ತವೆ ಹಾಗೂ ಪೋಷಿಸುತ್ತವೆ.


ನಿರಂತರ ಚಟುವಟಿಕೆಗಳು ನಮ್ಮನ್ನು ಸದಾ ಕ್ರಿಯಾಶೀಲವಾಗಿಸಿ ಒಳ್ಳೆಯ ದಾರಿಯನ್ನು ತೋರಿಸಬೇಕು ಯಶಸ್ಸಿಗೆ ಮುನ್ನುಡಿಯನ್ನು ಬರೆಯುತ್ತವೆ..... ಏನಂತೀರಾ?

---



# ದುಬಾರೆ ಆನೆ... ಯಾರು ಹೊಣೆಗಾರರು?


ಡಾ.ಆರ್. ಶೈಲಜ ಶರ್ಮ ಬೆಂಗಳೂರು.



ಮಧ್ಯಾಹ್ನದ ವಿರಾಮದ ಸಮಯದಲ್ಲಿ ಸಹೋದರ ದಿನೇಶ್ ಮಲ್ಲರ ಫೋನ್ ಬಂದಾಗ ಶಾಕ್ ಮತ್ತು ಆಶ್ಚರ್ಯವಾಯಿತು. ಸಾಮಾನ್ಯವಾಗಿ ಬೆಳಿಗ್ಗೆ ಅಥವಾ ಸಂಜೆ ಫೋನ್ ಮಾಡೋದು ಇವರು. ಕುಶಾಲನಗರದ ದುಬಾರೆ ಪಕ್ಕದ ಅಮಂಗಲಗ್ರಾಮ ಇವರದು. ಆನೆಗಳ ವಿಚಾರ ಏನೇ ಇದ್ದರೂ ಮೊದಲು ಹೇಳಿಬಿಡುತ್ತಾರೆ. ಆನೆಗಳೆಂದರೆ ಅತೀ ಪ್ರೀತಿ ನನಗೆ.

ದುಬಾರೆ ನ್ಯೂಸ್ ನೋಡಿದ್ರಾ ಅಂತ ಕೇಳಿದ ಏನು ವಿಶೇಷ ಇದೆ, ನ್ಯೂಸ್ ನಲ್ಲಿ ದುಬಾರೆ ಸುದ್ದಿ ಏನೂ ಇಲ್ಲ ಬರಿ ಅಕ್ರಮ ಚರ್ಚ್ ಕಟ್ಟಡದ ವಿಚಾರ ಅಷ್ಟೇ ಎಂದೆ. ಅಯ್ಯೋ ನೋಡಿ ಇಲ್ಲಿ ಎರಡು ಆನೆ ಜಗಳದಲ್ಲಿ ಒಬ್ಬರು ಸತ್ತು ಹೋಗಿದ್ದಾರೆ ಎಂದು ಹೇಳಿದ. ಅದು ಕೇಳಿ ನಿಜಕ್ಕೂ ಶಾಕ್ ಮತ್ತು ಬೇಸರ ಆಯ್ತು. ಆನೆಯ ಸುತ್ತಮುತ್ತ ಹತ್ತಾರು ಜನಗಳು ಇದ್ದಾರೆ. ಜಗಳ ಆಡ್ತಾ ಇರೋ ಆನೆಗಳ ಪಕ್ಕದಲ್ಲಿ ಮಗುನ ಎತ್ಕೊಂಡು ಒಬ್ಬರು ಆನೆ ಕೆಳಗೆ ಬಿದ್ದವರನ್ನ ಎಳಿತಿದ್ದಾರೆ. ಅವರ ಕುಟುಂಬದವರು ಇರಬೇಕು.

ಇಂತಹ ಸಂದರ್ಭದಲ್ಲಿ ಎಚ್ಚರಿಕೆ ತುಂಬಾ ಅತ್ಯಗತ್ಯ ಅಲ್ವಾ? ಅಕಸ್ಮಾತ್ತಾಗಿ ಆ ಆನೆಗಳು ಆ ವ್ಯಕ್ತಿಗೆ ಏನಾದರೂ ಮಾಡಿದ್ರೆ ಮಗುನೂ ಬೀಳ್ತಾ ಇತ್ತು. ಒಬ್ಬರನ್ನು ಕಾಪಾಡೋಕೆ ಹೋಗಿ ಇಬ್ಬರು ಕಷ್ಟಕ್ಕೆ ಸಿಲುಕುತ್ತಾ ಇದ್ದರು. ಇವರ ನೋವು, ಹತಾಶೆ ಒಂದು ಕಡೆ, ಸಹಾಯ ಸಿಗದಿರೋದು ಇನ್ನೊಂದು ಕಡೆ. ಆದರೆ ಇದರ ಹೊಣೆಗಾರಿಕೆ



ಯಾರದ್ದು...? ಎಲ್ಲರಿಗೂ ಜವಾಬ್ದಾರಿ ಇರಬೇಕು.

ಒಂದು ಆನೆ ಹತ್ತಿರ ಬಂದರೇನೇ ನಡುಕ, ಇನ್ನೂ ಮದವೇರಿದ ಅಥವಾ ಕೋಪಗೊಂಡ ಆನೆಗೆ ಸಿಕ್ಕರೆ ಬಿಡುತ್ತಾ... ಆನೆಯ ಕೋಪ ದೂರದಲ್ಲಿ ನೋಡಿ ಮೂರ್ಛೆ ಹೋದವರೂ ಇದಾರೆ. ಆನೆ ಮೇಲೆ ಕುಳಿತಿರೋ ಮಾವುತ ಸಣ್ಣ ಹುಡುಗನ ತರಹ ಕಾಣಿಸ್ತಾ ಇದಾನೆ. ಅವನ ಕೈಯಲ್ಲಿ ಆನೆನ ಕಂಟ್ರೋಲ್ ಮಾಡೋದಕ್ಕೆ ಆಗಲೇ ಇಲ್ಲ .

ರಜೆಯ ಮೋಜು ಮಸ್ತಿಗೆ ಬಂದವರು ದುಃಖದಲ್ಲಿ ಮುಳುಗಿದರು. ಇದಕ್ಕೆಲ್ಲ ಯಾರು ಹೊಣೆ, ಯಾರನ್ನು ದೂಷಿಸುವುದು. ಏನೇ ಪರಿಹಾರ ಕೊಟ್ಟರೂ ಜೀವ ಅಂತೂ ವಾಪಸ್ ಬರೋಲ್ಲ. ಆಗೋ ಅನಾಹುತಗಳನ್ನು ತಡೆಗಟ್ಟೋದು ಸಂಬಂಧಪಟ್ಟವರಿಂದ ಸಾಧ್ಯ. ಹಾಗೆಯೇ ಪ್ರವಾಸಿಗರೂ ಸಹ ಎಚ್ಚರಿಕೆಯಿಂದ ಇರೋದು ತುಂಬಾ ತುಂಬಾನೇ ಮುಖ್ಯವಾದ ಅಂಶ.

ಹಲವಾರು

ಕಣ್ಣೆದುರೇ ತುಂಬು ಜೀವ ಹೋಯಿತು. ಮಗುವಿಗೆ ತಾಯಿ ಇಲ್ಲವಾದರು. ಪುಟ್ಟ ಕಂದನ ಕಂಗಳಲ್ಲಿ ಭಯ, ಆನೆ ಎಂದರೆ ಬೆಚ್ಚಿಬೀಳುವಂತಾಯಿತು. ಇದಕ್ಕೆಲ್ಲ ಯಾರು ಹೊಣೆಗಾರರು. ಒಂದು ದಿನದ ಅಂತರದಲ್ಲಿ ಕಾದಾಟದಲ್ಲಿ ಕೋಪದ ಕಂಜನ್ ಆನೆಯ ತಿವಿತಕ್ಕೆ ಒಳಗಾದ ಜನ ಮೆಚ್ಚಿದ ಜಯಮಾರ್ತಾಂಡ ಮಕ್ನ ಆನೆ ಸಾವಿಗೀಡಾಗಿ ಹಲವರಲ್ಲಿ ಕಂಬನಿ ತರಿಸಿತು.

ಇತ್ತೀಚಿನ ದಿನಗಳಲ್ಲಿ ಪ್ರವಾಸಿ ತಾಣಗಳಲ್ಲಿ ಸಾಕಿರುವ ಅಥವಾ ಕಾಡಾನೆಯ ದಾಳಿ ಹೆಚ್ಚಾಗುತ್ತಿದೆ. ಇದಕ್ಕೆಲ್ಲ ಯಾರು ಹೊಣೆಗಾರರು. ಅರಣ್ಯ ಇಲಾಖೆಯವರೋ ಅಥವಾ ಪ್ರವಾಸಿಗರೋ ಹೇಳಿ. ಮೇಕೆದಾಟು ಬಳಿಯ ಸಂಗಮ ಸ್ಥಳದಲ್ಲಿ ನಡೆದ ಹಠಾತ್ ಕಾಡನೆ ದಾಳಿ ಮಾಸುವ ಮುನ್ನವೇ ದುಬಾರೆ ಶಿಬಿರದ ಆನೆಗಳ ಕಾದಾಟದಲ್ಲಿ ಒಂದು ಜೀವವೇ ಹೋಗಿದೆ. ಸಂಭ್ರಮದಲ್ಲಿ ರಜೆಯ ದಿನಗಳನ್ನು ಕಳೆಯಲು ಕುಟುಂಬದೊಂದಿಗೆ ಬಂದ ಮಹಿಳೆ ಸಾವಿಗೀಡಾದ ಹೃದಯ ವಿದ್ರಾವಕ ಘಟನೆ ಹಲವರಲ್ಲಿ ಭಯ ಮೂಡಿಸಿ ಮೂಕರನ್ನಾಗಿಸಿದೆ. ದೇವರು ಸನ್ನಿಧಾನಕ್ಕೆ ಹೊರಟವರೊಂದಿಗಿದ್ದ ಮಗನನ್ನು ಚಿರತೆ ಎಳೆದು ಕೊಂಡು ಹೋಗಿದೆ. ಕ್ಷಣ ಮಾತ್ರದಲ್ಲಿ ನಡೆದ ಕಹಿ ಘಟನೆಗೆ ಕಾರಣರಾರು? ತಾಯಿಯ ಸಂಕಟಕ್ಕೆ ಕೊನೆ ಇಲ್ಲ.

ಸುರಕ್ಷತೆ ಇಲ್ಲದಿರುವುದು ಮುಖ್ಯ ಅಂಶವಾದರೂ, ಹಲವಾರು ಅಜಾಗರೂಕತೆಯೂ ಕಾಣುತ್ತದೆ. ಇದಕ್ಕೆಲ್ಲ ಸಂಬಂಧಪಟ್ಟವರು ಇನ್ನು ಮುಂದಾದರೂ ಎಲ್ಲಿಯೂ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ. ತಾತ್ಕಾಲಿಕ ಪರಿಹಾರ ಮಾಡದೆ. ಶಾಶ್ವತ ಪರಿಹಾರ ನೀಡುವಂತಾಗಲಿ.

ಪ್ರವಾಸ ಸಂತಸದಿ ಇರಲಿ... ದುಃಖ ತಾರದಿರಲಿ.

---

# ನಿಸ್ವಾರ್ಥ ಸೇವೆಯ ಸೇತುವೆ ಕಟ್ಟಿದ ಮಹಾತ್ಮ

ಡಾ.ಸುಧಾಕರ.ಜಿ.ಲಕ್ಕವಳ್ಳಿ




ಸ್ಫೂರ್ತಿ ಸುಧೆ - 25

ತಂತ್ರಜ್ಞಾನ ಎಷ್ಟೇ ಬೆಳೆಯಲಿ, ಮನುಷ್ಯನ ದೈಹಿಕ ಸಾಮರ್ಥ್ಯ ಮತ್ತು ಮನೋಬಲಕ್ಕೆ ಸಾಟಿಯಿಲ್ಲ ಎಂಬುದನ್ನು ಉತ್ತರಾಖಂಡದ ಯುವ ಮಲ್ಲ ಅಂಗದ್ ಬಿಸ್ಟ್ ಸಾಬೀತುಪಡಿಸಿದ್ದಾರೆ.

ಇತ್ತೀಚೆಗೆ ಚೀನಾದಲ್ಲಿ ನಡೆದ ಪ್ರತಿಷ್ಠಿತ ರೋಡ್ ಟು ಯುಎಫ್‌ಸಿ ಮಿಶ್ರ ಸಮರ ಕಲೆ (ಎಂ ಎಂ ಎ) ಸ್ಪರ್ಧೆಯಲ್ಲಿ ಚೀನಾದ ಪ್ರಬಲ ಎದುರಾಳಿಯನ್ನು ಮಣಿಸಿ ಭಾರತದ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ.

ರುದ್ರಪ್ರಯಾಗದ ಸಣ್ಣ ಹಳ್ಳಿಯಲ್ಲಿ ಜನಿಸಿದ ಅಂಗದ್ ಅವರ ಬದುಕಿನ ಪಯಣ ಸುಲಭವಾಗಿರಲಿಲ್ಲ. ಮನೆಯವರು ವೈದ್ಯರಾಗಬೇಕೆಂದು ಕನಸು ಕಂಡರೂ, ಸಮರಕಲೆಯ ಮೇಲಿನ ಆಸಕ್ತಿ ಅವರನ್ನು ಬೇರೆ ದಾರಿಯತ್ತ ಕರೆದೊಯ್ದಿತು.

ವೈದ್ಯಕೀಯ ಶಿಕ್ಷಣವನ್ನು ತೊರೆದು ದೆಹಲಿಗೆ ಬಂದ ಅವರು ಹಣದ ಕೊರತೆ, ಹಸಿವು ಮತ್ತು ಕಠಿಣ ಪರಿಸ್ಥಿತಿಗಳ ನಡುವೆಯೂ ನಿರಂತರ ಅಭ್ಯಾಸ ನಡೆಸಿದರು. ಅವರ ಪರಿಶ್ರಮವೇ ಇಂದು ಅವರನ್ನು ಅಂತರಾಷ್ಟ್ರೀಯ ಮಟ್ಟದ ಫೈಟರ್ ಆಗಿ ರೂಪಿಸಿದೆ.



ಚೀನಾದ ಮಣ್ಣಿನಲ್ಲಿ ಅಲ್ಲಿನ ಬೆಂಬಲ ಹೊಂದಿದ್ದ ಎದುರಾಳಿಯನ್ನು ಸೋಲಿಸುವುದು ಸಾಮಾನ್ಯ ಸಾಧನೆಯಲ್ಲ. ಇದು ಭಾರತೀಯ ಯುವಶಕ್ತಿಯ ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದ ಪ್ರತೀಕವಾಗಿದೆ. ಅಂಗದ್ ಅವರ ಗೆಲುವು ಹಳ್ಳಿಯ ಯುವಕರಿಗೂ ಜಾಗತಿಕ ವೇದಿಕೆಯಲ್ಲಿ ಸಾಧನೆ ಮಾಡುವ ಶಕ್ತಿ ಇದೆ ಎಂಬ ವಿಶ್ವಾಸ ಮೂಡಿಸಿದೆ.ಅಂಗದ್ ಬಿಸ್ಟ್ ಅವರ ಜೀವನಗಾಥೆ ನಮಗೆ ಒಂದು ಮಹತ್ವದ ಸಂದೇಶ ನೀಡುತ್ತದೆ ಸೌಲಭ್ಯಗಳಿಗಿಂತ ಸಂಕಲ್ಪವೇ ದೊಡ್ಡದು. ಸೋಲನ್ನು ಮೆಟ್ಟಿಲು ಮಾಡಿಕೊಂಡು ಮುನ್ನಡೆದರೆ ಜಗತ್ತಿನ ಯಾವುದೇ ಬಲವಾದ ಗೋಡೆಯನ್ನೂ ಭೇದಿಸಬಹುದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,